ಸಂಪುಟ: 06 ಸಂಚಿಕೆ: 207 ಪುಟಗಳು: 08 ಸೋಮವಾರ 12 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



ಯಾ ದೇವಿ ಸರ್ವ ಭೂತೇಷು
ಬ್ರಹ್ಮಚಾರಿಣಿ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

## ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆ ಮತ್ತೆ ಒಂದು ತಿಂಗಳ ಗಡುವು ವಿಸ್ತರಣೆ

• ಉದಯವಾಹಿನಿ, ಬೆಂಗಳೂರು

ಗೃಹಜ್ಯೋತಿ ಫಲಾನುಭವಿಗಳ ಪರಿಶೀಲನೆಗೆ ಮತ್ತೆ ಒಂದು ತಿಂಗಳ ಗಡುವು ವಿಸ್ತರಣೆ ಮಾಡಲಾಗಿದ್ದು, ಅ.31ರವರೆಗೆ ಅವಕಾಶ ನೀಡಲಾಗಿದೆ. ಜುಲೈ 1ರಿಂದ ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆಗೆ ಆರಂಭವಾಗಿತ್ತು. ಮೊದಲಿಗೆ ಒಂದು ತಿಂಗಳ ಕಾಲಾವಕಾಶ ನೀಡಲಾಗಿತ್ತು. ಅದಾದ ಬಳಿಕ ಮನೆ ಮಾಲೀಕರು ಮತ್ತು ಬಾಡಿಗೆದಾರರ ಹೆಚ್ಚುವರಿ ದಾಖಲೆ ಸಂಗ್ರಹ ಹಿನ್ನೆಲೆ ಗಡುವನ್ನು ವಿಸ್ತರಣೆ ಮಾಡಲಾಗಿತ್ತು. ಇದೀಗ ಮತ್ತೆ ಒಂದು ತಿಂಗಳ ಕಾಲ ಸಮಯ ವಿಸ್ತರಣೆ ಮಾಡಲಾಗಿದೆ. ಈ ಮೂಲಕ ಮರುಪರಿಶೀಲನೆಗೆ ಒಟ್ಟು ನಾಲ್ಕು ತಿಂಗಳ ಕಾಲಾವಕಾಶ ನೀಡಿದಂತಾಗಿದೆ. ಸದ್ಯ ಮನೆ ಮಾಲೀಕರು ಮತ್ತು ಬಾಡಿಗೆದಾರರ ಹೆಚ್ಚುವರಿ ದಾಖಲೆ ಸಂಗ್ರಹಕ್ಕೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆ ಸಿಬ್ಬಂದಿ ಮನೆಮನೆಗೆ ಭೇಟಿ ನೀಡುತ್ತಿದ್ದು, ವಿದ್ಯುತ್ ಸರಬರಾಜು ಕಂಪನಿಗಳ ಮೀಟರ್ ರೀಡರ್‌ಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ. ಫಲಾನುಭವಿಗಳ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ ವಿವರ, ಅರ್ಜಿದಾರರ ಭಾವಚಿತ್ರ, ಪ್ರವರ್ಗ, ಆದಾಯ ತೆರಿಗೆ ಪಾವತಿ ಮತ್ತು ವೃತ್ತಿ ಮಾಹಿತಿ ಪರಿಶೀಲನೆ, ಮನೆಗೆ ಬೀಗ, ಮನೆ ಖಾಲಿ, ಮಾಹಿತಿ ಲಭ್ಯವಿಲ್ಲದ ಪ್ರಕರಣಗಳ ಮರುಪರಿಶೀಲನೆ ಮಾಡುತ್ತಿದ್ದಾರೆ. ಮಾಹಿತಿ ನೀಡಲು ನಿರಾಕರಿಸಿದ ಪ್ರಕರಣಗಳ ಸ್ಥಳ ಪರಿಶೀಲನೆಗೂ ಸೂಚನೆ ನೀಡಲಾಗಿದ್ದು, ಶಾಶ್ವತವಾಗಿ ವಿದ್ಯುತ್ ಸಂಪರ್ಕ ಕಡಿತಗೊಂಡಿರುವ ಸ್ಥಾವರಗಳ ಪರಿಶೀಲನೆ ಮಾಡಲಾಗುತ್ತಿದೆ. ಜಕಾತಿ ಬದಲಾವಣೆ ಹಾಗೂ ಮೇಲ್ಛಾವಣಿ ಸೌರ ವಿದ್ಯುತ್ ಹೊಂದಿರುವ ಮನೆಗಳ ಮಾಹಿತಿಯೂ ಪರಿಶೀಲನೆಗೆ ಒಳಪಡಲಿದೆ.

## ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆ

• ಉದಯವಾಹಿನಿ, ಬೆಂಗಳೂರು

ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ನಡೆದ ಕೋರ್ ಕಮಿಟಿ ಸಭೆಯಲ್ಲಿ ಹಲವು ಮಹತ್ವದ ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಹಿರಿಯೂರು ವಿಧಾನಸಭಾ ಉಪಚುನಾವಣೆ ಹಿನ್ನೆಲೆ ಬಿಜೆಪಿಯಿಂದಲೇ ಅಭ್ಯರ್ಥಿ ಕಣಕ್ಕಿಳಿಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಗಿದೆ. ಮಿತ್ರ ಪಕ್ಷ ಜೆಡಿಎಸ್ ವಿಶ್ವಾಸದೊಂದಿಗೆ ಬಿಜೆಪಿ ಅಭ್ಯರ್ಥಿ ಸ್ಪರ್ಧೆಯ ಸಾಧಕ ಬಾಧಕಗಳ ಬಗ್ಗೆ ನಾಯಕರು ಚರ್ಚಿಸಿದ್ದು, ಮೂರ್ನಾಲ್ಕು ಅಭ್ಯರ್ಥಿಗಳ ಸಂಭಾವ್ಯ ಪಟ್ಟಿ ಸಿದ್ಧಪಡಿಸುವ ಅಧಿಕಾರವನ್ನು ರಾಜ್ಯಾಧ್ಯಕ್ಷರಿಗೆ ಕೋರ್ ಕಮಿಟಿ ನೀಡಿದೆ. ಅಲ್ಲದೆ ಹಿರಿಯೂರು ಉಪಚುನಾವಣೆಗೆ ಸಂಬಂಧಿಸಿದಂತೆ ಸಮನ್ವಯ ಸಮಿತಿ ರಚಿಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಿದ್ದು, ಜಿ.ಪಂ.ಮತ್ತು ತಾ.ಪಂ. ಚುನಾವಣೆಗೆ ಪ್ರತಿ ಜಿಲ್ಲೆಗಳಿಗೂ ಉಸ್ತುವಾರಿಗಳು ಮತ್ತು ಚುನಾವಣಾ ನಿರ್ವಹಣಾ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಬಿಜೆಪಿಗೆ ಸ್ವಲ್ಪ ಹಿನ್ನಡೆಯಾಗಿದೆ ಎಂಬ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪವಾಗಿದ್ದು, ಹಿನ್ನಡೆಯಾಗಿರುವ ಕಡೆ ಹೆಚ್ಚು ಗಮನ ಹರಿಸಲು ನಿರ್ಧರಿಸಲಾಗಿದೆ. ಬಿಜೆಪಿ ಕಾರ್ಯಕರ್ತರ ಮೇಲೆ ಎಫ್‌ಐಆರ್ ಮುಂದುವರಿದರೆ ಎಸ್ಪಿ ಕಚೇರಿಗೆ ಮುತ್ತಿಗೆ ಹಾಕಲೂ ಸಭೆಯಲ್ಲಿ ತೀರ್ಮಾನಿಸಲಾಗಿದೆ.

## ಕರ್ನಾಟಕದಲ್ಲಿ ಫಿಲಾಟೇಲಿ ಪಾಸ್‌ಪೋರ್ಟ್ ಕ್ರೇಜ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಈಗ 'ಫಿಲಾಟೇಲಿ ಪಾಸ್‌ಪೋರ್ಟ್' ಹೊಸ ಕ್ರೇಜ್ ಸೃಷ್ಟಿಸಿದೆ. ಪ್ರವಾಸಿಗರಿಗೆ ಮತ್ತು ಅಂಚೆ ಚೀಟಿ ಸಂಗ್ರಹಕಾರರಿಗೆಂದೇ ಇಂಡಿಯಾ ಪೋಸ್ಟ್ ಡಿಪಾರ್ಟ್‌ಮೆಂಟ್ ಒಂದು ವಿಶೇಷ ಬುಕ್‌ಲೆಟ್ ಅನ್ನು ಪರಿಚಯಿಸಿದ್ದು, ಇದನ್ನು ಪಡೆಯಲು ಸಾರ್ವಜನಿಕರು ಮುಗಿಬಿದ್ದಿದ್ದಾರೆ. ಬೆಂಗಳೂರು ಪೋಸ್ಟ್ ಆಫೀಸ್ ಮುಂದೆ ಕಿಲೋಮೀಟರ್‌ಗಟ್ಟಲೆ ಕ್ಯೂ ಕಂಡುಬಂದಿದ್ದು, ರಾಜ್ಯದ ಮೂಲೆ ಮೂಲೆಗಳಿಂದ ಯುವಕ-ಯುವತಿಯರು ಆಗಮಿಸುತ್ತಿದ್ದಾರೆ. ಈ ವಿಶೇಷ ಪಾಸ್‌ಪೋರ್ಟ್ ಪಡೆಯಲು ಜನರು ಹಿಂದಿನ ರಾತ್ರಿ 10 ಗಂಟೆಯಿಂದಲೇ ಸರತಿ ಸಾಲಿನಲ್ಲಿ ನಿಲ್ಲುತ್ತಿರುವುದು ಈ ಕಲೆ ಹಾಗೂ ಪ್ರವಾಸೋದ್ಯಮದ ಮೇಲಿನ ಜನರ ಒಲವನ್ನು ತೋರಿಸುತ್ತದೆ. ನೋಡಲು ಅಸಲಿ ಪಾಸ್‌ಪೋರ್ಟ್‌ನಂತೆಯೇ ಕಾಣುವ ಈ ನೀಲಿ ಬಣ್ಣದ ಪುಟ್ಟ ಪುಸ್ತಕವು ಪ್ರವಾಸಿಗರಿಗೆ ಅತ್ಯಂತ ವಿಶಿಷ್ಟ ಅನುಭವ ನೀಡುತ್ತದೆ. ಕರ್ನಾಟಕದ ಪ್ರಮುಖ 100 ಪ್ರವಾಸಿ ತಾಣಗಳಿಗೆ ಭೇಟಿ ನೀಡಿದ ನೆನಪನ್ನು ಇದರಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

## ಬೇಸಿಗೆ ಆರಂಭಕ್ಕೂ ಮುನ್ನವೇ ನಗರದಲ್ಲಿ ನೀರಿನ ಅಭಾವ

• ಉದಯವಾಹಿನಿ, ಬೆಂಗಳೂರು

ಮಳೆ ಮಳೆ ಮಳೆ.. ಕರುನಾಡಿನ ಪಾಲಿಗೆ ಅಕ್ಷರಶಃ ಮರೀಚಿಕೆಯಾಗಿದೆ. ಕಳೆದ ವರ್ಷ ಈ ಹೊತ್ತಿಗೆ ಸಾಕಪ್ಪಾ ಸಾಕು ಮಳೆ ಸಹವಾಸ ಅಂತಿದ್ರು. ನದಿಗಳೆಲ್ಲಾ ಅಪಾಯದ ಮಟ್ಟ ಮೀರಿ ಹರೀತಿದ್ರೆ, ಜಲಾಶಯಗಳು ತುಂಬಿ ತುಳುಕ್ತಿದ್ವು. ಆದ್ರೆ, ಈ ಬಾರಿ ಒಣಗಿರೋ ಭೂಮಿಯ ದಾಹವೇ ತೀರ್ತಿಲ್ಲ. ಮುಕ್ಕಾಲು ಕರ್ನಾಟಕ ಒಣಗಿ ಹೋಗಿದೆ. ಎಲ್ಲಿ ನೋಡಿದ್ರೂ ಬರ ಭೀಕರ ತಾಂಡವವಾಡ್ತಿದೆ. ಈ ವರ್ಷ ಮಳೆ ಕೈಕೊಟ್ಟಿದ್ದರಿಂದ ಬೇಸಿಗೆಯಲ್ಲಿ ಪರಿಸ್ಥಿತಿ ಹೇಗಿರುತ್ತದೆ ಎಂದು ಊಹಿಸೋದು ಅಸಾಧ್ಯವಾಗಿದೆ. ಯಾಕಂದ್ರೆ, ಬೇಸಿಗೆ ಆರಂಭಕ್ಕೂ ಮುಂಚೆಯೇ ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ನೀರಿನ ಅಭಾವ ಉಂಟಾಗಿದ್ಯಾ ಅನ್ನೋ ಪ್ರಶ್ನೆ ಉದ್ಭವಿಸಿದೆ. ನಗರದ ಪುಲಕೇಶಿನಗರ ವಿ. ಕ್ಷೇತ್ರ ವ್ಯಾಪ್ತಿಯ ಮುನೇಶ್ವರ ನಗರದ 4ನೇ ಕ್ರಾಸ್‌ನಲ್ಲಿ ವಾರಕ್ಕೆ ಒಂದು ದಿನ, ಎರಡೇ ಗಂಟೆಗಳ ಕಾಲ ಮಾತ್ರ ಕಾವೇರಿ ನೀರು ಬರುತ್ತಿದೆ ಎಂಬ ಆರೋಪ ಕೇಳಿಬಂದಿದೆ. ನೀರಿಲ್ಲದೇ ನಿವಾಸಿಗಳ ಗೋಳು ಹೇಳತೀರದಾಗಿದೆ.

## ಮತದಾರರ ಹೆಸರನ್ನು ಕಿತ್ತುಹಾಕುವುದು ಅಮಾನವೀಯ ಕೃತ್ಯ, ಹೋರಾಟ ಮಾಡಿಯೇ ತೀರುತ್ತೇವೆ: ಸಿಎಂ ಡಿ.ಕೆ. ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ನೆಪದಲ್ಲಿ ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರ ಮತದಾನದ ಹಕ್ಕನ್ನು ಕಸಿಯುತ್ತಿರುವುದು ಅಮಾನವೀಯ ಕೃತ್ಯ. ಇದು ಪ್ರಜಾಪ್ರಭುತ್ವವಲ್ಲ. ಸರ್ವಾಧಿಕಾರಿ ಧೋರಣೆ.

ಇದರ ವಿರುದ್ಧ ನಾವು ಹೋರಾಟ ಮಾಡಿಯೇ ತೀರುತ್ತೇವೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು. ಸದಾಶಿವನಗರದ ನಿವಾಸದ ಬಳಿ ಮಾತನಾಡಿದ ಅವರು, ನಮ್ಮ ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದೆ. ಈ ದೇಶದ ಪ್ರತಿಯೊಬ್ಬ ಪ್ರಜೆಗೆ ಸಂವಿಧಾನ ನೀಡಿರುವ ಮತದಾನದ ಹಕ್ಕನ್ನು ರಕ್ಷಿಸುವುದು ನಮ್ಮ ಕರ್ತವ್ಯ. ಆ ಕೆಲಸವನ್ನು ನಾವು ಮಾಡುತ್ತೇವೆ.





ಕರ್ನಾಟಕದಲ್ಲಿ ಕೋಟ್ಯಂತರ ಮತದಾರರ ಹೆಸರನ್ನು ಡಿಲೀಟ್ ಮಾಡಲಾಗಿದೆ. ನಾನು ಒಬ್ಬ ಮುಖ್ಯಮಂತ್ರಿಯಾಗಿ ಈ ರಾಜ್ಯದ ಜನರ ಮತದಾನದ ಹಕ್ಕನ್ನು ರಕ್ಷಣೆ ಮಾಡುವುದು ನನ್ನ ಕರ್ತವ್ಯ. ಅದನ್ನು ಮಾಡುತ್ತೇನೆ ಎಂದರು. ದೇಶದ ಜನರ ದನಿಗೆ ಕೇಂದ್ರ ಸರ್ಕಾರ ಮನ್ನಣೆ ಕೊಡಬೇಕು. ಅವರ ಅಭಿಪ್ರಾಯ ಆಲಿಸಬೇಕು. ಚುನಾವಣಾ ಆಯೋಗವನ್ನು ಭೇಟಿ ಮಾಡಲು ಅವಕಾಶ ಕೊಡಬೇಕು.

### ಪ್ರಜಾಪ್ರಭುತ್ವದ ಮೇಲೆ ಕೇಂದ್ರ ಸರ್ಕಾರದ ದಾಳಿ

ದೇಶದಲ್ಲಿ ಪ್ರಜಾಪ್ರಭುತ್ವವಿದೆಯೇ ಅಥವಾ ತುರ್ತು ಪರಿಸ್ಥಿತಿಯಿದೆಯೇ ಎಂಬುದಕ್ಕೆ ಪ್ರಧಾನಮಂತ್ರಿಗಳು ರಾಷ್ಟ್ರದ ಜನತೆಗೆ ಉತ್ತರಿಸಬೇಕು. ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಪ್ರತಿಭಟಿಸುವ ಅವಕಾಶವಿದೆ. ಅದನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಸರ್ಕಾರದ ವಿರುದ್ಧ ದನಿ ಎತ್ತುವವರನ್ನು ಏಕಾಏಕಿ ವಿಮಾನದಲ್ಲೇ ಬಂಧಿಸುವುದು ಮತ್ತು ಪ್ರತಿನಿಧಿಗಳನ್ನು ವಶಕ್ಕೆ ಪಡೆಯುವುದು ಇಡೀ ದೇಶಕ್ಕೇ ಮಾಡುತ್ತಿರುವ ದೊಡ್ಡ ಅವಮಾನ. ವಿಶ್ವದಲ್ಲಿ ಭಾರತ ಎಂದರೆ ಪ್ರಜಾಪ್ರಭುತ್ವ ಎಂದು ಹೆಸರಾಗಿದೆ. ಈ ಹೆಸರಿಗೆ ಕೇಂದ್ರ ಸರ್ಕಾರ ಕಳಂಕ ತರುತ್ತಿದೆ ಎಂದು ಸಿಎಂ ವಾಗ್ದಾಳಿ ನಡೆಸಿದರು.

ಸರ್ಕಾರದ ಕಾರ್ಯವೈಖರಿಯ ಬಗ್ಗೆ ಟೀಕೆಗಳನ್ನು ಕೇಳಬೇಕು. ಅದನ್ನು ಬಿಟ್ಟು ಟೀಕಿಸುವವರನ್ನು ಬಂಧಿಸುವುದು ಸರಿಯಲ್ಲ ಎಂದರು.

ಎಸ್‌ಐಆರ್ ಅಕ್ರಮಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷ ಇತರೇ ಹೋರಾಟಗಾರರ ಜೊತೆ ಕೈ ಜೋಡಿಸಿದೆಯೇ ಎನ್ನುವ ಪ್ರಶ್ನೆಗೆ, ನಾವು ಯಾರ ಜೊತೆ ಸೇರಿ ಪ್ರತಿಭಟನೆ ಮಾಡುತ್ತಿಲ್ಲ. ಆದರೆ, ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ನಮ್ಮ ಕಾಂಗ್ರೆಸ್ ಪಕ್ಷ ತನ್ನದೇ ಆದ ಹಾದಿಯಲ್ಲಿ ಮತದಾರರ ಹಕ್ಕನ್ನು ಉಳಿಸಲು ಪ್ರಯತ್ನ ಪಡುತ್ತಿದೆ. 'ಇಂಡಿಯಾ ಒಕ್ಕೂಟ' ಪ್ರತಿಭಟನೆ ಮಾಡಲಿದೆ. ನಾನೂ ಕೂಡ ಅದರಲ್ಲಿ ಭಾಗವಹಿಸುತ್ತಿದ್ದೇನೆ. ದೇಶದ ಪ್ರತಿಯೊಬ್ಬ ನಾಗರಿಕರ ಮತದಾನದ ಹಕ್ಕನ್ನು ಉಳಿಸುವುದು ನಮ್ಮ ಜವಾಬ್ದಾರಿ ಎಂದು ಸಿಎಂ ಉತ್ತರಿಸಿದರು.

# ಸಮಾನತೆಯ ಸಂಗಮ ದಸಾರಾ ಸಂಭ್ರಮ



### ಶಿಕ್ಷಣದ ಅಭಿವೃದ್ಧಿಗೆ ಎಲ್ಲರೂ ಕೈಜೋಡಿಸಬೇಕು

**ಮೈಸೂರು ದಸರಾಗೆ ಚಾಲನೆ ನೀಡಿದ ಕೊಪ್ಪಳ ಗವಿಶ್ರೀಗಳು**

ಹಣ್ಣು ಮಾರಾಟ ಮಾಡುತ್ತಲೇ ಶಾಲೆ ನಿರ್ಮಿಸಿ ಮಕ್ಕಳ ಶಿಕ್ಷಣಕ್ಕೆ ನೆರವಾದ ಹರೇಕಳ ಹಾಜಬ್ಬ ಅವರ ಸಾಧನೆಯನ್ನು ಸ್ಮರಿಸಿದ ಶ್ರೀಗಳು, ಅವರಿಂದ ಪ್ರೇರಣೆ ಪಡೆದು ಪ್ರತಿಯೊಬ್ಬರೂ ತಮ್ಮ ಊರಿನ ಶಾಲೆಗಳ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಶಿಕ್ಷಣದ ಬೆಳವಣಿಗೆಯೇ ಸಮಾಜದ ಪ್ರಗತಿಗೆ ಭದ್ರ ಬುನಾದಿಯಾಗಿದೆ ಎಂದರು. ಮೈಸೂರು ದಸರಾ ಕೇವಲ ಉತ್ಸವವಲ್ಲ. ಅದು ನಾಡಿನ ಸಂಸ್ಕೃತಿ, ಪರಂಪರೆ, ಮಾನವೀಯತೆ ಮತ್ತು ಸಾಮರಸ್ಯದ ಸಂಕೇತವಾಗಿದೆ. ರೈತರ ಬದುಕು ಹಸನಾಗಬೇಕು, ಪರಿಸರ ಸಂರಕ್ಷಿಸಲ್ಪಡಬೇಕು, ಶಿಕ್ಷಣ ಎಲ್ಲರಿಗೂ ದೊರೆಯಬೇಕು ಹಾಗೂ ಸಮಾಜದಲ್ಲಿ ಪ್ರೀತಿ ಮತ್ತು ಸಹಬಾಳ್ವೆ ಬೆಳೆಯಬೇಕು. ಕರ್ನಾಟಕದ ಅಭಿವೃದ್ಧಿಗೆ ಪ್ರತಿಯೊಬ್ಬರೂ ತಮ್ಮದೇ ಆದ ಕೊಡುಗೆ ನೀಡುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಮೈಸೂರು ದಸರಾ ಕೇವಲ ಧಾರ್ಮಿಕ ಆಚರಣೆಯಲ್ಲ. ಇದು ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಸಾಮರಸ್ಯವನ್ನು ಪ್ರತಿಬಿಂಬಿಸುವ ಜನರ ಹಬ್ಬವಾಗಿದೆ.

ಎಲ್ಲಾ ಸಮುದಾಯಗಳ ಜನರು ಒಗ್ಗಟ್ಟಿನಿಂದ ಪಾಲ್ಗೊಳ್ಳುವ ಈ ಮಹೋತ್ಸವವು ಶಾಂತಿ, ಸಹಬಾಳ್ವೆ ಮತ್ತು ಮಾನವೀಯತೆಯ ಸಂದೇಶವನ್ನು ಸಾರುತ್ತದೆ ಎಂದರು.ಮೈಸೂರು ದಸರಾ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೂಜ್ಯ ಸ್ವಾಮೀಜಿಗಳು ಹಾಗೂ ಧರ್ಮಗುರುಗಳ ಮಾರ್ಗದರ್ಶನ ಸಮಾಜದಲ್ಲಿ ಶಾಂತಿ, ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಲು ನೆರವಾಗುತ್ತದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಮಠಗಳು ಮತ್ತು ಧರ್ಮಗುರುಗಳ ಕೊಡುಗೆ ಮಹತ್ವದ್ದಾಗಿದೆ ಎಂದು ತಿಳಿಸಿದ್ದಾರೆ.

### ಶ್ರೀಗಳ ಸಹಜ ವೈರಾಗ್ಯ ಮತ್ತು ಸರಳತೆ

ಕೊಪ್ಪಳದ ಗವಿಮಠದ ಪೀಠಾಧಿಪತಿಗಳಾದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರು ಎಂದಿಗೂ ಪ್ರಚಾರ, ಪ್ರಶಸ್ತಿ, ಹಾರ-ತುರಾಯಿ ಹಾಗೂ ಸನ್ಮಾನಗಳಿಂದ ದೂರವಿರುವವರು. ಲಕ್ಷಾಂತರ ಜನರು ಸೇರುವ ಕೊಪ್ಪಳದ ಐತಿಹಾಸಿಕ ಗವಿಮಠದ ಜಾತ್ರಾ ಮಹೋತ್ಸವದಲ್ಲೂ ಕೂಡ ಶ್ರೀಗಳು ತಮಗೆ ಯಾವುದೇ ವೈಯಕ್ತಿಕ ಸನ್ಮಾನವಾಗಲಿ, ಹಾರ-ಶಾಲುಗಳಾಗಲಿ ಹಾಕದಂತೆ ಭಕ್ತರಿಗೆ ಕಟ್ಟುನಿಟ್ಟಿನ ಮನವಿ ಮಾಡುತ್ತಾ ಬಂದಿದ್ದಾರೆ. ವೈಭವದ ಸತ್ಕಾರಗಳಿಗಿಂತ ಜನಸೇವೆ, ಅನ್ನದಾಸೋಹ ಹಾಗೂ ಜ್ಞಾನದಾಸೋಹಕ್ಕೆ ಅವರು ಸದಾ ಆದ್ಯತೆ ನೀಡುತ್ತಾರೆ.ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ವೇದಿಕೆಗಳಲ್ಲಿ ರಾಜಕಾರಣಿಗಳು, ಮುಖಂಡರು ಸನ್ಮಾನ ಮತ್ತು ಫೋಟೋಗಳಿಗೆ ಮುಗಿಬೀಳುವ ದೃಶ್ಯಗಳು ಸಾಮಾನ್ಯವಾಗುತ್ತಿರುವಾಗ, ರಾಜ್ಯದ ಅತ್ಯುನ್ನತ ಹಾಗೂ ಜಗತ್‌ಪ್ರಸಿದ್ಧ ವೇದಿಕೆಯಲ್ಲೂ ಸನ್ಮಾನದಿಂದ ದೂರ ಸರಿದ ಗವಿಶ್ರೀಗಳ ನುಡಿಗೆ ಗಣ್ಯರು ಹಾಗೂ ಸಹಸ್ರಾರು ಭಕ್ತ ಸಮೂಹವನ್ನು ಮೂಕವಿಸ್ಮಿತರನ್ನಾಗಿಸಿತು.

## ರತ್ನ ಖಚಿತ ಸಿಂಹಾಸನಕ್ಕೆ ಯದುವೀರ್ ಒಡೆಯರ್ ಪೂಜೆ



ಅರಮನೆಯ ರಾಜವಂಶಸ್ಥರ ಖಾಸಗಿ ನವರಾತ್ರಿ ಉತ್ಸವಗಳು ಆರಂಭವಾಗಿವೆ. ಮೊದಲ ದಿನ ರಾಜವಂಶಸ್ಥ ಯದುವೀರ್ ಒಡೆಯರ್ ಅವರಿಂದ ಧಾರ್ಮಿಕ ಪೂಜಾ ವಿಧಿವಿಧಾನಗಳು ಹಾಗೂ ರತ್ನಖಚಿತ ಸಿಂಹಾಸನಕ್ಕೆ ಪೂಜೆಯ ಜೊತೆಗೆ ಖಾಸಗಿ ದರ್ಬಾರ್ ಸಹ ನಡೆಯಿತು. ಒಂದು ಕಡೆ ಸರ್ಕಾರದ ಅದ್ದೂರಿ ದಸರಾಕ್ಕೆ ಚಾಮುಂಡಿ ಬೆಟ್ಟದಲ್ಲಿ ಚಾಲನೆ ದೊರೆಯಿತು. ಮತ್ತೊಂದು ಕಡೆ ಅರಮನೆಯ ರಾಜವಂಶಸ್ಥರ ಖಾಸಗಿ ನವರಾತ್ರಿ ಉತ್ಸವ ಆರಂಭವಾಗಿದ್ದು, ಅರಮನೆಯಲ್ಲಿ ನವರಾತ್ರಿಯ ಮೊದಲ ದಿನ ಧಾರ್ಮಿಕ ಪೂಜಾ ವಿಧಿವಿಧಾನಗಳನ್ನು ರಾಜವಂಶಸ್ಥ ಯದುವೀರ್ ಒಡೆಯರ್ ನೆರವೇರಿಸಿದ್ದಾರೆ. ಬೆಳಗ್ಗೆಯಿಂದಲೇ ರಾಜವಂಶಸ್ಥರ ನವರಾತ್ರಿ ಮೊದಲ ದಿನದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಿದ್ದು, ಬೆಳಗ್ಗೆ ಅರಮನೆಯಲ್ಲಿ ಗಣಪತಿ ಹೋಮ ಸೇರಿದಂತೆ ಹಲವು ಹೋಮಗಳು ನಡೆದವು. ಬಳಿಕ ಚಂಡಿಕಾ ಹೋಮದ ನಂತರ ಬೆಳಗ್ಗೆ 6 ರಿಂದ 7:12 ನಡುವೆ ನಿಮಿಷಕ್ಕೆ ರತ್ನಖಚಿತ ಸಿಂಹಾಸನಕ್ಕೆ ಸಿಂಹ ಜೋಡಣೆ ಆಯಿತು.

• ಉದಯವಾಹಿನಿ, ಬೆಂಗಳೂರು

ಮೈಸೂರು ಸಾಂಸ್ಕೃತಿಕ ನಗರಿ, ಅರಮನೆಗಳ ನಗರಿ, ಸ್ವಚ್ಛತೆ ಮತ್ತು ಶಿಸ್ತಿಗೆ ಹೆಸರಾದ ನಗರ. ಇಂತಹ ಐತಿಹಾಸಿಕ ನಗರದಲ್ಲಿ ನಡೆಯುವ ದಸರಾ ಮಹೋತ್ಸವದ ವೈಭವದ ಹಿಂದೆ ಸಾವಿರಾರು ಕಾಣದ ಕೈಗಳ ಪರಿಶ್ರಮವಿದೆ. ಒಂದು ಕಾಲದಲ್ಲಿ ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬವಾಗಿ ಜನಸಾಮಾನ್ಯರ ಉತ್ಸವವಾಗಿದೆ ಎಂದು ಅಭಿನವ ಶ್ರೀಗವಿಸಿದ್ದೇಶ್ವರ ಮಹಾಸ್ವಾಮೀಜಿ ತಿಳಿಸಿದ್ದಾರೆ.

2026ರ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ದಸರಾ ಉದ್ಘಾಟಿಸುವಷ್ಟು ದೊಡ್ಡವನಲ್ಲ. ಮಹಾನುಭಾವರು ಹಚ್ಚಿದ ದೀಪ ಆರದಿರಲಿ ಎಂಬ ಪ್ರಾರ್ಥನೆಯೊಂದಿಗೆ ಚಾಮುಂಡೇಶ್ವರಿಯ ಸನ್ನಿಧಿಗೆ ಬಂದಿದ್ದೇನೆ. ನಾಡಿನಲ್ಲಿ ಉತ್ತಮ ಮಳೆ-ಬೆಳೆಯಾಗಿ ರೈತರ ಮುಖದಲ್ಲಿ ನಗು ಮೂಡಲಿ, ಜನರು ಸುಖ-ಶಾಂತಿಯಿಂದ ಬದುಕಲಿ ಎಂದು ತಾಯಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ.

**ಜಾತಿಗಿಂತ ನೀತಿ ಮುಖ್ಯ:** ಮೈಸೂರಿನ ದಸರಾ ಭೂತ, ವರ್ತಮಾನ ಮತ್ತು ಭವಿಷ್ಯಗಳ ತ್ರಿವೇಣಿ ಸಂಗಮವಾಗಿದೆ. ಜಾತಿಯನ್ನು ನೋಡಿ ಸಮಾಜವನ್ನು ಕಟ್ಟುವುದಕ್ಕಿಂತ ನೀತಿಯನ್ನು ಆಧಾರವಾಗಿಟ್ಟುಕೊಂಡು ಸಮಾಜವನ್ನು ನಿರ್ಮಿಸಬೇಕು. ಮನುಷ್ಯನನ್ನು ಮನುಷ್ಯನಂತೆ ಪ್ರೀತಿಸುವುದೇ ನಿಜವಾದ ಮಾನವ ಧರ್ಮ. ಬಸವಣ್ಣನವರು 12ನೇ ಶತಮಾನದಲ್ಲಿಯೇ ಸಾರಿದ ಕಾಯಕವೇ ಕೈಲಾಸ ಎಂಬ ತತ್ವ ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದೆ ಎಂದು ತಿಳಿಸಿದ್ದಾರೆ.

ಮೈಸೂರು ರಾಜಮನೆತನದ ಕೊಡುಗೆಯನ್ನು ಸ್ಮರಿಸಿದ ಶ್ರೀಗಳು, ಮೈಸೂರು ದಸರಾ ಪರಂಪರೆಯನ್ನು ರಾಜಮನೆತನದ ಇತಿಹಾಸದಿಂದ ಬೇರ್ಪಡಿಸಿ ನೋಡಲು ಸಾಧ್ಯವಿಲ್ಲ. ಶಿವನಸಮುದ್ರದಲ್ಲಿ ವಿದ್ಯುತ್ ಉತ್ಪಾದನೆಗೆ ಚಾಲನೆ ನೀಡಿದ ಹಾಗೂ ರೈತರ ಬದುಕು ಹಸನಾಗಲು ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡ ಮಹನೀಯರ ಕೊಡುಗೆ

### ದೊರೆಯ ಹಬ್ಬವಾಗಿದ್ದ ದಸರಾ ಇಂದು ಧರೆಯ ಹಬ್ಬ

ನಾಡಿನ ಪ್ರಗತಿಗೆ ಮಹತ್ವದ್ದಾಗಿದೆ. ರಾಣಿ ಕೆಂಪರಾಜಮ್ಮ ಅವರು ತಮ್ಮ ಆಭರಣಗಳನ್ನು ಒತ್ತೆಯಿಟ್ಟು ಅಣೆಕಟ್ಟು ನಿರ್ಮಾಣಕ್ಕೆ ನೆರವು ನೀಡಿದ ತ್ಯಾಗದ ಪರಂಪರೆ ನಮಗೆಲ್ಲ ಪ್ರೇರಣೆಯಾಗಿದೆ ಎಂದರು. ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ ಎಲ್ಲವನ್ನೂ ಡೌನ್‌ಲೋಡ್ ಮಾಡಬಹುದು ಆದರೆ ಅನ್ನ ಮತ್ತು ಸಾರನ್ನು ಡೌನ್‌ಲೋಡ್ ಮಾಡಲು ಸಾಧ್ಯವಿಲ್ಲ. ರೈತರು ಬೆಳೆದ ಬೆಳೆಗಳಿಂದಲೇ ನಮಗೆ ಆಹಾರ ದೊರೆಯುತ್ತದೆ.

ಹೀಗಾಗಿ ರೈತರ ಶ್ರಮವನ್ನು ಗೌರವಿಸಿ ಕೃಷಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಕಾವೇರಿ, ಕೃಷ್ಣೆ, ತುಂಗಭದ್ರೆಯಂತಹ ನದಿಗಳು ಬತ್ತಿಹೋದರೆ ಜನಜೀವನ ಸಂಕಷ್ಟಕ್ಕೆ ಸಿಲುಕುತ್ತದೆ. ಸರ್ಕಾರಗಳು ನದಿಗಳ ಸಂರಕ್ಷಣೆಗೆ ಆದ್ಯತೆ ನೀಡಬೇಕು. ನೆಲ, ಜಲ ಮತ್ತು ಪರಿಸರವನ್ನು ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ದೇವರ ಮುಂದೆ ಲಕ್ಷ ದೀಪಗಳನ್ನು ಹಚ್ಚುವುದರ ಜೊತೆಗೆ ಒಂದು ವೃಕ್ಷವನ್ನು ನೆಟ್ಟು ಬೆಳೆಸಿದರೆ ಅದು ಪ್ರಕೃತಿಗೆ ಸಲ್ಲಿಸುವ ನಿಜವಾದ ಸೇವೆಯಾಗುತ್ತದೆ ಎಂದು ಪರಿಸರ ಸಂರಕ್ಷಣೆಯ ಮಹತ್ವವನ್ನು ವಿವರಿಸಿದ್ದಾರೆ.

### ಭಕ್ತರ ಹಾಗೂ ಗಣ್ಯರ ಮೆಚ್ಚುಗೆ

ಶ್ರೀಗಳ ಈ ನಡೆಗೆ ವೇದಿಕೆಯಲ್ಲಿದ್ದ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ತಲೆದೂಗಿದ್ದಾರೆ. ಪ್ರಚಾರದ ಹಂಬಲವಿಲ್ಲದ, ಕಾಯಕ ಮತ್ತು ದಾಸೋಹವನ್ನೇ ಉಸಿರಾಗಿಸಿಕೊಂಡ ನಿಜವಾದ ಕಾಯಕಯೋಗಿಯ ನಡವಳಿಕೆ ಇದು ಎಂದು ಭಕ್ತರು ಸಾಮಾಜಿಕ ಜಾಲತಾಣಗಳಲ್ಲಿ ಶ್ಲಾಘಿಸುತ್ತಿದ್ದಾರೆ. ನಾಡಿನ ಸುಖ-ಶಾಂತಿಗಾಗಿ ಪ್ರಾರ್ಥಿಸಿದ ಶ್ರೀಗಳು, ಯಾವುದೇ ಆಡಂಬರವಿಲ್ಲದೆ ಕಾರ್ಯಕ್ರಮ ಪೂರೈಸಿ ತಮ್ಮ ಎಂದಿನ ಮೌನ, ಮುಗ್ಧತೆಯಿಂದಲೇ ಎಲ್ಲರ ಹೃದಯ ಗೆದ್ದರು.

# ಸ್ಟಿಂಗ್ ಆಪರೇಷನ್ ಮಾಡುವ ವ್ಯಕ್ತಿ ಜೊತೆ ಎಷ್ಟು ಹೊತ್ತು ಹೋಟೆಲ್‌ನಲ್ಲಿ ಕೂತಿದ್ರಿ: ಸಿಎಂಗೆ ಹೆಚ್‌ಡಿಕೆ ಪ್ರಶ್ನೆ

## ನನ್ನನ್ನೇ ಸ್ಟಿಂಗ್ ಮಾಡೋಕೆ ಬಂದಿದ್ರು ಅನ್ನೋದನ್ನು ಸಿಎಂ ಅವರೇ ಹೇಳಿದ್ದಾರೆ. ಕ್ಯಾಬಿನೆಟ್ ಸಭೆಯಲ್ಲಿ ಇದು ಚರ್ಚೆ

• ಉದಯವಾಹಿನಿ, ಬೆಂಗಳೂರು

ಮೌಂಟ್ ಕಾರ್ಮೆಲ್ ಕಾಲೇಜ್ ಬಳಿ ಇರುವ ಹೋಟೆಲ್‌ನಲ್ಲಿ ಸ್ಟಿಂಗ್ ಆಪರೇಷನ್ ಮಾಡುವ ವ್ಯಕ್ತಿಯ ಜೊತೆ ಎಷ್ಟು ಹೊತ್ತು ಕೂತಿದ್ರಿ?. ಸ್ಟಿಂಗ್ ಮಾಡೋ ಆ ವ್ಯಕ್ತಿ ಯಾರು? ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಪ್ರಶ್ನಿಸಿದ್ದಾರೆ. ಜೆ.ಪಿ.ಭವನದಲ್ಲಿ ಮಾತನಾಡಿದ ಅವರು, ನನ್ನನ್ನೇ ಸ್ಟಿಂಗ್ ಮಾಡೋಕೆ ಬಂದಿದ್ರು ಅನ್ನೋದನ್ನು ಸಿಎಂ ಅವರೇ ಹೇಳಿದ್ದಾರೆ. ಕ್ಯಾಬಿನೆಟ್ ಸಭೆಯಲ್ಲಿ ಇದು ಚರ್ಚೆ ಆಗಿದೆ ಅನ್ನೋದು ಸ್ಪಷ್ಟ ಆಗಿದೆ.

ಸಿಎಂ ಇಂಥದ್ದೊಂದು ಸಲಹೆ ಕೊಟ್ಟಿದ್ದಾರೆ ಎಂದು ಕೆಲ ಸಚಿವರೇ ಹೇಳಿಕೊಂಡಿದ್ದಾರೆ. ಮೌಂಟ್ ಕಾರ್ಮೆಲ್ ಕಾಲೇಜ್ ಬಳಿ ಇರುವ ಹೋಟೆಲ್‌ನಲ್ಲಿ ಸ್ಟಿಂಗ್ ಆಪರೇಷನ್ ಮಾಡೋ ವ್ಯಕ್ತಿ ಜೊತೆ ಎಷ್ಟು ಹೊತ್ತು ಕೂತಿದ್ರಿ?. ಸ್ಟಿಂಗ್ ಮಾಡೋ ಆ ವ್ಯಕ್ತಿ ಯಾರು?. ಅದನ್ನು ಜನರ ಮುಂದೆ ಇಡಬೇಕಲ್ವಾ?. ಉತ್ತರ ಭಾರತದವರು, ಕೇಂದ್ರ ಸಚಿವರು, ಬಿಜೆಪಿ ನಾಯಕರು ಅಂತ ಪೆನ್ ಡ್ರೈವ್‌ನಲ್ಲಿ ಇದೆ. ತೋರಿಸುತ್ತೇನೆ ಅಂದಿದ್ದಾರೆ. ಸಿಎಂ ಭೇಟಿ ಆದ ವ್ಯಕ್ತಿ ಯಾರು?. ಅವರು ಕೊಟ್ಟ ಫೈಲ್. ಭೇಟಿಯಾದ ಉದ್ದೇಶ ಏನು?. ಆ ವ್ಯಕ್ತಿ ಯಾರು? ಎಂಬುದನ್ನು ತಿಳಿಸಬೇಕು ಎಂದು ಆಗ್ರಹಿಸಿದ್ದಾರೆ. ನನ್ನ ಹತ್ತಿರ ಫೋಟೊ ಇದೆ. ಮಾಹಿತಿ ಇದೆ ಅಂದಿದ್ದಾರೆ ಸಿಎಂ. ಅದನ್ನು ರಾಜ್ಯದ ಜನರ ಮುಂದೆ





ಇಡಬೇಕಲ್ವಾ?. ಏನು ನಡೆಯುತ್ತಿದೆ ರಾಜ್ಯದಲ್ಲಿ?. ಕಾಂಗ್ರೆಸ್ ಹಿರಿಯ ಮುಖಂಡರ ಸ್ಟಿಂಗ್ ಆಪರೇಷನ್ ಆಗಿದೆ ಅಂದ್ರು. ಯಾರು ಆ ಕಾಂಗ್ರೆಸ್ ನಾಯಕರು. ಸಿಎಂಗೆ ಇದರ ಬಗ್ಗೆ ಗೊತ್ತಿಲ್ವಾ?. ನಮಗೆ ಸ್ಟಿಂಗ್ ಆಪರೇಷನ್ ಮಾಡಿ ಅಭ್ಯಾಸ ಇಲ್ಲ. ಸಿಎಂ ಅವರು ಸ್ಟಿಂಗ್ ಆಪರೇಷನ್ ಸಾಮ್ರಾಟ, ಮಹಾನಾಯಕ. ಸಿಎಂ ಆದ ಮೇಲೆ ಇದನ್ನು ನಿಲ್ಲಿಸ್ತಾರೆ ಅಂದುಕೊಂಡಿದ್ದೆ ಎಂದು ವಾಗ್ದಾಳಿ ನಡೆಸಿದರು. ಸಿಎಂ ಸ್ಥಾನದಲ್ಲಿ ಇರೋರನ್ನೇ ಬಿಟ್ಟಿಲ್ಲ. ಇನ್ನು ಯಾರನ್ನು ಬಿಡುತ್ತೀರಾ?. ಸಿದ್ದರಾಮಯ್ಯ ಬಗ್ಗೆ ಕುಮಾರಸ್ವಾಮಿಗೆ ಲವ್ ಬಂದು ಬಿಡ್ತಾ ಅಂತಾರೆ. ಅವರು ನಮ್ಮ ಪಕ್ಷದಲ್ಲಿ ಇದ್ರು. ನಮ್ಮ ನಾಯಕರು ಆಗಿದ್ರು. ಆ ಸ್ಟಿಂಗ್ ಆಪರೇಷನ್ ಮಾಡಿದ ವ್ಯಕ್ತಿ ಯಾರು?. ನೋಡಿಲ್ವಾ ನೀವು?. ಇದೆಲ್ಲಾ ಬೇಕಾ ಎಂದು ಕಿಡಿಕಾರಿದರು.

ವಿಜಯದಶಮಿ ನಂತರ ಹಲವಾರು ಬೆಳವಣಿಗೆ ಆಗುತ್ತದೆ ಅಂತ ಹೇಳಿದ್ದೆ. ಅದಕ್ಕಿಂತಲೂ ಮೊದಲೇ ಶುರುವಾಗಿದೆ. ರಾಜ್ಯದ ಮುಖ್ಯಮಂತ್ರಿಗೆ ಅಭಿನಂದಿಸುತ್ತೇನೆ. ಅವರಿಂದಲೇ ಶುರುವಾಯ್ತು. ಈಗ ದಸರಾ ಕಡೆ ಎಲ್ಲರ ಗಮನ ಇದೆ. ಇತ್ತೀಚೆಗೆ ನಡೆದಿರುವ ಸ್ಟಿಂಗ್ ಆಪರೇಷನ್ ಬಗ್ಗೆ ದೂರು ಕೊಡಲಿ. ತನಿಖೆ ಮಾಡುತ್ತೇವೆ ಎಂದು ಗೃಹ ಸಚಿವರು ಬಿಜೆಪಿ ನಾಯಕರಿಗೆ ಹೇಳಿದ್ದಾರೆ. ದೂರು ಇಲ್ಲದೆ ಪ್ರಕರಣಗಳಿಗೆ ತನಿಖೆ ಮಾಡಿಸಿಲ್ವಾ?. ಸೂಕ್ಷ್ಮ ವಿಚಾರಗಳು ಸಂಶಯ ಬರುವ ರೀತಿಯಲ್ಲಿ ಸಿಎಂ ಅವರೇ ವೇದಿಕೆ ಸಿದ್ಧ ಮಾಡಿದ್ದಾರೆ. ಕಳೆದ ವಾರ ಸಿಎಂ ಕ್ಯಾಬಿನೆಟ್‌ನಲ್ಲಿ ಪ್ರಮುಖ ವಿಚಾರ ಪ್ರಸ್ತಾಪ ಮಾಡಿದ್ದಾರೆ ಅನ್ನೋದು ಮಾಧ್ಯಮಗಳಲ್ಲಿ ಬಂದಿದೆ. ಎಚ್ಚರಿಕೆಯಿಂದ ಇರಿ ಮಾಹಿತಿ ಇದೆ ಅಂದಿದ್ದಾರೆ. ಸ್ಟಿಂಗ್ ಆಪರೇಷನ್ ಮಾಹಿತಿಯ ಫೈಲ್ ಇಟ್ಟುಕೊಂಡಿದ್ದನ್ನು ತೋರಿಸಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ಯಾರಿಗೆ ಸ್ಟಿಂಗ್ ಮಾಡಬೇಕು ಅಂತ ಸೂಚನೆ ಕೊಡುತ್ತೀರಿ?. ದೂರು ಕೊಡಿಸಬೇಕು ಅಂದ್ರೆ ದೂರು ಕೊಡಿಸುತ್ತೇವೆ. ಇಷ್ಟಕ್ಕೆ ಸುಮ್ಮನೆ ಬಿಡುತ್ತೇವಾ?. ಯಾರು ಆ ಐದು ಸಚಿವರು?. ಐದು ಜನ ಸ್ಟಿಂಗ್ ಆದವರನ್ನು ಏಕೆ ಮಂತ್ರಿಮಂಡಲದಲ್ಲಿ ಇಟ್ಟುಕೊಂಡಿದ್ದೀರಾ? ಎಂದು ವಾಗ್ದಾಳಿ ನಡೆಸಿದರು.

### ಇತಿಮಿತಿಯಲ್ಲಿ ಕೆಲಸ ಮಾಡಬೇಕು ಅಷ್ಟೆ

ಹಾಸನ ಡಿಸಿ ಟ್ವೀಟ್ ವಿಚಾರವಾಗಿ ಪ್ರತಿಕ್ರಿಯಿಸಿ, ಈ ಸರ್ಕಾರದಲ್ಲಿ ಎಂತವರಿಗೆ ರಕ್ಷಣೆ ಕೊಡುತ್ತಿದ್ದಾರೆ?. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಎಇಇ ನೇಮಕಾತಿಯಲ್ಲಿ ಕೋರ್ಟ್‌ನಲ್ಲಿ ಏನ್ರಿ ಕೊಟ್ಟಿದ್ದೀರಿ?. ಈ ಹೆಣ್ಣು ಮಗಳನ್ನು ರಜಾದ ಮೇಲೆ ಕಳಿಸಿದ್ದೇವೆ. ಸಸ್ಪೆಂಡ್ ಮಾಡ್ತಿದ್ದೇವೆ. ಕೋರ್ಟ್‌ನಲ್ಲಿ ಅಫಿಡವಿಟ್ ಹಾಕ್ತಾರೆ. ಈ ಹೆಣ್ಣು ಮಗಳು ನಮಗೆ ಬುದ್ಧಿ ಹೇಳ್ತಾರಾ ಎಂದು ಖಾರವಾಗಿ ಪ್ರಶ್ನಿಸಿದರು. ಗೌರವ ಕೊಟ್ಟು ಮಾತಾಡಿದ್ದೇನೆ. ಎಚ್ಚರಿಕೆ ಇರಲಿ. ನಾನು ಸುಮ್ಮನೆ ಮಾತನಾಡುವುದಿಲ್ಲ. ಒಬ್ಬ ಎಸ್‌ಪಿಗೆ ನೋಟಿಸ್ ಕೊಡ್ತಾರೆ ಈ ಹೆಣ್ಣು ಮಗಳು. ಆ ಎಸ್‌ಪಿ ಕೂಡ ಹೆಣ್ಣು ಮಗಳು. ಇವರೇನು ಪಾಳೆಗಾರರಾ?. ಡಿಸಿಗೆ ಏನು ಕೊಂಬು ಇದ್ಯಾ..?. ಇತಿಮಿತಿಯಲ್ಲಿ ಕೆಲಸ ಮಾಡಬೇಕು. ದುರಂಹಕಾರದಲ್ಲಿ ಎಲ್ಲಿ ತಪ್ಪು ಮಾಡಿದ್ದೇನೆ ಅನ್ನೋದು ಅರ್ಥ ಮಾಡಿಕೊಳ್ಳಬೇಕು. ಯಾರು ಆ ಡಿಸಿಗೆ ಟ್ವೀಟ್ ಮಾಡೋದಕ್ಕೆ ಅಧಿಕಾರ ಕೊಟ್ಟವರು.

**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 15,142/Gram 24ct ₹ 13,880/Gram 22ct ಬೆಳ್ಳಿ: ₹235./ Gram

# CJP ಪ್ರತಿಭಟನೆಗೆ ದೇಶವಿರೋಧಿ ಶಕ್ತಿಗಳ ಸಾಥ್: ಭಾರತದ ವರ್ಚಸ್ಸಿಗೆ ಮಸಿ

• ಉದಯವಾಹಿನಿ, ಬೆಂಗಳೂರು

ದೆಹಲಿಯಲ್ಲಿ ನಡೆಯುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ ಪ್ರತಿಭಟನೆಯಲ್ಲಿ ಹೊಸದೇನೂ ಇಲ್ಲ. ದೇಶವಿರೋಧಿ ಶಕ್ತಿಗಳು ಸಿಜೆಪಿ ನಾಯಕರೊಂದಿಗೆ ಕೈಜೋಡಿಸಿ ಭಾರತದ ವರ್ಚಸ್ಸಿಗೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಿವೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗಳಿಗೆ ಕೇಂದ್ರ ಸರ್ಕಾರ ಹೆದರುವುದಿಲ್ಲ. ಈ ಬೆಳವಣಿಗೆಗಳನ್ನು ತಪ್ಪಾಗಿ ಅರ್ಥೈಸುವ ಅಗತ್ಯವಿಲ್ಲ ಎಂದು ಹೇಳಿದರು. ಹಿಂದಿನ ಪ್ರತಿಭಟನೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಬದಿಗಿಟ್ಟು,



ಸಂಸತ್ತಿಗೆ ಮುತ್ತಿಗೆ ಹಾಕಲು ಹಾಗೂ ಅರಾಜಕತೆ ಸೃಷ್ಟಿಸಲು ಪ್ರಯತ್ನಿಸಲಾಗಿತ್ತು. ಈ ಎಲ್ಲಾ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರ ಗಮನಿಸಿತ್ತು. ಕೇಂದ್ರ ಶಿಕ್ಷಣ ಸಚಿವರಾಗಿದ್ದ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ ಬಳಿಕ, ಯಾವುದೇ ಸಂದರ್ಭದಲ್ಲೂ ಒತ್ತಡಕ್ಕೆ ಮಣಿದು ಕೇಂದ್ರ ಸರ್ಕಾರ ಬೇಡಿಕೆಗಳನ್ನು ಈಡೇರಿಸುತ್ತದೆ ಎಂದು ಪ್ರತಿಭಟನಾಕಾರರು ಭಾವಿಸಿದ್ದಾರೆ. ಇದೀಗ ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸುತ್ತಿದ್ದಾರೆ. ಇದು ಸಾಂವಿಧಾನಿಕ ಹುದ್ದೆಯಾಗಿದ್ದು, ಯಾವುದೇ ತಪ್ಪು ನಡೆದಿದ್ದರೆ ನ್ಯಾಯಾಲಯದ ಮೊರೆ ಹೋಗಬಹುದು. ಆದರೆ, ಪ್ರತಿಭಟನಾಕಾರರು ಹಾಗೆ ಮಾಡಲು ಸಿದ್ಧರಿಲ್ಲ ಎಂದು ಟೀಕಿಸಿದರು. ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ನಮೂನೆ-7ರ ಕುರಿತು ಮಾಡಲಾಗಿದ್ದ ಆರೋಪಗಳು ಸುಳ್ಳು ಎಂಬುದು ಸಾಬೀತಾಗಿದೆ. ಯಾರಾದರೂ ಅರ್ಜಿ ಸಲ್ಲಿಸಿದ್ದಾರೆ ಎಂಬ ಕಾರಣಕ್ಕೆ ಚುನಾವಣಾ ಆಯೋಗ ಒಂದೇ ಒಂದು ಮತದಾರರ ಹೆಸರನ್ನೂ ಪಟ್ಟಿಯಿಂದ ತೆಗೆದುಹಾಕಿಲ್ಲ.

# SIR ಬೆಂಬಲಿಸಿ ಪತ್ರ ಬರೆದ ಮಾಜಿ ನಾಗರಿಕ ಸೇವಾ ಅಧಿಕಾರಿಗಳು! ದೇಶದ ನಾಗರಿಕರಿಗೆ ಪತ್ರ

• ಉದಯವಾಹಿನಿ, ಬೆಂಗಳೂರು

ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಕಾಂಗ್ರೆಸ್ ಸೇರಿದಂತೆ ವಿಪಕ್ಷಗಳು SIR ಪ್ರಕ್ರಿಯೆ ವಿರುದ್ಧ ಬೀದಿಗಳಿದು ಹೋರಾಟ ಆರಂಭಿಸಿದ್ದಾರೆ. ಮತ್ತೊಂದೆಡೆ, SIR ಬೆಂಬಲಿಸಿ ಪತ್ರ ಬರೆದ 124 ಮಾಜಿ , SIR ಸೇರಿ ವಿವಿಧ ನಾಗರಿಕಾ ಸೇವಾ ಅಧಿಕಾರಿಗಳಿಂದ ಪತ್ರ ಬರೆದಿದ್ದಾರೆ. ಭಾರತದ ನಾಗರಿಕರಿಗೆ ಬಹಿರಂಗ ಪತ್ರ ಬರೆದಿದ್ದಾರೆ. ನಾವು ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ, ನಾವು ಅನೇಕ ಚುನಾವಣೆಗಳನ್ನ ನಡೆಸಿದ್ದೇವೆ. ಯಾವುದೇ ಸಾಕ್ಷಿಯಿಲ್ಲದೆ ಚುನಾವಣಾ ಅಕ್ರಮ, ಫಲಿತಾಂಶ ತಿರುಚುವಿಕೆ ಎಂದು ಆರೋಪಿಸಲಾಗ್ತಿದೆ. ಇದರಿಂದ ಪ್ರಜಾಪ್ರಭುತ್ವದ ಮೇಲಿನ ನಂಬಿಕೆಗೆ ಧಕ್ಕೆಆಗ್ತಿದೆ. ಅಕ್ರಮವಾಗಿ ನಡೆಸಿದ ಚುನಾವಣಾ ಹೇಗಿರುತ್ತೆ ಎನ್ನುವುದು ನಮಗೆ ಗೊತ್ತಿದೆ.

ಆ ಕಾಲದಲ್ಲಿಯೂ ನಾವು ಸೇವೆ ಸಲ್ಲಿಸಿದ್ದೆವು, ಬಂದೂಕುಗಳ ಹಾವಳಿ, ಪ್ರಭಾವಿ ವ್ಯಕ್ತಿಗಳ ಬೆಂಬಲಿಗರ ದೌರ್ಜನ್ಯ, ಮತಪೆಟ್ಟಿಗೆಗಳಿಗೆ ಅಕ್ರಮವಾಗಿ ಮತಪತ್ರಗಳನ್ನು ತುಂಬುವುದು ಅಥವಾ ಮತಪೆಟ್ಟಿಗೆಗಳನ್ನೇ ಕದಿಯುವುದು. ಮತದಾರರನ್ನು ಮತ ಚಲಾಯಿಸದಂತೆ ತಡೆಯುವುದು ಇವೆಲ್ಲವೂ ಆಗ ಸಾಮಾನ್ಯವಾಗಿತ್ತು.

## ಬಿಲ್ ಬಾಕಿ ಹೆಸರಲ್ಲಿ ಶವ ಒತ್ತೆ ಇಟ್ಟರೆ ಕ್ರಿಮಿನಲ್ ಕೇಸ್

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಖಾಸಗಿ ಆಸ್ಪತ್ರೆಗಳು ಚಿಕಿತ್ಸಾ ವೆಚ್ಚದ ಬಿಲ್ ಪಾವತಿಸದ ಕಾರಣಕ್ಕೆ ರೋಗಿಗಳ ಮೃತದೇಹಗಳನ್ನು ನೀಡದೆ ಸತಾಯಿಸುವುದಕ್ಕೆ ಕಡಿವಾಣ ಹಾಕಲು ಕರ್ನಾಟಕ ಸರ್ಕಾರ ಹೊಸ ಕಠಿಣ ಕಾನೂನು ಜಾರಿಗೆ ತರಲು ಗಂಭೀರ ಚಿಂತನೆ ನಡೆಸಿದೆ. ಮೃತರ ಕುಟುಂಬಸ್ಥರಿಗೆ ಮಾನಸಿಕ ಕಿರುಕುಳ ನೀಡಿ, ಬಿಲ್ ವಸೂಲಾತಿಗಾಗಿ ಶವವನ್ನು ಒತ್ತೆಯಾಗಿ ಇಟ್ಟುಕೊಳ್ಳುವ ಆಸ್ಪತ್ರೆಗಳ ವಿರುದ್ಧ ಇನ್ಮುಂದೆ ನೇರವಾಗಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ನಿಟ್ಟಿನಲ್ಲಿ ಇಲಾಖೆ ತರಲು ಉದ್ದೇಶಿಸಿ ಮಹತ್ವದ ಹೊಸ ಕಾನೂನು ರೂಪಿಸಲು ಗಂಭೀರ ಚಿಂತನೆ ನಡೆಸಿದೆ. 2007 ಮತ್ತು 2018ರ ಕೆಪಿಎಂಇ ಕಾಯ್ದೆಯ ಅಡಿಯಲ್ಲಿ ಮೃತದೇಹವನ್ನು ಆಸ್ಪತ್ರೆಯಲ್ಲಿ ಇಟ್ಟುಕೊಳ್ಳಬಾರದು ಎಂಬ ನಿಯಮಗಳಿದ್ದರೂ ಸಹ ಅವು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಜೊತೆಗೆ, 2018ರ ನಿಯಮದ ಪ್ರಕಾರ ಬಿಲ್ ಬಾಕಿ ಇದ್ದರೆ ಶ್ಯೂರಿಟಿ (ಭರವಸೆ ಪತ್ರ) ಪಡೆದು ಮೃತದೇಹ ನೀಡಬೇಕು ಮತ್ತು ನಂತರ ಹಣ ನೀಡದಿದ್ದರೆ ಆಸ್ಪತ್ರೆಯವರು ರೋಗಿಗಳ ಮೇಲೆ ಕೇಸ್ ದಾಖಲಿಸಬಹುದು ಎಂದಿತ್ತು.

ಆದರೆ, ಕೋರ್ಟ್ ಮತ್ತು ಕೇಸ್‌ಗಳ ತಂಟೆ ಬೇಡವೆಂದು ಸಾರ್ವಜನಿಕರು ಸಾಲಸೋಲ ಮಾಡಿ ಆಸ್ಪತ್ರೆಗಳಿಗೆ ಹಣ ಕಟ್ಟುತ್ತಿದ್ದಾರೆ. ಈಗಾಗಲೇ ಸಂಕಷ್ಟದಲ್ಲಿರುವ ಬಡ ಕುಟುಂಬಗಳಿಗೆ ಭರಿಸಲಾಗದ ಆರ್ಥಿಕ ಹೊರೆಯಾಗುತ್ತಿದೆ. ದುಡ್ಡಿಗಾಗಿ ಮೃತದೇಹ ಇಟ್ಟುಕೊಂಡು ಸತಾಯಿಸುವ ಕೆಲಸ ಯಾವುದೇ ಕಾರಣಕ್ಕೂ ನಡೆಯಬಾರದು, ಸರ್ಕಾರ ಶೀಘ್ರದಲ್ಲೇ ಸೂಕ್ತ ನೀತಿ ರೂಪಿಸಲಿದೆ ಎಂದರು.

## ಸಾರಿಗೆ ಇಲಾಖೆಯಲ್ಲಿ ಡೀಸೆಲ್ ಬೆನ್ನಲ್ಲೇ ಟಿಕೆಟ್ ರೋಲ್ ಕೊರತೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಸಾರಿಗೆ ಇಲಾಖೆಯು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ರಾಜ್ಯದಲ್ಲಿ ತೈಲ ಕಂಪನಿಗಳಿಗೆ ಬಾಕಿ ಪಾವತಿಸದ ಕಾರಣ ಉಂಟಾಗಿದ್ದ ಡೀಸೆಲ್ ಅಭಾವದ ಬೆನ್ನಲ್ಲೇ, ಇದೀಗ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಟಿಕೆಟ್ ಮುದ್ರಿಸುವ ಪೇಪರ್ ರೋಲ್‌ಗಳ ತೀವ್ರ ಕೊರತೆ ಎದುರಾಗಿದೆ. ಹಾಗಾಗಿ, ಕಾಗದ ಉಳಿಸುವ ಉದ್ದೇಶದಿಂದ ನಿರ್ವಾಹಕರು 3 ರಿಂದ 4 ಪ್ರಯಾಣಿಕರಿಗೆ ಸೇರಿಸಿ ಒಂದೇ ಟಿಕೆಟ್ ವಿತರಿಸುತ್ತಿದ್ದು, ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ ಜಾರಿಯಾದ ನಂತರ ಮಹಿಳಾ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಆದರೆ, ಸರ್ಕಾರದಿಂದ ಸಾರಿಗೆ ಸಂಸ್ಥೆಗಳಿಗೆ ಬರಬೇಕಾದ ಸಬ್ಸಿಡಿ ಅಥವಾ ಆರ್ಥಿಕ ಮರುಪಾವತಿ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿರುವುದರಿಂದ, ಕೆಲವು ದಿನಗಳ ಹಿಂದಷ್ಟೇ ಇಲಾಖೆಯು ತೈಲ ಕಂಪನಿಗಳಿಗೆ ಪಾವತಿಸಬೇಕಾದ ಅಂದಾಜು 170 ಕೋಟಿ ರೂಪಾಯಿಗಳಿಗೂ ಅಧಿಕ ಬಿಲ್ ಬಾಕಿ ಹಣ ಪಾವತಿಸದ ಕಾರಣ ಬಸ್‌ಗಳಿಗೆ ಡೀಸೆಲ್ ಕೊರತೆ ಎದುರಾಗಿ ಹಲವು ಟ್ರಿಪ್‌ಗಳು ರದ್ದಾಗಿದ್ದವು. ಈ ಬೆನ್ನಲ್ಲೇ, ಪ್ರಯಾಣಿಕರಿಗೆ ಟಿಕೆಟ್ ನೀಡುವ ಇಟಿಎಂ ಯಂತ್ರಗಳಲ್ಲಿ ಬಳಸುವ ಮುದ್ರಣ ಕಾಗದದ ಪೂರೈಕೆದಾರರಿಗೆ ಬಾಕಿ ಹಣ ಪಾವತಿಯಾಗದ ಕಾರಣ, ಈಗ ಹೊಸ ರೋಲ್‌ಗಳ ಸರಬರಾಜು ತೀವ್ರವಾಗಿ ಕುಸಿದಿದೆ.

ಮುಂದುವರೆದು, ಟಿಕೆಟ್ ರೋಲ್‌ಗಳು ಖಾಲಿಯಾಗುತ್ತಿರುವುದರಿಂದ ನಿರ್ವಾಹಕರು ಅನಿವಾರ್ಯವಾಗಿ, ಒಂದೇ ನಿಲ್ದಾಣಕ್ಕೆ ಹೋಗುವ ಅಥವಾ ಒಂದೇ ಕುಟುಂಬದ 3 ರಿಂದ 4 ಪ್ರಯಾಣಿಕರನ್ನು ಒಟ್ಟಿಗೆ ಸೇರಿಸಿ, ಎಲ್ಲರಿಗೂ ಸೇರಿ ಒಂದೇ ಒಂದು ಟಿಕೆಟ್ ಪ್ರಿಂಟ್ ಮಾಡಿ ನೀಡುತ್ತಿದ್ದಾರೆ ಎನ್ನಲಾಗಿದೆ.

## ಕೇಂದ್ರದ ವಿರುದ್ಧ ಸಿಪಿಐಎಂ ಮುಖಂಡರಿಂದ ಆನೇಕಲ್‌ನಲ್ಲಿ ಪ್ರತಿಭಟನೆ

• ಉದಯವಾಹಿನಿ, ಆನೇಕಲ್

ಎಸ್‌ಐಆರ್ ಪ್ರಕ್ರಿಯೆಯಲ್ಲಿನಡೆದಿದೆ ಎನ್ನಲಾದ ಚುನಾವಣಾ ಆಯೋಗದ ಅಕ್ರಮ ಮತ್ತು ಮತಗಳ್ಳತನದ ವಿರುದ್ಧ ದೆಹಲಿಯಲ್ಲಿನ ಪ್ರತಿಭಟನೆಯನ್ನು ಕೇಂದ್ರ ಸರ್ಕಾರವು ಹತ್ತಿಕ್ಕುತ್ತಿದೆ ಎಂದು ಎಂದು ಆರೋಪಿಸಿ ಸಿಪಿಐಎಂ ಮುಖಂಡರು ಪಟ್ಟಣದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಸಿಪಿಐಎಂ ಮುಖಂಡ ಮಹದೇಶ್ ಮಾತನಾಡಿ, ಕೇಂದ್ರ ಸರ್ಕಾರವು ಪ್ರಜಾಪ್ರಭುತ್ವ ಮತ್ತು ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿದೆ. ಹೋರಾಟಗಳನ್ನು ಹತ್ತಿಕ್ಕಲು ಕೇಂದ್ರ ಸರ್ಕಾರವು ಅಘೋಷಿತ ತುರ್ತುಪರಿಸ್ಥಿತಿ ಮಾರ್ಗ ಅನುಸರಿಸುತ್ತಿದೆ' ಎಂದು ಆರೋಪಿಸಿದರು. ''ನಮ್ಮ ಹಕ್ಕು ಕೇಳಲು ಪರದಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಚುನಾವಣಾ ಆಯೋಗದ ಅಕ್ರಮಗಳ ವಿರುದ್ಧ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಕೇಂದ್ರ ಸರ್ಕಾರವು ಬೆದರಿದೆ.

ವಿರೋಧ ಪಕ್ಷಗಳ ಮುಖಂಡರನ್ನು ಬಂಧಿಸುವ ಮೂಲಕ ಕೇಂದ್ರವು ಅಘೋಷಿತ ತುರ್ತು ಪರಿಸ್ಥಿತಿ ಹೇರಿದೆ. ಈ ಫ್ಯಾಸಿಸ್ಟ್ ಧೋರಣೆ ವಿರುದ್ಧ ಪ್ರತಿಯೊಬ್ಬ ಭಾರತೀಯರು ಒಂದಾಗಬೇಕು' ಎಂದು ಹೇಳಿದರು.

## ಪರಿಷ್ಕರಣೆ ವಿರೋಧಿಸಿ ವಿದ್ಯಾರ್ಥಿ ಸಂಘಟನೆಗಳಿಂದ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವಿರೋಧಿಸಿ, ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಬೆಂಬಲ ಸೂಚಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎಐಎಸ್‌ಎ, ಎಐಡಿಎಸ್‌ಒ, ಕೆವಿಎಸ್, ಎಐಎಸ್‌ಎಫ್, ಎಸ್‌ಎಫ್‌ಐ ಸೇರಿದಂತೆ ಇತರೆ ಎಡ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರನ್ನು ವಜಾಗೊಳಿಸುವಂತೆ ಪ್ರತಿಭಟನಕಾರರು ಆಗ್ರಹಿಸಿದರು. ಪ್ರತಿಭಟನೆಯ ಬಳಿಕ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದ ಪ್ರತಿಭಟನಕಾರರನ್ನು ವಶಕ್ಕೆ ಪಡೆದ ಪೊಲೀಸರು ನಂತರ, ಬಿಡುಗಡೆ ಮಾಡಿದರು.

ಕೆವಿಎಸ್ ರಾಜ್ಯ ಅಧ್ಯಕ್ಷ ಸರೋವರ್ ಬೆಂಕಿಕೆರೆ ಮಾತನಾಡಿ, ವಿದ್ಯಾರ್ಥಿ ನಾಯಕರನ್ನು ಪೊಲೀಸರು ಬಂಧಿಸಿರುವುದೇ ಯುವಜನರ ಹೋರಾಟದ ಯಶಸ್ಸಿನ ಸಂಕೇತವಾಗಿದೆ. ಪ್ರಜಾಪ್ರಭುತ್ವ ಎಂದರೆ ಕೇವಲ ಚುನಾವಣೆಗಳಲ್ಲಿ ಮತ ಚಲಾಯಿಸುವುದಕ್ಕೆ ಸೀಮಿತವಾದ ವ್ಯವಸ್ಥೆ ಅಲ್ಲ. ಜನರು ಪ್ರತಿದಿನವೂ ಸಾಮಾಜಿಕ ಮತ್ತು ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು, ಆಡಳಿತದ ನಡೆಗಳನ್ನು ಪ್ರಶ್ನಿಸುವುದು ಅನ್ಯಾಯದ ವಿರುದ್ಧ ಧ್ವನಿ ಎತ್ತುವುದು ಪ್ರಜಾಪ್ರಭುತ್ವದ ಪ್ರಮುಖ ಭಾಗಗಳಾಗಿವೆ ಎಂದರು.

# 2 ರನ್‌ವೇಗಳಿಂದ ಏಕಕಾಲಕ್ಕೆ ವಿಮಾನ ನಿರ್ಗಮನ ಶೀಘ್ರ

## ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಸಂಸ್ಥೆಯು ಈ ವ್ಯವಸ್ಥೆ ಜಾರಿಗೆ ತರುವ ಕುರಿತು ಇನ್ನೂ ಅಧಿಕೃತ ದಿನಾಂಕ ಪ್ರಕಟಿಸಿಲ್ಲ

• ಉದಯವಾಹಿನಿ, ದೇವನಹಳ್ಳಿ

**1** ಗಂಟೆಗೆ 90 ವಿಮಾನ ಸಂಚಾರಕ್ಕೆ ಅವಕಾಶ
**2** ಪರೀಕ್ಷೆ ನಡೆಸುವ ಕಾರ್ಯ ಪ್ರಗತಿಯಲ್ಲಿದೆ
**3** ಉಪಕರಣಗಳ ಅಳವಡಿಕೆ ಪೂರ್ಣಗೊಂಡಿದೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎ) ಎರಡೂ ರನ್‌ವೇಗಳಿಂದ ಏಕಕಾಲದಲ್ಲಿ ವಿಮಾನಗಳ ಹಾರಾಟಕ್ಕೆ ಅವಕಾಶ ಕಲ್ಪಿಸುವ ಯೋಜನೆ ಮುಂದಿನ ವರ್ಷದ ಆರಂಭದಲ್ಲಿ ಜಾರಿಗೆ ಬರುವ ನಿರೀಕ್ಷೆಯಿದೆ.

ಈ ನಿಟ್ಟಿನಲ್ಲಿ ಅಗತ್ಯ ಉಪಕರಣಗಳ ಅಳವಡಿಕೆ ಪೂರ್ಣಗೊಂಡಿದೆ. ಆದಾಗ್ಯೂ, ವಾಯು ಸಂಚಾರ ನಿಯಂತ್ರಣ ವ್ಯವಸ್ಥೆಯೊಂದಿಗೆ ಅವುಗಳ ಸಂಯೋಜನೆ ಹಾಗೂ ಸುರಕ್ಷತಾ ಪರೀಕ್ಷೆಗಳನ್ನು ಪೂರ್ಣಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತ ಸಂಸ್ಥೆಯು ಈ ವ್ಯವಸ್ಥೆ ಜಾರಿಗೆ ತರುವ ಕುರಿತು ಇನ್ನೂ ಅಧಿಕೃತ ದಿನಾಂಕ ಪ್ರಕಟಿಸಿಲ್ಲ. ಆರಂಭದಲ್ಲಿ 2026ರ ಸೆಪ್ಟೆಂಬರ್‌ನಲ್ಲಿ ಕಾರ್ಯಾಚರಣೆ ಆರಂಭಿಸುವ ನಿರೀಕ್ಷೆ ಇತ್ತು. ಆದರೆ, ತಾಂತ್ರಿಕ ಪರಿಶೀಲನೆ ಮತ್ತು ಕಾರ್ಯವಿಧಾನಗಳ ಸಿದ್ಧತೆ ಪೂರ್ಣಗೊಳ್ಳಲು ಹೆಚ್ಚಿನ ಸಮಯದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ 2027ರ ಆರಂಭದಲ್ಲಿ ವ್ಯವಸ್ಥೆ ಕಾರ್ಯಾರಂಭ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವಿಮಾನ ನಿಲ್ದಾಣದಲ್ಲಿ ಏಕಕಾಲದ ನಿರ್ಗಮನಕ್ಕೆ ಸಂಬಂಧಿಸಿದ ಉಪಕರಣಗಳ ಅಳವಡಿಕೆ ಪೂರ್ಣಗೊಂಡಿದೆ. ಅವುಗಳನ್ನು ವಾಯು ಸಂಚಾರ ನಿಯಂತ್ರಣದ ಸ್ವಯಂಚಾಲಿತ ವ್ಯವಸ್ಥೆಯೊಂದಿಗೆ ಸಂಯೋಜಿಸುವುದು, ಪರಿಶೀಲನೆ ಹಾಗೂ ಪರೀಕ್ಷೆ ನಡೆಸುವ ಕಾರ್ಯ ಪ್ರಗತಿಯಲ್ಲಿದೆ.

ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಬಳಿಕ ಈ ವ್ಯವಸ್ಥೆ ಕಾರ್ಯಾರಂಭವಾಗುವ ನಿರೀಕ್ಷೆಯಿದೆ ಎಂದು ಭಾರತೀಯ ವಿಮಾನ ನಿಲ್ದಾಣ



ಉದಯವಾಹಿನಿ ಚಿತ್ರ

ಪ್ರಾಧಿಕಾರದ (ಎಎಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸದ್ಯ ಕೆಐಎಯು ಗಂಟೆಗೆ ಸುಮಾರು 60 ವಿಮಾನಗಳ ಆಗಮನ ಮತ್ತು. ನಿರ್ಗಮನವನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಎರಡೂ ರನ್‌ವೇಗಳಿಂದ ಏಕಕಾಲದಲ್ಲಿ ವಿಮಾನಗಳ ನಿರ್ಗಮನಕ್ಕೆ ಅವಕಾಶ ಕಲ್ಪಿಸುವುದು ಸೇರಿದಂತೆ ಸುಧಾರಣೆಗಳನ್ನು ಕೈಗೊಂಡರೆ ಈ ಸಾಮರ್ಥ್ಯವು ಗಂಟೆಗೆ 90 ವಿಮಾನಗಳವರೆಗೆ ಹೆಚ್ಚಿಸಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ವಿಮಾನ ನಿಲ್ದಾಣದಲ್ಲಿ ದಿನಕ್ಕೆ ಸುಮಾರು 700 ವಿಮಾನಗಳ ಆಗಮನ ಮತ್ತು ನಿರ್ಗಮನವಾಗುತ್ತದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯ ಪರಿಣಾಮ ವಿಮಾನ ಸಂಚಾರ ಕಡಿಮೆಯಾಗಿದ್ದು, ಈ ಹಿಂದೆ ದಿನಕ್ಕೆ ಸುಮಾರು 840 ವಿಮಾನಗಳು ಸಂಚರಿಸುತ್ತಿದ್ದವು ಎಂದು ಗೊತ್ತಾಗಿದೆ. ಸದ್ಯ ದಟ್ಟಣೆ ಅವಧಿಯಲ್ಲಿ ದಕ್ಷಿಣ ರನ್‌ವೇಯನ್ನು ವಿಮಾನಗಳ ನಿರ್ಗಮನಕ್ಕೆ ಬಳಸಲಾಗುತ್ತಿದೆ. ದಟ್ಟಣೆ ಕಡಿಮೆ ಇರುವ ಸಮಯದಲ್ಲಿ ಉತ್ತರ ರನ್‌ವೇ ಬಳಕೆಗೆ ಆದ್ಯತೆ ನೀಡಲಾಗುತ್ತಿದೆ. ಹೊಸ ವ್ಯವಸ್ಥೆ ಜಾರಿಯಾದರೆ ಎರಡೂ ರನ್‌ವೇಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗಲಿದೆ. ಇದಕ್ಕಾಗಿ ಮೇಲ್ಮೈ ಚಲನವಲನ ರಾಡಾರ್‌ಗಳು (ಎಸ್‌ಎಂಆರ್) ವಿಮಾನಗಳ ಚಲನವಲನಗಳ ಮೇಲೆ ನಿರಂತರವಾಗಿ ನಿಗಾ ವಹಿಸಲಿವೆ. ವಿಮಾನ ನಿಗದಿತ ಮಾರ್ಗದಿಂದ ಬದಲಾದರೆ ವಾಯು ಸಂಚಾರ ನಿಯಂತ್ರಕರಿಗೆ ಎಚ್ಚರಿಕೆ ನೀಡುವ ಸ್ವಯಂಚಾಲಿತ ವ್ಯವಸ್ಥೆಯನ್ನೂ ಅಳವಡಿಸಲಾಗುತ್ತಿದೆ.

ಎರಡು ರನ್‌ವೇಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಹಂತ ಹಂತವಾಗಿ ಹೊಸ ವ್ಯವಸ್ಥೆ ಪರಿಚಯಿಸಲಾಗುತ್ತಿದೆ. ಅಗತ್ಯ ನಿಯಂತ್ರಕ ಅನುಮತಿ ದೊರೆತ ಬಳಿಕ ಏಕಕಾಲದ ನಿರ್ಗಮನ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದು ಬಿಐಎಎಲ್ ಪ್ರತಿನಿಧಿ ತಿಳಿಸಿದ್ದಾರೆ.ವಿಮಾನಗಳ ಆಗಮನವನ್ನು ಸುಗಮಗೊಳಿಸಲು ಕೆಐಎಯಲ್ಲಿ ಸೆಪ್ಟೆಂಬರ್‌ನಿಂದ 'ಪಾಯಿಂಟ್ ಮರ್ಜ್' ಎಂಬ ಹೊಸ ವಾಯು ಸಂಚಾರ ನಿರ್ವಹಣಾ ವ್ಯವಸ್ಥೆ ಪ್ರಯೋಗ ಆರಂಭಿಸಲಾಗಿದೆ. ಈ ವ್ಯವಸ್ಥೆಯು ವಿಮಾನಗಳನ್ನು ನಿಗದಿತ ಮಾರ್ಗಗಳಲ್ಲಿ ಕ್ರಮಬದ್ಧವಾಗಿ ಚಲಿಸುವಂತೆ ಮಾಡಿ, ರನ್‌ವೇಗೆ ತಲುಪುವ ಮೊದಲು ಅವುಗಳ ಸಂಚಾರವನ್ನು

> ಗಾಳಿ ಬೀಸುವ ದಿಕ್ಕಿನ ಬದಲಾವಣೆಗಳು ಸೇರಿದಂತೆ ವಿವಿಧ ಕಾರ್ಯಾಚರಣಾ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ. -ಅಧಿಕಾರಿಗಳು

### ವಿಮಾನದ ಸಮೀಪಕ್ಕೆ ಹೋಗುವ ಅಪಾಯ ತಡೆ

**ವಿಮಾನಗಳು ನಿಗದಿತ ಮಾರ್ಗದಿಂದ ತಪ್ಪಿ ಪಕ್ಕದ ರನ್‌ವೇಯಲ್ಲಿ ಸಂಚರಿಸುವ ಅಥವಾ ಹಾರಾಟ ಆರಂಭಿಸುವ ಮತ್ತೊಂದು ವಿಮಾನದ ಸಮೀಪಕ್ಕೆ ಹೋಗುವ ಅಪಾಯ ತಡೆಯುವುದು ಯೋಜನೆಯ ಪ್ರಮುಖ ಉದ್ದೇಶ.**

## ಕಿದ್ವಾಯಿ ಪ್ರತ್ಯೇಕ ನೋವು ನಿವಾರಕ ಘಟಕ ನಿರ್ಮಾಣ

• ಉದಯವಾಹಿನಿ, ಬೆಂಗಳೂರು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಆವರಣದಲ್ಲಿ ಕಾರ್ಪೊರೇಟ್ ಕಂಪನಿಗಳು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಪ್ರತ್ಯೇಕ 'ನೋವು ನಿವಾರಕ ಘಟಕ' ನಿರ್ಮಾಣ ಮಾಡಲಾಗುವುದು ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಆರ್. ಕೃಷ್ಣಪ್ಪ ತಿಳಿಸಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ವತಿಯಿಂದ ಇನ್ಫೋಸಿಸ್ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಹಾಸ್ ಮತ್ತು ಉಪಶಮನ ಆರೈಕೆ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸಂಸ್ಥೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಬೇಕಾದ ಎಲ್ಲಾ ಆಧುನಿಕ ವೈದ್ಯಕೀಯ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗುತ್ತಿದೆ. ಕಿದ್ವಾಯಿ ಆಸ್ಪತ್ರೆಯಿಂದ ಮನೆ ಮನೆಗೆ ಉಪಶಮನ ಆರೈಕೆ ಮಾಡಲಾಗುತ್ತಿದ್ದು, ರೋಗಿಗಳು ಮತ್ತು ಅವರ ಆರೈಕೆದಾರರು ಸೇರಿದಂತೆ 3ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಈ ಸೇವೆಗಳು ತಲುಪಿವೆ. ಮೊದಲ ಹಂತದಲ್ಲಿ 15 ಕಿ.ಮೀ. ವ್ಯಾಪ್ತಿಯಲ್ಲಿ ಉಪಶಮನ ಆರೈಕೆ ಸೇವೆ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಸೇವೆ ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಸಂಸ್ಥೆಯ ನೋವು ನಿವಾರಕ ಮತ್ತು ಉಪಶಮನ ಆರೈಕೆ ಕೇಂದ್ರದ ಮುಖ್ಯಸ್ಥ ಡಾ. ಯದುರಾಜ್ ಮಾತನಾಡಿ, ಬೆಂಗಳೂರಿನಿಂದ ಹೊರಗಡೆ ವಾಸಿಸುವ ರೋಗಿಗಳಿಗೆ ತಜ್ಞರ ಆರೈಕೆ ಮತ್ತು ಮಾರ್ಗದರ್ಶನವನ್ನು ಸುಲಭವಾಗಿ ತಲುಪಿಸುವ ಉದ್ದೇಶದಿಂದ ನೆರವಿನ ಕರೆ ದೂರವಾಣಿ ಹಾಗೂ ವಿಡಿಯೊ ಕರೆ ಆಧಾರಿತ ಸೇವೆ ಮತ್ತೆ ಆರಂಭಿಸಲಾಗಿದೆ.

## ಪೊಲೀಸ್ ಇಲಾಖೆಯನ್ನು ಆಧುನೀಕರಿಸಲು ನಮ್ಮ ಸರ್ಕಾರ ಬದ್ಧ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಕರ್ನಾಟಕದ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ, ಅಪರಾಧ ತಡೆಗಟ್ಟುವಿಕೆ ಹಾಗೂ ಕಣ್ಗಾವಲು ವ್ಯವಸ್ಥೆಯನ್ನು ಸುಧಾರಿಸುವ ಅಗತ್ಯವಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಬೆಂಗಳೂರಿನ ರಿಚ್ಮಂಡ್ ರಸ್ತೆಯಲ್ಲಿರುವ ಕೇಂದ್ರ ಕಮಾಂಡ್ ಸೆಂಟರ್ ಮತ್ತು ಸಮಗ್ರ ಪೊಲೀಸ್ ಭವನಕ್ಕೆ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಭೇಟಿ ನೀಡಿದರು.

ಮಾತನಾಡಿದ ಮುಖ್ಯಮಂತ್ರಿಗಳು, ಪೊಲೀಸ್ ವ್ಯವಸ್ಥೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಸಂಯೋಜಿಸುವ ಮೂಲಕ ಕಣ್ಗಾವಲು ಹೆಚ್ಚಿಸುವುದು, ಅಪರಾಧಗಳನ್ನು ತಡೆಗಟ್ಟುವುದು ಹಾಗೂ ಪೊಲೀಸರ ಕಾರ್ಯಕ್ಷಮತೆಯನ್ನು ಸುಧಾರಿಸುವತ್ತ ಗಮನ ಹರಿಸಬೇಕಿದೆ ಎಂದು ಹೇಳಿದರು.

ಪೊಲೀಸ್ ಇಲಾಖೆಯ ದಕ್ಷತೆಯನ್ನು ಹೆಚ್ಚಿಸಲು, ಅಪರಾಧ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಮತ್ತು ಸಾರ್ವಜನಿಕರ ಸುರಕ್ಷತೆಯನ್ನು ಬಲಪಡಿಸಲು ಇತ್ತೀಚಿನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಮುಖ್ಯವಾಗಿದೆ. ಪೊಲೀಸ್ ಮೂಲಸೌಕರ್ಯವನ್ನು ಆಧುನೀಕರಿಸುವುದು, ಸೈಬರ್ ಅಪರಾಧ ತಡೆಗಟ್ಟುವ ವ್ಯವಸ್ಥೆಗಳನ್ನು ಬಲಪಡಿಸುವುದು ಹಾಗೂ ಪೊಲೀಸ್ ಸಿಬ್ಬಂದಿಗೆ ಕರ್ತವ್ಯ ನಿರ್ವಹಿಸಲು ಅಗತ್ಯವಾದ ಉತ್ತಮ ಸೌಲಭ್ಯಗಳು ಮತ್ತು ಸಂಪನ್ಮೂಲಗಳನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

ಹೊಸ ಭದ್ರತಾ ಸವಾಲುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯವಿರುವ, ತಂತ್ರಜ್ಞಾನ ಆಧಾರಿತ ಆಧುನಿಕ ಪೊಲೀಸ್ ವ್ಯವಸ್ಥೆಯನ್ನು ನಿರ್ಮಿಸುವುದು ಸರ್ಕಾರದ ಉದ್ದೇಶವಾಗಿದೆ. ಇದರೊಂದಿಗೆ ಪೊಲೀಸ್ ಸಿಬ್ಬಂದಿಗೆ ಲಭ್ಯವಿರುವ ಮೂಲಸೌಕರ್ಯ ಮತ್ತು ಸಂಪನ್ಮೂಲಗಳನ್ನು ಸುಧಾರಿಸಲಾಗುವುದು ಎಂದು ಹೇಳಿದರು.

## ರಿವಾರ್ಡ್ಸ್ ಸಂಸ್ಥೆಗೆ ದಕ್ಷಿಣ ನಗರ ಪಾಲಿಕೆಯ ಆಯುಕ್ತರಿಂದ ನೋಟಿಸ್

• ಉದಯವಾಹಿನಿ, ಬೆಂಗಳೂರು

ಇಂದಿರಾ ಕ್ಯಾಂಟೀನ್‌ಗೆ ನಿಗದಿತ ಮೆನು ಪ್ರಕಾರದಲ್ಲಿ ಆಹಾರ ಪೂರೈಸದೆ ನಿರ್ಲಕ್ಷ್ಯ ವಹಿಸುತ್ತಿರುವ 'ರಿವಾರ್ಡ್ಸ್' ಸಂಸ್ಥೆಗೆ ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್. ರಮೇಶ್ ನೋಟಿಸ್ ನೀಡಲು ಸೂಚಿಸಿದರು.

ಪಟ್ಟಾಭಿನಗರ ವಾರ್ಡ್ ವ್ಯಾಪ್ತಿಯ ಜಯನಗರ ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಶನಿವಾರ ದಿಢೀರ್ ಭೇಟಿ ನೀಡಿ, ಆಹಾರದ ಗುಣಮಟ್ಟ, ಶುಚಿತ್ವ, ದಾಸ್ತಾನು ಹಾಗೂ ಸಾರ್ವಜನಿಕರಿಗೆ ವಿತರಿಸಲಾಗುತ್ತಿರುವ ಆಹಾರದ ವ್ಯವಸ್ಥೆಯನ್ನು ಪರಿಶೀಲಿಸಿದರು.

ನಿಗದಿತ ಮೆನುವಿನಂತೆ ಅನ್ನ, ಸಾಂಬಾರ್, ಪಲ್ಯ ಮತ್ತು ಖೀರನ್ನು (ಪಾಯಸ) ಇಂದಿರಾ ಕ್ಯಾಂಟೀನ್‌ಗೆ ಪೂರೈಸಬೇಕಾಗಿದ್ದು, ಗುತ್ತಿಗೆ ಸಂಸ್ಥೆಯಿಂದ ಬಿಸಿಬೇಳೆಬಾತ್ ಮಾತ್ರ ಪೂರೈಕೆಯಾಗಿರುತ್ತದೆ. ನಾಲ್ಕೈದು ದಿನಗಳಿಂದಲೂ ಇದೇ ರೀತಿ ಮೆನು ಉಲ್ಲಂಘನೆ ಆಗಿರುವುದನ್ನು ಗಮನಿಸಿದ ಆಯುಕ್ತರು ಗುತ್ತಿಗೆ ಸಂಸ್ಥೆ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ತಕ್ಷಣ ನೋಟಿಸ್ ಜಾರಿಗೊಳಿಸಿ ಗರಿಷ್ಠ ದಂಡ ವಿಧಿಸಬೇಕು. ಕೊರತೆಯಾಗಿರುವ



ಉದಯವಾಹಿನಿ ಚಿತ್ರ

ಆಹಾರದ ಪ್ರಮಾಣಕ್ಕೆ ತಕ್ಕಂತೆ ಬಿಲ್‌ನಲ್ಲಿ ಮೊತ್ತ ಕಡಿತಗೊಳಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಂದಿರಾ ಕ್ಯಾಂಟೀನ್‌ಗೆ ಊಟಕ್ಕೆ ಬರುವ ಸಾರ್ವಜನಿಕರು ಆಹಾರದ ಗುಣಮಟ್ಟ ಮತ್ತು ಶುಚಿತ್ವದ ಕೊರತೆ ಕುರಿತು ದೂರುಗಳನ್ನು ಪುಸ್ತಕದಲ್ಲಿ ದಾಖಲಿಸಿರುವುದನ್ನು ಪರಿಶೀಲಿಸಿದರು.

ಆಹಾರದ ಗುಣಮಟ್ಟ ಕುರಿತು ದೂರುಗಳಿದ್ದರೂ ಮೇಲಧಿಕಾರಿಗಳಿಗೆ ಲಿಖಿತವಾಗಿ ವರದಿ ನೀಡಿ ಕ್ರಮ ಕೈಗೊಳ್ಳದೆ, ಕೇವಲ ಮೊಬೈಲ್ ಸಂದೇಶ ಕಳುಹಿಸಿದ್ದ ಕ್ಯಾಂಟೀನ್ ಮೇಲ್ವಿಚಾರಕರ ಬೇಜವಾಬ್ದಾರಿಗೆ ಆಯುಕ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಅಲ್ಲದೆ, ಸಾರ್ವಜನಿಕರ ದೂರುಗಳ ಸಂಬಂಧ ಪಾಲಿಕೆಯ ಆರೋಗ್ಯಾಧಿಕಾರಿಗಳಿಗೆ ಸ್ಥಳದಲ್ಲೇ ದೂರವಾಣಿ ಕರೆ ಮಾಡಿ, ಸಂಬಂಧಪಟ್ಟವರ ವಿರುದ್ಧ ತಕ್ಷಣ ಕಠಿಣ ಕ್ರಮ ಕೈಗೊಳ್ಳುವಂತೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

## ಜೀವರಕ್ಷಕ ಔಷಧದ ಲಾಭಾಂಶಕ್ಕೂ ಮಿತಿ: ಕೇಂದ್ರ ಸರ್ಕಾರಕ್ಕೆ ಖಾದರ್ ಮನವಿ

• ಉದಯವಾಹಿನಿ, ಬೆಂಗಳೂರು

ಕ್ಯಾನ್ಸರ್ ಚಿಕಿತ್ಸಾ ಔಷಧಗಳ ಲಾಭಾಂಶವನ್ನು ಶೇ 30ಕ್ಕೆ ಮಿತಿಗೊಳಿಸುತ್ತಿರುವ ಮಾದರಿಯಲ್ಲಿಯೇ, ಹೃದಯ ಮತ್ತು ಮೂತ್ರಪಿಂಡದ ಚಿಕಿತ್ಸೆಯ ಔಷಧ, ಜೀವರಕ್ಷಕ ಔಷಧಗಳಿಗೂ ಲಾಭಾಂಶದ ಮಿತಿಯನ್ನು ಗೊತ್ತುಪಡಿಸಬೇಕು' ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಔಷಧ ಬೆಲೆ ನಿಗದಿ ಪ್ರಾಧಿಕಾರವು (ಎನ್‌ಪಿಪಿಎ) ಕ್ಯಾನ್ಸರ್ ಚಿಕಿತ್ಸಾ ಔಷಧಗಳ ಲಾಭಾಂಶವನ್ನು ಕಡಿತಗೊಳಿಸಲು ಕೈಗೊಂಡ ಕ್ರಮವನ್ನು ಸ್ವಾಗತಿಸಿದರು. ಔಷಧಗಳು ಹಾಗೂ ವೈದ್ಯಕೀಯ ಉಪಕರಣಗಳ ನೈಜ ಬೆಲೆ ಮತ್ತು ಗರಿಷ್ಠ ಚಿಲ್ಲರೆ ಬೆಲೆ (ಎಂಆರ್‌ಪಿ) ನಡುವೆ ಭಾರಿ ವ್ಯತ್ಯಾಸ ಇರುವ ಬಗ್ಗೆ ಸೆ. 23ರಂದು ಕೇಂದ್ರ ಆರೋಗ್ಯ ಸಚಿವರಿಗೆ ತಾವು ಪತ್ರ ಬರೆದಿರುವ



ಉದಯವಾಹಿನಿ ಚಿತ್ರ

ಕುರಿತೂ ಪ್ರಸ್ತಾಪಿಸಿದರು. 'ಸುಪ್ರೀಂ ಕೋರ್ಟ್ ಸಹ ಔಷಧಗಳ ಎಂಆರ್‌ಪಿ ಮತ್ತು ಅವುಗಳ ನೈಜ ಬೆಲೆಯಲ್ಲಿನ ಅತಿಯಾದ ವ್ಯತ್ಯಾಸದ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದೆ. ರಾಜ್ಯ ಔಷಧ ಆಡಳಿತ ಇಲಾಖೆ ನಡೆಸಿದ ಪರಿಶೀಲನೆಯಲ್ಲಿ 253 ಔಷಧಗಳ ದರ ವ್ಯತ್ಯಾಸವನ್ನು ಗುರುತಿಸಲಾಗಿತ್ತು. ಅತ್ಯಾಧುನಿಕ ಕಿಮೋಥೆರಪಿ, ಟಾರ್ಗೆಟೆಡ್ ಥೆರಪಿ ಹಾಗೂ ಕ್ಯಾನ್ಸರ್‌ಗೆ ಇರುವ ಇತರ ದುಬಾರಿ ಔಷಧಗಳ ಬೆಲೆಯನ್ನು ಔಷಧ ಬೆಲೆ ನಿಯಂತ್ರಣ ಆದೇಶದ ವ್ಯಾಪ್ತಿಗೆ ಒಳಪಡಿಸುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿತ್ತು. ಈ ಬಗ್ಗೆ ಕೇಂದ್ರವು ಸ್ಪಂದಿಸಿದ್ದು, ದರ ಇಳಿಕೆ ಮಾಡಲು ಮುಂದಾಗಿದೆ' ಎಂದು ಹೇಳಿದರು. **2,500 ಕೋಟಿ ಉಳಿಕೆ:** 'ಕ್ಯಾನ್ಸರ್ ನಿರೋಧಕ ಔಷಧಗಳ ಬೆಲೆಯನ್ನು ಔಷಧ ಬೆಲೆ ನಿಯಂತ್ರಣ ಆದೇಶದ ವ್ಯಾಪ್ತಿಗೆ ತರಲು ಆರೋಗ್ಯ ಸಚಿವಾಲಯದಡಿ ರಚನೆಗೊಂಡ ಸಮಿತಿ, ಇದೇ 14ರೊಳಗೆ ವರದಿ ಸಲ್ಲಿಸುವ ನಿರೀಕ್ಷೆಯಿದೆ.

### ಹಣ ಉಳಿತಾಯವಾಗಲಿ

**ಈ ಕ್ರಮದಿಂದ ಹಲವಾರು ಕ್ಯಾನ್ಸರ್ ಔಷಧಗಳ ಬೆಲೆ ಕಡಿಮೆಯಾಗಲಿದೆ. ವಾರ್ಷಿಕ ಸುಮಾರು 2,500 ಕೋಟಿಯಷ್ಟು ಹಣ ಉಳಿತಾಯವಾಗಲಿರುವುದಾಗಿ ಕೇಂದ್ರ ಸರ್ಕಾರ ಅಂದಾಜಿಸಿದೆ' ಎಂದು ತಿಳಿಸಿದರು.-ಯು.ಟಿ. ಖಾದರ್**

# ಮೂರು ವರ್ಷಗಳಲ್ಲಿ ಬೆಂಗಳೂರಲ್ಲಿ ಖದೀಮರ ಪಾಲಾಗಿದ್ದು 306 ಕೋಟಿ

## ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸೈಬರ್ ವಂಚಕರ ಕೈಗೆ ಸಿಲುಕಿ ಬೆಂಗಳೂರಿಗರು ಬರೋಬ್ಬರಿ 306 ಕೋಟಿ ರೂಪಾಯಿಗಳ

• ಉದಯವಾಹಿನಿ, ಬೆಂಗಳೂರು

**1** 2025ರಲ್ಲಿ ಪ್ರಕರಣಗಳ ಸಂಖ್ಯೆ 217
**2** 30ರವರೆಗೂ ಕೇವಲ 69 ಪ್ರಕರಣಗಳು
**3** ಇಲಾಖೆ ಕೈಗೊಂಡಿರುವ ಕ್ರಮಗಳೇನು

ರಾಜಧಾನಿ ಬೆಂಗಳೂರು ಒಂದೆಡೆ ತಂತ್ರಜ್ಞಾನದಲ್ಲಿ ಜಗತ್ತಿನ ಗಮನ ಸೆಳೆಯುತ್ತಿದ್ದರೆ, ಮತ್ತೊಂದೆಡೆ ಸದ್ದಿಲ್ಲದೆ ಸೈಬರ್ ಕ್ರೈಮ್ ಜಾಲದ ಅಪರಾಧಿಗಳಿಗೆ ಹಾಟ್‌ಸ್ಪಾಟ್ ಆಗಿ ಗುರುತಿಸಿಕೊಳ್ಳುತ್ತಿರುವುದು ತೀವ್ರ ಆತಂಕಕ್ಕೆ ಕಾರಣವಾಗಿದೆ.

ಬೆಂಗಳೂರಿನ ನಾಗರಿಕರನ್ನ ಗುರಿಯಾಗಿಸಿಕೊಂಡು ಜಾಲ ಬೀಸುತ್ತಿರುವ ಸೈಬರ್ ವಂಚಕರು, ಡಿಜಿಟಲ್ ಅರೆಸ್ಟ್ ಎಂಬ ಭೀತಿ ಸೃಷ್ಟಿಸಿ ಕೋಟ್ಯಾಂತರ ರೂಪಾಯಿ ದೋಚುತ್ತಿದ್ದಾರೆ. ಈ ವಿಚಾರದಲ್ಲಿ ಬೆಂಗಳೂರು ನಗರ ಪೊಲೀಸ್ ಇಲಾಖೆಯ ಅಂಕಿ-ಅಂಶಗಳು ಪ್ರತಿಯೊಬ್ಬರನ್ನೂ ಬೆಚ್ಚಿಬೀಳಿಸುವಂತಿವೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಈ ವಂಚಕರ ಕೈಗೆ ಸಿಲುಕಿ ಬೆಂಗಳೂರಿಗರು ಬರೋಬ್ಬರಿ 306 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ.

ಡಿಜಿಟಲ್ ಅರೆಸ್ಟ್ ಜಾಲದ ಆಳ ಅಗಲವನ್ನ ಗಮನಿಸಿದರೆ, ಈ ವಂಚನೆಯು ವರ್ಷದಿಂದ ವರ್ಷಕ್ಕೆ ಅತ್ಯಂತ ಭೀಕರ ಸ್ವರೂಪ ಪಡೆದುಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ.

ಬೆಂಗಳೂರು ಪೊಲೀಸ್ ಇಲಾಖೆಯಲ್ಲಿನ ಅಂಕಿ ಅಂಶಗಳ ಪ್ರಕಾರ 2024ರಲ್ಲಿ ದಾಖಲಾದ 936 ಪ್ರಕರಣಗಳಲ್ಲಿ 132 ಕೋಟಿ ರೂಪಾಯಿ ಸೈಬರ್ ವಂಚಕರ ಪಾಲಾಗಿದೆ. 2025ರಲ್ಲಿ ಪ್ರಕರಣಗಳ ಸಂಖ್ಯೆ 217ಕ್ಕೆ ಇಳಿದಿದ್ದರೂ ಸಹ ವಂಚನೆಯ ಮೊತ್ತ 111 ಕೋಟಿ



ಉದಯವಾಹಿನಿ ಚಿತ್ರ

ರೂಪಾಯಿ ತಲುಪಿತ್ತು. ಇನ್ನು 2026ರ ಸೆಪ್ಟೆಂಬರ್ 30ರವರೆಗೂ ಕೇವಲ 69 ಪ್ರಕರಣಗಳು ದಾಖಲಾಗಿದ್ದು, ಬರೋಬ್ಬರಿ 61 ಕೋಟಿ ರೂಪಾಯಿ ವಂಚಕರ ಖಾತೆಗಳನ್ನ ಸೇರಿದೆ. **ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು?:** ಡಿಜಿಟಲ್ ಅರೆಸ್ಟ್ ಎಂಬ ಕರಾಳ ಸೈಬರ್ ಕೃತ್ಯದ ವಿರುದ್ಧ ಸಮರ ಸಾರಿರುವ ಬೆಂಗಳೂರು ಸೈಬರ್ ಕ್ರೈಮ್ ಪೊಲೀಸರು, ವಂಚಕರ ಜಾಲವನ್ನು ಭೇದಿಸಲು ಸತತವಾಗಿ ಶ್ರಮಿಸುತ್ತಿದ್ದಾರೆ. ಬೆಂಗಳೂರಿನಲ್ಲಿ 2024ರಿಂದ ಈವರೆಗೆ ಒಟ್ಟು 1,222 ಪ್ರಕರಣಗಳು ದಾಖಲಾಗಿದ್ದು, ಅವುಗಳ ಪೈಕಿ 58 ಆರೋಪಿಗಳನ್ನ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಕಳೆದುಕೊಂಡ ಹಣದ ಪೈಕಿ ಪೊಲೀಸರು ತ್ವರಿತವಾಗಿ ಸ್ಪಂದಿಸಿ ವಿವಿಧ ಬ್ಯಾಂಕ್ ಖಾತೆಗಳಲ್ಲಿದ್ದ 97.75 ಕೋಟಿ ರೂಪಾಯಿಗಳನ್ನ ಫ್ರೀಜ್ ಮಾಡಿಸಿದ್ದಾರೆ. ಇದರಲ್ಲಿ 21.33 ಕೋಟಿ ರೂಪಾಯಿ ಹಣವನ್ನ ಯಶಸ್ವಿಯಾಗಿ ರಿಕವರಿ ಮಾಡಲಾಗಿದ್ದು, ವಂಚನೆಗೆ ಒಳಗಾದ ಸಂತ್ರಸ್ತರಿಗೆ ಈಗಾಗಲೇ 12.44 ಕೋಟಿ ರೂಪಾಯಿಗಳನ್ನು ಮರಳಿ ಹಸ್ತಾಂತರಿಸಲಾಗಿದೆ. ವಿಪರ್ಯಾಸವೆಂದರೆ ಡಿಜಿಟಲ್ ಅರೆಸ್ಟ್ ಜಾಲಕ್ಕೆ ವಿದ್ಯಾವಂತರೆ ಹೆಚ್ಚು ಬಲಿಯಾಗುತ್ತಿದ್ದಾರೆ. ಬೆಂಗಳೂರಿನ ವಿದ್ಯಾವಂತರು, ಟೆಕ್ಕಿಗಳು ಹಾಗೂ ನಿವೃತ್ತ ಹಿರಿಯ ನಾಗರಿಕರು ಈ ಜಾಲದ ಮುಖ್ಯ ಟಾರ್ಗೆಟ್ ಆಗುತ್ತಿದ್ದಾರೆ. ಸೈಬರ್ ವಂಚಕರು ವಾಟ್ಸ್ಯಾಪ್, ಟೆಲಿಗ್ರಾಂ ಮತ್ತಿತರ ಮಾಧ್ಯಮಗಳ ಮೂಲಕ ವಿಡಿಯೋ ಕರೆಗಳನ್ನ ಮಾಡಿ ತಮ್ಮ ಸಂಚು ರೂಪಿಸುತ್ತಾರೆ. ಆದರೆ ಯಾವುದೇ ತನಿಖಾ ಸಂಸ್ಥೆಯ ಅಧಿಕಾರಿಗಳು ಹಣಕ್ಕೆ ಡಿಮ್ಯಾಂಡ್ ಮಾಡುವಂತಿಲ್ಲ. ಮುಖ್ಯವಾಗಿ ಡಿಜಿಟಲ್ ಅರೆಸ್ಟ್ ಎಂಬ ವಿಧಾನವನ್ನ ಯಾವುದೇ ತನಿಖಾ ಸಂಸ್ಥೆಯೂ ಅನುಸರಿಸುವುದಿಲ್ಲ ಎಂಬುದನ್ನ ಸಾರ್ವಜನಿಕರು ಅರಿತಿರಬೇಕು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ವಿವರಿಸಿದರು.

### ಕಠಿಣ ಕ್ರಮಗಳ ಫಲ

**ಬೆಂಗಳೂರು ಪೊಲೀಸರು ನಿರಂತರವಾಗಿ ನಡೆಸುತ್ತಿರುವ ಜಾಗೃತಿ ಅಭಿಯಾನಗಳು, ಸಂದೇಶಗಳು ಹಾಗೂ ಕಠಿಣ ಕ್ರಮಗಳ ಫಲವಾಗಿ ಕಳೆದ ಮೂರು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಪ್ರಕರಣಗಳ ಸಂಖ್ಯೆ ಹಾಗೂ ಕಳೆದುಕೊಂಡ ಹಣದ ಪ್ರಮಾಣದಲ್ಲಿ ಕೊಂಚ ಇಳಿಮುಖ ಕಂಡುಬಂದಿದೆ.**

> **ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಪೊಲೀಸರು ವಿಡಿಯೋ ಕರೆ ಮೂಲಕ 'ಡಿಜಿಟಲ್ ಅರೆಸ್ಟ್' ಮಾಡುವುದಿಲ್ಲ ಎಂಬ ಕನಿಷ್ಠ ಜಾಗೃತಿ ಪ್ರತಿಯೊಬ್ಬರಲ್ಲೂ ಮೂಡಿದರೆ ಮಾತ್ರ ಈ ತರಹದ ಬೃಹತ್ ಸೈಬರ್ ಲೂಟಿಗೆ ಸಂಪೂರ್ಣ ತಡೆ ಹಾಕಲು ಸಾಧ್ಯ ಎಂದು ತಿಳಿಸಿದ್ದಾರೆ- ಪೊಲೀಸರು**

ವಿವಾದವನ್ನು ಬಗೆಹರಿಸಲು ರಚಿಸಲಾಗಿದ್ದ ನ್ಯಾಯಮೂರ್ತಿ ಬಚಾವತ್ ನೇತೃತ್ವದ ನ್ಯಾಯಮಂಡಳಿ 1976ರ ಮೇ 27ರಂದು ತನ್ನ ತೀರ್ಪು ಪ್ರಕಟಿಸಿತ್ತು

# ಭೀಮಾ ನದಿ ನೀರಿನ ದುರ್ಬಳಕೆಯಿಂದ ಕರ್ನಾಟಕಕ್ಕೆ ಸಂಕಷ್ಟ

**ಉದಯವಾಹಿನಿ, ಕಲಬುರಗಿ**

ಮಹಾರಾಷ್ಟ್ರವು ಭೀಮಾ ನದಿ ನೀರನ್ನು ಸಮರ್ಪಕವಾಗಿ ನಿರ್ವಹಿಸದ ಕಾರಣ ಉತ್ತರ ಜಿಲ್ಲೆಗಳಾದ ಕಲಬುರಗಿ, ಯಾದಗಿರಿ, ವಿಜಯಪುರ ಹಾಗೂ ರಾಯಚೂರು ಜಿಲ್ಲೆಯ ಕೆಲವು ಭಾಗಗಳು ಆಗಾಗ್ಗೆ ಬರ ಅಥವಾ ಪ್ರವಾಹದ ಸಂಕಷ್ಟಕ್ಕೆ ಸಿಲುಕುತ್ತಿವೆ.

1. ಮೊರೆ ಹೋಗಲು ರಾಜ್ಯ ಸರ್ಕಾರ ಮುಂದಾಗಿಲ್ಲ.
2. 1976ರ ಮೇ 27ರಂದು ತನ್ನ ತೀರ್ಪು ಪ್ರಕಟಿಸಿತ್ತು
3. ಅದರಂತೆ ಮಹಾರಾಷ್ಟ್ರಕ್ಕೆ 95 ಟಿಎಂಸಿ ಅಡಿ

ಆದರೆ, ಹೆಚ್ಚುವರಿ ನೀರನ್ನು ಬಳಸಿಕೊಳ್ಳಲು ಅಗತ್ಯವಾದ ಮೂಲಸೌಕರ್ಯಗಳನ್ನು ನಿರ್ಮಿಸುವಲ್ಲಿಯೂ ಕರ್ನಾಟಕ ವಿಫಲವಾಗಿದೆ. ಕೃಷ್ಣಾ ನದಿ ನೀರಿನ ಬಳಕೆಗೆ ಸಂಬಂಧಿಸಿದ ಬಚಾವತ್ ನ್ಯಾಯಮಂಡಳಿಯ ತೀರ್ಪಿನ ಕುರಿತು ಗೆಜೆಟ್ ಅಧಿಸೂಚನೆ ಹೊರಡಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಅಥವಾ ಬಚಾವತ್ ತೀರ್ಪನ್ನು ಜಾರಿಗೊಳಿಸುವಂತೆ ಮಹಾರಾಷ್ಟ್ರಕ್ಕೆ ನಿರ್ದೇಶನ ನೀಡಲು ಸುಪ್ರೀಂ ಕೋರ್ಟ್ ಮೊರೆ ಹೋಗಲು ರಾಜ್ಯ ಸರ್ಕಾರ ಮುಂದಾಗಿಲ್ಲ.

ಕೃಷ್ಣಾ ನದಿ ಹಾಗೂ ಅದರ ಪ್ರಮುಖ ಉಪ ನದಿಯಾದ ಭೀಮಾ ನದಿಯ ನೀರಿನ ಹಂಚಿಕೆ ವಿವಾದವನ್ನು ಬಗೆಹರಿಸಲು ರಚಿಸಲಾಗಿದ್ದ ನ್ಯಾಯಮೂರ್ತಿ ಬಚಾವತ್ ನೇತೃತ್ವದ ನ್ಯಾಯಮಂಡಳಿ 1976ರ ಮೇ 27ರಂದು ತನ್ನ ತೀರ್ಪು ಪ್ರಕಟಿಸಿತ್ತು. ಅದರಂತೆ ಮಹಾರಾಷ್ಟ್ರಕ್ಕೆ 95 ಟಿಎಂಸಿ ಅಡಿ, ಕರ್ನಾಟಕಕ್ಕೆ 15 ಟಿಎಂಸಿ ಅಡಿ ಹಾಗೂ ಅವಿಭಜಿತ ಆಂಧ್ರಪ್ರದೇಶಕ್ಕೆ 6 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಲಾಗಿತ್ತು.



ಕರ್ನಾಟಕಕ್ಕೆ ನ್ಯಾಯಸಮ್ಮತವಾಗಿ ಹಂಚಿಕೆಯಾಗಿರುವ ನೀರು ನಿಯಮಿತವಾಗಿ ದೊರೆಯುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಭೀಮಾ ನದಿ ಹರಿಯುವ ಎಲ್ಲಾ ತಾಲ್ಲೂಕುಗಳಲ್ಲಿ ಭೀಮಾ ನದಿ ನೀರಿನ ಹೋರಾಟ ಸಮಿತಿಗಳನ್ನು ರಚಿಸಲಾಗುತ್ತಿದೆ.

– ಪಂಚಪ್ಪ

ಈ ಸಮಸ್ಯೆಗೆ ಕರ್ನಾಟಕ ಹಾಗೂ ಕೇಂದ್ರ ಸರ್ಕಾರಗಳು ಇನ್ನೂ ಪರಿಹಾರ ಕಂಡುಕೊಳ್ಳದಿರಲು ಈ ಭಾಗದ ಜನಪ್ರತಿನಿಧಿಗಳಲ್ಲಿನ ಇಚ್ಛಾಶಕ್ತಿಯ ಕೊರತೆಯೇ ಕಾರಣ ಎಂಬ ಆರೋಪ ಕೇಳಿಬಂದಿದೆ. ಕಾವೇರಿ ನೀರಿಗಾಗಿ ಕನ್ನಡಪರ ಸಂಘಟನೆಗಳು ತೀವ್ರ ಪ್ರತಿಭಟನೆ ನಡೆಸುತ್ತವೆ. ಆದರೆ, ಭೀಮಾ ನದಿ ನೀರಿನ ವಿಚಾರದಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರುವ ಪ್ರಯತ್ನವನ್ನು ಅವು ಮಾಡುವುದಿಲ್ಲ ಎಂದು ರೈತರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಳೆದ ನಾಲ್ಕು ದಶಕಗಳಿಂದ ಭೀಮಾ ನದಿ ನೀರಿಗಾಗಿ ನಾಲ್ಕು ಜಿಲ್ಲೆಗಳ ರೈತರ ಹೋರಾಟವನ್ನು ಮುನ್ನಡೆಸುತ್ತಿರುವ, ವಿಶೇಷವಾಗಿ ವಿಜಯಪುರ ಜಿಲ್ಲೆಯ ರೈತರ ಪರವಾಗಿ ನಿರಂತರವಾಗಿ ಹೋರಾಡುತ್ತಿರುವ ಹಾಗೂ ಬಚಾವತ್ ತೀರ್ಪು ದೊರೆಯುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಪಂಚಪ್ಪ ಕಲಬುರಗಿ ಅವರು ಮಾತನಾಡಿ, ಮಹಾರಾಷ್ಟ್ರಕ್ಕೆ ಭೀಮಾ ನದಿಯಿಂದ 95 ಟಿಎಂಸಿ ಅಡಿ ನೀರನ್ನು ಹಂಚಿಕೆ ಮಾಡಲಾಗಿದ್ದರೂ, ಅಗತ್ಯ ಪ್ರಾಧಿಕಾರಗಳ ಅನುಮತಿಯಿಲ್ಲದೆ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಆ ರಾಜ್ಯವು 150 ಟಿಎಂಸಿ ಅಡಿಗೂ ಅಧಿಕ ನೀರನ್ನು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದರು. ಅಲ್ಲದೆ, ಭೀಮಾ ನದಿಯ ನೀರನ್ನು ಸೀನಾ ನದಿಗೂ ತಿರುಗಿಸಲಾಗುತ್ತಿದೆ ಎಂದು ತಿಳಿಸಿದರು. ರೈತರು 2002ರಲ್ಲಿ ಈ ವಿಚಾರದಲ್ಲಿ ಮಧ್ಯಪ್ರವೇಶಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಕರ್ನಾಟಕವು 15 ಟಿಎಂಸಿ ಅಡಿ ನೀರನ್ನು ಬಳಸಿಕೊಳ್ಳಲು ಅವಕಾಶ ನೀಡುವಂತೆ ನಿರ್ದೇಶನ ನೀಡಿದ್ದರೂ, ಈವರೆಗೂ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿಲ್ಲ.

### 4 ಜಿಲ್ಲೆಗೆ ಸಂಕಷ್ಟ ತಪ್ಪಿಲ್ಲ

ಭೀಮಾ ನದಿಯ ಜಲಾನಯನ ಪ್ರದೇಶದಲ್ಲಿ ಸಾಮಾನ್ಯ ಮಳೆಯಾದಾಗಲೂ ಮಹಾರಾಷ್ಟ್ರವು ಕರ್ನಾಟಕಕ್ಕೆ ನೀರು ಬಿಡುಗಡೆ ಮಾಡುವುದಿಲ್ಲ ಅಥವಾ ಅತ್ಯಲ್ಪ ಪ್ರಮಾಣದ ನೀರನ್ನು ಮಾತ್ರ ಹರಿಸುತ್ತದೆ. ಇದರಿಂದ ಕರ್ನಾಟಕದ ನಾಲ್ಕು ಜಿಲ್ಲೆಗಳು ಬರದ ಸಂಕಷ್ಟಕ್ಕೆ ಸಿಲುಕುತ್ತವೆ.

## ಮತಕ್ಷೇತ್ರಕ್ಕೆ ತಕ್ಕಂತೆ ತಾಪಂ, ಜಿಪಂ ಚುನಾವಣೆ ಮೀಸಲಾತಿ ಪ್ರಕಟಿಸದೆ ಮುಸ್ಲಿಮರಿಗೆ ಅನ್ಯಾಯ

**ಉದಯವಾಹಿನಿ, ಚಿಂಚೋಳಿ**

ವಿಧಾನಸಭಾ ಮತಕ್ಷೇತ್ರಕ್ಕೆ ತಕ್ಕಂತೆ ತಾಲ್ಲೂಕಾ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಮೀಸಲಾತಿ ಪ್ರಕಟ ಮಾಡದೆ ಮುಸ್ಲಿಂ ಹಾಗೂ ಹಿಂದುಳಿದ ವರ್ಗಗಳಿಗೆ ಕಾಂಗ್ರೆಸ್ ಪಕ್ಷ ಅನ್ಯಾಯ ಮಾಡಿದೆ ಎಂದು ಕಲಬುರ್ಗಿ ಮಾಜಿ ಸಂಸದ ಡಾ.ಉಮೇಶ ಜಾಧವ ಆರೋಪಿಸಿದರು.

ಪಟ್ಟಣದ ಬಿಜೆಪಿ ಕಛೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು,ಚಿಂಚೋಳಿ ಮತಕ್ಷೇತ್ರದಲ್ಲಿ ಒಟ್ಟಾರೆ ಶೇ.50ಪ್ರತಿಶತಃ ಕ್ಕಿಂತ ಹೆಚ್ಚು ಮುಸ್ಲಿಂ ಹಿಂದುಳಿದ ವರ್ಗಗಳ ಜನಸಂಖ್ಯೆವಿದೆ ಆದರೆ ಜಿಪಂ. ಚುನಾವಣೆ ಮೀಸಲಾತಿಯಲ್ಲಿ ಹಿಂದುಳಿದ ಅ ವರ್ಗವನ್ನು ಸಂಪೂರ್ಣ ಕಡೆಗಣಿಸಿದೆ ಕಾಂಗ್ರೆಸ್ ಸರ್ಕಾರ.

ಕಾಂಗ್ರೆಸ್ ನವರು ಅವರ ಮನಸ್ಸಿಗೆ ಬಂದಂತೆ ಮೀಸಲಾತಿ ಮಾಡಿಕೊಂಡು ಮುಸ್ಲಿಂ,ದಲಿತ,ಕೋಲಿ ಕಬ್ಬಲಿಗ,ಈಡಿಗಾ,ಕುರುಬ,ಸೇರಿದಂತೆ ವಿವಿಧ ಸಮೂದಾಯಗಳಿಗೆ ತಾಪಂ.ಜಿಪಂ.ಚುನಾವಣಾ ಮೀಸಲಾತಿಯಲ್ಲಿ



ಕಾಂಗ್ರೆಸ್ ಅನ್ಯಾಯ ಮಾಡಿದೆ.

ಜಿಲ್ಲೆಯಲ್ಲಿ ಕೆಡಿಪಿ ಸಭೆ,ದಿಶಾ ಸಭೆ,ಬ್ಯಾಂಕರ್ಸ್ ಸಭೆಗಳು ಮಾಡಿಲ್ಲ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ ನನಗೆ ಚಿಂಚೋಳಿ ಎಂಪಿ ಎಂದು ಹೇಳುವ ಕಲಬುರ್ಗಿ ಉಸ್ತುವಾರಿ ಸಚಿವರು ಮತ್ತು ಸಂಸದ ರಾಧಾಕೃಷ್ಣ,ಮಾಜಿ ಜಿಲ್ಲಾಧ್ಯಕ್ಷ ಜಗದೇವ ಗುತ್ತೇದಾರ ಅವರು ಈಗಿನ ಕಲಬುರ್ಗಿ ಸಂಸದ ರಾಧಾಕೃಷ್ಣ ಅವರು ದಿಲ್ಲಿಯ ಸಂಸದರು ಅಥವಾ ಬೆಂಗಳೂರು ಸಂಸದರು ಎಂದು ಹೇಳಬೇಕು ಎಂದು ಮಾಜಿ ಸಂಸದ ಡಾ.ಉಮೇಶ ಜಾಧವ ಲೇವಡಿ ಮಾಡಿದರು.

ಗೃಹ ಸಚಿವ ಪ್ರಿಯಾಂಕ್ ಖರ್ಗೆಯವರು ರಾಷ್ಟ್ರ ಅಂತರಾಷ್ಟ್ರೀಯ ಬಗ್ಗೆ ಮಾತನಾಡುವವರು ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲ ಜಿಲ್ಲೆಯ ವಿವಿಧ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಪರದಾಡುತ್ತಿದ್ದಾರೆ,ಅಧಿಕಾರಿಗಳು ಯಾರ ಮಾತು ಕೇಳುತ್ತಿಲ್ಲ ಮೊದಲು ತಮ್ಮ ಜಿಲ್ಲೆಯ ಅಭಿವೃದ್ಧಿ ಮತ್ತು ಜನರ ಸಮಸ್ಯೆಗಳಿಗೆ ಸ್ಪಂದನೆ ನೀಡುವಂತೆ ಮಾಜಿ ಎಂಪಿ ಡಾ.ಉಮೇಶ ಜಾಧವ ಸಲಹೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಗೋಪಾಲರಾವ ಕಟ್ಟಿಮನಿ,ಕೆಎಂ ಬಾರಿ,ಶ್ರೀಮಂತ ಕಟ್ಟಿಮನಿ,ಅಶೋಕ್ ಚವ್ಹಾಣ,ಚಂದ್ರಶೇಖರ ಗುತ್ತೇದಾರ,ಚಂದ್ರಶೇಟ್ಟಿ ಜಾಧವ,ರಾಜು ಪವ್ಹಾರ,ವಿಜಯಕುಮಾರ ರಾಠೋಡ,ವಿಜಯಕುಮಾರ್ ಚೆಂಗಟಾ,ಪ್ರೇಮಸಿಂಗ್ ಜಾಧವ,ಹಣಮಂತ ಪೂಜಾರಿ,ಲೋಕೆಶ ಶೇಳ್ಳಗಿ,ನೀಲಕಂಠ ರಾಠೋಡ,ಗೋಪಾಲ ಜಾಧವ ಅನೇಕರಿದ್ದರು.

## ಐನೋಳ್ಳಿ ಜಿಪಂ ಪರಿಶಿಷ್ಟ ಪಂಗಡ ಮೀಸಲಾತಿಗೆ ಆಕ್ಷೇಪ

**ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ಐನೋಳ್ಳಿ ಜಿಲ್ಲಾ ಪಂಚಾಯತ್ ಪರಿಶೀಷ್ಟ ಪಂಗಡ ಮೀಸಲಾತಿ ಪ್ರಕಟ,ಪರಿಶೀಷ್ಟ ಜಾತಿಗೆ ಅನ್ಯಾಯವಾಗಿದೆ ಎಂದು ವಕೀಲರ ಸಂಘದ ಮಾಜಿ ಅಧ್ಯಕ್ಷ ಶ್ರೀಮಂತ



ಕಟ್ಟಿಮನಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ತಾಲ್ಲೂಕಿನ ಐನೋಳ್ಳಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಪರಿಶೀಷ್ಟ ಪಂಗಡದ 400ರಿಂದ 500ಮತಗಳಿವೆ ಆದರೆ ಪರಿಶೀಷ್ಟ ಜಾತಿಯ ಮತಗಳು ಕನಿಷ್ಠ 10ರಿಂದ 12ಸಾವಿರ ಮತಗಳಿವೆ ಆದರೆ ಪರಿಶೀಷ್ಟ ಜಾತಿ ಮೀಸಲಾತಿ ಘೋಷಣೆ ಮಾಡದೆ ಪರಿಶೀಷ್ಟ ಜಾತಿ ಮತದಾರರಿಗೆ ಅನ್ಯಾಯವಾಗಿದೆ. ಹಾಗೂ ಮುಸ್ಲಿಂ ಸಮುದಾಯದ ಮತ್ತು ಹಿಂದುಳಿದ ವರ್ಗಗಳ ಮತಗಳು ಅತಿಹೆಚ್ಚಿನ ಜನಸಂಖ್ಯೆವಿದ್ದು ಮೀಸಲಾತಿ ಬರದೆ ಇರುವುದರಿಂದ ಸಮೂದಾಯಗಳಿಗೆ ಅನ್ಯಾಯವಾಗಿದೆ ಎಂದರು. ಇದಕ್ಕೂ ಮೊದಲು ಕೂಡ ಪರಿಶೀಷ್ಟ ಪಂಗಡ ಮೀಸಲಾತಿ ಆಗಿತ್ತು ಆಗ ಕೂಡ ಚುನಾವಣೆ ನಡೆದಿತ್ತು ಈಗ ಅತಿಹೆಚ್ಚು ಜನಸಂಖ್ಯೆವುಳ್ಳ ಸಮೂದಾಯಗಳಿಗೆ ಅನ್ಯಾಯವಾಗಿದ್ದು ಐನೋಳ್ಳಿ ಜಿಲ್ಲಾ ಪಂಚಾಯತ್ ಮೀಸಲಾತಿಯನ್ನು ಮರುಪರಿಶೀಲಿಸಿ ಸೂಕ್ತವಾದ ಜನಸಂಖ್ಯೆವುಳ್ಳ ಮೀಸಲಾತಿಯನ್ನು ಘೋಷಿಸಬೇಕು,ಐನೋಳ್ಳಿ ಜಿಪಂ.ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಪರಿಶೀಷ್ಟ ಜಾತಿ ಬರದೆ ಇರುವುದರಿಂದ ಸಮಾಜಕ್ಕೆ ಬಗೆದ ದ್ರೋಹವಾಗಿದೆ ಮುಂದಿನ ದಿನಗಳಲ್ಲಿ ಮತ್ತೊಮ್ಮೆ ಪರಿಶೀಲಿಸಿ ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ಘೋಷಿಸಬೇಕು ಇಲ್ಲಾದಿದ್ದರೆ ನ್ಯಾಯಾಲಯ ಮೋರೆ ಹೋಗಲಾಗುವುದು ಎಂದು ಕಾಂಗ್ರೆಸ್ ಸರ್ಕಾರದ ವಿರುದ್ದ ವಕೀಲರ ಸಂಘದ ಮಾಜಿ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ ಹರಿಹಾಯ್ದರು.

## ಕ್ಷಮೆ ಯಾಚಿಸದಿದ್ದರೆ 200 ಟಿಪ್ಪರ್‌ಗಳೊಂದಿಗೆ ಪ್ರತಿಭಟನೆ

**ಉದಯವಾಹಿನಿ, ಯಾದಗಿರಿ**

ಗುರುಮಠಕಲ್ ಶಾಸಕ ಶರಣಗೌಡ ಕಂದಕೂರ ಅವರು ಟಿಪ್ಪರ್‌ಗೆ ಬೆಂಕಿ ಹಚ್ಚುವ ಕುರಿತು ನೀಡಿದ ಹೇಳಿಕೆಯನ್ನು ಖಂಡಿಸಿರುವ ಯಾದಗಿರಿ ಜಿಲ್ಲಾ ಟಿಪ್ಪರ್ ಮಾಲೀಕರ ಸಂಘ, ಶಾಸಕರು ತಮ್ಮ ಹೇಳಿಕೆಗೆ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದೆ. ಇಲ್ಲದಿದ್ದರೆ ಅಕ್ಟೋಬರ್ 12ರಂದು ಸುಮಾರು 200 ಟಿಪ್ಪರ್‌ಗಳೊಂದಿಗೆ ಪ್ರತಿಭಟನೆ ನಡೆಸುವುದಾಗಿ ಸಂಘದ ಮುಖಂಡರು ಎಚ್ಚರಿಕೆ ನೀಡಿದ್ದಾರೆ. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಣಮೇಗೌಡ ಬೀರನಕಲ್, ಜನಪ್ರತಿನಿಧಿಗಳ ಅಧಿಕಾರ ಜನರ ಸೇವೆ ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಇರಬೇಕೇ ಹೊರತು, ಜನರಲ್ಲಿ ಆತಂಕ ಮೂಡಿಸುವುದಕ್ಕಾಗಿ ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಕ್ರಮ ಮರಳು ಸಾಗಣೆ ಹಾಗೂ ಓವರ್‌ಲೋಡ್ ಟಿಪ್ಪರ್‌ಗಳ ಸಂಚಾರದ ಕುರಿತು ದೂರುಗಳಿದ್ದರೆ ಸಂಬಂಧಪಟ್ಟ ಇಲಾಖೆಗಳು ಸೂಕ್ತ ಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸಿದವರ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಲಿ. ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲಿಸಿ, ನಿಯಮಾನುಸಾರ ವಾಹನಗಳನ್ನು ಜಪ್ತಿ ಮಾಡುವುದಕ್ಕೂ ಸಂಘದ ವಿರೋಧವಿಲ್ಲ. ಆದರೆ ಟಿಪ್ಪರ್‌ಗಳಿಗೆ ಬೆಂಕಿ ಹಚ್ಚುವ ರೀತಿಯ ಹೇಳಿಕೆ ನೀಡುವುದು ಸೂಕ್ತವಲ್ಲ ಎಂದು ಹೇಳಿದರು. ಶಾಸಕರು ಸಂವಿಧಾನಬದ್ಧ ಜವಾಬ್ದಾರಿಯುತ ಹುದ್ದೆಯಲ್ಲಿದ್ದು, ಸಾರ್ವಜನಿಕ ಸಮಸ್ಯೆಗಳಿಗೆ ಕಾನೂನಿನ ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಬೇಕು. ಅಧಿಕಾರಿಗಳ ಸಮ್ಮುಖದಲ್ಲಿ ಇಂತಹ ಹೇಳಿಕೆಗಳು ವ್ಯಕ್ತವಾದರೆ ಸಾರ್ವಜನಿಕರಲ್ಲಿ ತಪ್ಪು ಸಂದೇಶ ರವಾನೆಯಾಗುವ ಸಾಧ್ಯತೆಯಿದೆ. ಕಾನೂನು ಎಲ್ಲರಿಗೂ ಒಂದೇ ಆಗಿದ್ದು, ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂದು ಅಭಿಪ್ರಾಯಪಟ್ಟರು.

## ಹೆದ್ದಾರಿಯಿಂದ ಜಮೀನುಗಳಿಗೆ ರಸ್ತೆ ಸಂಪರ್ಕ ಕಡಿತ: ರೈತರ ಹೋರಾಟಕ್ಕೆ ಬಯ್ಯಾಪುರ ಬೆಂಬಲ

**ಉದಯವಾಹಿನಿ, ಮಸ್ಕಿ**

ಬೆಳಗಾವಿ–ಹೈದರಾಬಾದ್ ರಾಷ್ಟ್ರೀಯ ಹೆದ್ದಾರಿ 748ಎ ನಿರ್ಮಾಣದಿಂದ ರೈತರ ಜಮೀನುಗಳಿಗೆ ತೆರಳುವ ರಸ್ತೆಗಳು ಮುಚ್ಚಿಹೋಗಿದ್ದು, ಅವೈಜ್ಞಾನಿಕ ಅಂಡರ್‌ಪಾಸ್‌ಗಳಿಂದ ಕೃಷಿ ಚಟುವಟಿಕೆಗಳಿಗೆ ತೀವ್ರ ತೊಂದರೆಯಾಗಿದೆ.

ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪುರ ಅವರು ಮಟ್ಟೂರು, ಸಂತೆಕೆಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋನವಾರ, ಮುಸ್ಲಿಕಾರ್ಲಕುಂಟಿ, ಕುಣಿಕೆಲ್ಲೂರು, ಮಿಟ್ಟಿಕೆಲ್ಲೂರು ಹಾಗೂ ಮಟ್ಟೂರು ಗ್ರಾಮಗಳಿಗೆ ಭೇಟಿ ನೀಡಿ ರೈತರ ಸಮಸ್ಯೆಗಳನ್ನು ವೀಕ್ಷಿಸಿದರು.

ರೈತರಿಗೆ ಸುರಕ್ಷಿತ ಹಾಗೂ ವೈಜ್ಞಾನಿಕ ರಸ್ತೆ ಸಂಪರ್ಕ ಕಲ್ಪಿಸಬೇಕೆಂಬ ಹೋರಾಟ ಸಮಿತಿಯ ಬೇಡಿಕೆ ನ್ಯಾಯಯುತವಾಗಿದೆ. ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಹೋರಾಟಕ್ಕೆ ಸಂಪೂರ್ಣ ಬೆಂಬಲವಿದ್ದು, ಸಮಸ್ಯೆ ಪರಿಹಾರಕ್ಕಾಗಿ ಅಧಿಕಾರಿಗಳು ಹಾಗೂ



ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಸಂಚಾಲಕ ಶರಣಪ್ಪ ಉದ್ಬಾಳ, ಹೋರಾಟ ಸಮಿತಿ ಸದಸ್ಯರಾದ, ಅಮರೇಗೌಡ ಮಾಳಪುರ, ಶರಣಗೌಡ ಬಸಪುರ, ಶಂಕರಣ್ಣ ಸಾಹುಕಾರ, ತಿಪ್ಪನಗೌಡ ಗೋನವಾರ, ತಿರುಪತಿ ಗೋನವಾರ, ಬಸವರಾಜ ಬಸಾಪುರ, ಬಸನಗೌಡ ಹಳ್ಳಿ, ಶಿವಪುತ್ರಗೌಡ ಹಳ್ಳಿ, ಬಸವರಾಜ ಧಣಿ, ಶರಣಬಸವ ಉಮಲೂಟಿ, ಕುಮಾರ ಮುಸ್ಲಿಕಾರ್ಲಕುಂಟಿ, ಶರಣಪ್ಪ ತೆಕ್ಕಲಕೋಟೆ ಸೇರಿದಂತೆ ಇನ್ನಿತರಿದ್ದರು.

## ವಿಜಯಪುರ ಜಿಲ್ಲೆಗೆ 371(ಜೆ) ಮೀಸಲಾತಿ ಕಲ್ಪಿಸಲು ಧರಣಿ ನಿರತರ ಆಗ್ರಹ




**ಉದಯವಾಹಿನಿ, ವಿಜಯಪುರ**

ಜಿಲ್ಲೆಯನ್ನು ಸಂವಿಧಾನದ 371(ಜೆ) ಕಲಂ ವ್ಯಾಪ್ತಿಗೆ ಒಳಪಡಿಸಿ, ಜಿಲ್ಲೆಯ ಯುವಜನರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ವಿಶೇಷ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿ ಸಿಂದಗಿ ನಗರದ ಬಸವೇಶ್ವರ ವೃತ್ತದ ಬಳಿ ಕಳೆದ ಎಂಟು ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ವಿವಿಧ ಸಂಘಟನೆಗಳು ಬೆಂಬಲ ಸೂಚಿಸಿದವು. ಗೋಕಾಕ ಚಳವಳಿಯ ರೂವಾರಿ ಶ್ರೀ ರೇ.ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ ಧರಣಿ ನಡೆಯುತ್ತಿದ್ದು, ಕರ್ನಾಟಕ ಸರ್ಕಾರಿ ಹಾಗೂ ಅರೆ ಸರ್ಕಾರಿ ನಿವೃತ್ತ ನೌಕರರ ಸಂಘ, ಶ್ರೀ ನೀಲಗಂಗಾದೇವಿ ಚೌಕ ಯುವಕ ಮಂಡಳಿ ಹಾಗೂ ಬಿಜೆಪಿ ಮಹಿಳಾ ಮೋರ್ಚಾ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ವಿಜಯಪುರ ಜಿಲ್ಲೆಯ ಸಿಂದಗಿ, ಇಂಡಿ, ಬಾಗೇವಾಡಿ ಹಾಗೂ ಮುದ್ದೇಬಿಹಾಳ ತಾಲ್ಲೂಕುಗಳು ಡಾ. ಡಿ.ಎಂ. ನಂಜುಂಡಪ್ಪ ವರದಿಯಲ್ಲಿ ಹಿಂದುಳಿದ ಪ್ರದೇಶಗಳೆಂದು ಗುರುತಿಸಲ್ಪಟ್ಟಿದ್ದರೂ, ಜಿಲ್ಲೆಯನ್ನು 371(ಜೆ) ಅಡಿಯಲ್ಲಿ ಪರಿಗಣಿಸದಿರುವುದು ಅನ್ಯಾಯವಾಗಿದೆ ಎಂದು ಹೋರಾಟಗಾರರು ಆರೋಪಿಸಿದರು. ಕಲ್ಯಾಣ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ಜಾರಿಗೆ ಬಂದಿರುವ 371(ಜೆ) ಕಲಂನ ಸೌಲಭ್ಯಗಳು ವಿಜಯಪುರ ಜಿಲ್ಲೆಯ ಜನರಿಗೂ ದೊರೆಯಬೇಕು. ವಿಶೇಷವಾಗಿ ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಜಿಲ್ಲೆಯ ಯುವಜನರಿಗೆ ನ್ಯಾಯಯುತ ಮೀಸಲಾತಿ ದೊರೆಯುವಂತೆ 371(ಜೆ) ಅನ್ನು ವಿಜಯಪುರ ಜಿಲ್ಲೆಗೆ ಅನ್ವಯಿಸಬೇಕು ಎಂದು ಒತ್ತಾಯಿಸಿದರು. ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದ ವಿಜಯಪುರ ಜಿಲ್ಲೆ ಅಭಿವೃದ್ಧಿ ಹಾಗೂ ಅವಕಾಶಗಳಲ್ಲಿ ಹಿಂದುಳಿದಿದೆ. ಜಿಲ್ಲೆಯ ಜನರ ಬಹುಕಾಲದ ಬೇಡಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, 371(ಜೆ) ಸೌಲಭ್ಯ ವಿಸ್ತರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮುಖಂಡರು ಆಗ್ರಹಿಸಿದರು.

ಜಿಲ್ಲೆಯಲ್ಲಿ ತಾಲ್ಲೂಕುವಾರು, ಹೋಬಳಿವಾರು ಮತ್ತು ಗ್ರಾಮವಾರು ಮಳೆ ಕೊರತೆಯ ಮಾಹಿತಿ. ಬಿತ್ತನೆ ಮಾಡಲಾಗದ ಹಾಗೂ ಬೆಳೆ ಹಾನಿಗೊಳಗಾದ ಪ್ರದೇಶಗಳು

# ಮೇವು ಸಮಸ್ಯೆ ನಿವಾರಣೆಗೆ ಮುನ್ನೆಚ್ಚರಿಕೆ ಕ್ರಮಕ್ಕೆ ಡಿಸಿ ಸೂಚನೆ

**ಉದಯವಾಹಿನಿ, ಶಿವಮೊಗ್ಗ**

ಮಳೆ ಕೊರತೆ, ಬೆಳೆ ಹಾನಿ ಮತ್ತು ಕೃಷಿ–ತೋಟಗಾರಿಕೆ ಬೆಳೆಗಾರರ ಸಂಕಷ್ಟಗಳ ಕುರಿತು ತ್ವರಿತವಾಗಿ ತಾಲ್ಲೂಕುವಾರು ನಿಖರ ಮತ್ತು ವಾಸ್ತವ ಮಾಹಿತಿ ಸಂಗ್ರಹಿಸಿ, ಸಕಾಲದಲ್ಲಿ ವರದಿ ನೀಡಲು ಹಾಗೂ ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಉಂಟಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚಿಸಿದರು.

1. ಜಾನುವಾರುಗಳಿಗೆ ಮೇವಿನ ಸಮಸ್ಯೆ
2. ಬೆಳೆಗಳ ಸ್ಥಿತಿಗತಿ ಮತ್ತು ಮಳೆ ಕೊರತೆ
3. ಅಗತ್ಯ ಕ್ರಮಗಳ ಬಗ್ಗೆಯೂ ಗಮನ

ಅವರು ಇಂದು ತಮ್ಮ ಕಚೇರಿಯ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಬರ ನಿರ್ವಹಣೆ ಕುರಿತು ಏರ್ಪಡಿಸಲಾಗಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ಬೆಳೆ ವಿಮೆ ನೋಂದಣಿ, ಪರಿಹಾರ ಹಾಗೂ ಇತರ ಸೌಲಭ್ಯಗಳ ಕುರಿತು ರೈತರಿಗೆ ಮಾಹಿತಿ ನೀಡಿ ಅರ್ಹರಿಗೆ ನಿಯಮಾನುಸಾರ ನೆರವು ದೊರಕಿಸಿಕೊಡಬೇಕು. ಸಂಬಂಧಪಟ್ಟ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು.

ಜಿಲ್ಲೆಯಲ್ಲಿ ತಾಲ್ಲೂಕುವಾರು, ಹೋಬಳಿವಾರು ಮತ್ತು ಗ್ರಾಮವಾರು ಮಳೆ ಕೊರತೆಯ ಮಾಹಿತಿ. ಬಿತ್ತನೆ ಮಾಡಲಾಗದ ಹಾಗೂ ಬೆಳೆ ಹಾನಿಗೊಳಗಾದ ಪ್ರದೇಶಗಳು. ಬೆಳೆಗಳ ಸ್ಥಿತಿಗತಿ ಮತ್ತು ಮಳೆ ಕೊರತೆಯಿಂದ ಉಂಟಾಗಿರುವ ಹಾನಿಯ ಅಂದಾಜು, ಮಳೆ ಕೊರತೆಯಿಂದ ಕೃಷಿ ಹಾಗೂ ಕುಡಿಯುವ ನೀರಿನ ಮೂಲಗಳ ಮೇಲೆ ಉಂಟಾಗಿರುವ ಪರಿಣಾಮಗಳ ಕುರಿತು ಮಾಹಿತಿ ಸಂಗ್ರಹಿಸಿಟ್ಟುಕೊಳ್ಳುವಂತೆ ಸೂಚಿಸಿದ ಅವರು, ಮಳೆ ವೈಫಲ್ಯದಿಂದ ತೀವ್ರವಾಗಿ ಬಾಧಿತವಾಗಿರುವ ಗ್ರಾಮಗಳು ಮತ್ತು ಪ್ರದೇಶಗಳನ್ನು ಗುರುತಿಸುವಂತೆ ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆಯೂ ಗಮನಹರಿಸುವಂತೆ ಅವರು ಸೂಚಿಸಿದರು.



### ಅಧಿಕಾರಿಗಳಿಗೆ ಸೂಚನೆ

ರೈತರಿಗೆ ಪರ್ಯಾಯ ಬೆಳೆ ಪದ್ಧತಿ ಹಾಗೂ ಕಡಿಮೆ ನೀರು ಬಳಸುವ ಬೆಳೆಗಳ ಕುರಿತು ಮಾಹಿತಿ ನೀಡುವಂತೆ ಕೃಷಿ ಅಧಿಕಾರಿಗಳಿಗೆ ಸೂಚಿಸಿದ ಅವರು, ಬೆಳೆ ಪ್ರಮಾಣದ ಖಚಿತ ಮಾಹಿತಿ ದಾಖಲಿಸುವ ಬಗ್ಗೆ ಮತ್ತು ಬೆಳೆ ಹಾನಿ ಪ್ರಮಾಣದ ಬಗ್ಗೆಯೂ ಅವರು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ ಮಾಹಿತಿ ಪಡೆದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳು, ಗ್ರಾಮವಾರು ಕುಡಿಯುವ ನೀರಿನ ಲಭ್ಯತೆ ಹಾಗೂ ನೀರಿನ ಮೂಲಗಳ ಸ್ಥಿತಿಗತಿ. ಕೊಳವೆಬಾವಿ, ತೆರೆದ ಬಾವಿ ಮತ್ತು ಕೆರೆಗಳಲ್ಲಿನ ನೀರಿನ ಮಟ್ಟದ ಪರಿಶೀಲನೆ. ಕೆಟ್ಟುಹೋಗಿರುವ ಕೊಳವೆಬಾವಿ ಮತ್ತು ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆಗಳ ದುರಸ್ತಿ. ಅಗತ್ಯವಿರುವ ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲು ಸಿದ್ಧತೆ, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಕೈಗೊಳ್ಳಬಹುದಾದ ತುರ್ತು ಕ್ರಮಗಳ ಬಗ್ಗೆ ಅಧಿಕಾರಿಗಳು ಸದಾ ಮಾಹಿತಿ ಹೊಂದಿರುವಂತೆ ಸೂಚಿಸಿದ ಅವರು, ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳ ಪ್ರಗತಿ ಮತ್ತು ನಿರ್ವಹಣೆ, ಕುಡಿಯುವ ನೀರಿನ ಗುಣಮಟ್ಟ ಪರಿಶೀಲನೆ ನಡೆಸುವಂತೆಯೂ ಅವರು ಸೂಚಿಸಿದರು.

ಜಾನುವಾರುಗಳಿಗೆ ಕುಡಿಯುವ ನೀರಿನ ಲಭ್ಯತೆ, ಮೇವು ಕೊರತೆಯಿರುವ ಪ್ರದೇಶಗಳನ್ನು ಗುರುತಿಸುವುದು, ಅಗತ್ಯವಿದ್ದಲ್ಲಿ ಮೇವು ವಿತರಣೆ, ಪಶುಗಳಿಗೆ ಅಗತ್ಯವಿರುವ ಪೌಷ್ಟಿಕ ಆಹಾರ ಮತ್ತು ಪಶುವೈದ್ಯಕೀಯ ಸೇವೆಗಳ ಲಭ್ಯತೆ ಹಾಗೂ ಬರ ಪರಿಸ್ಥಿತಿಯಲ್ಲಿ ಜಾನುವಾರುಗಳ ರಕ್ಷಣೆಗಾಗಿ ಕೈಗೊಳ್ಳಬೇಕಾದ ತುರ್ತು ಕ್ರಮಗಳ ಬಗ್ಗೆ ಪಶುಪಾಲನಾ ಇಲಾಖೆಯ ಅಧಿಕಾರಿಗಳು ಗಮನಹರಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

# ಮಿನಿ ನ್ಯೂಸ್

## ಬಂಧನ ಖಂಡಿಸಿ ಎದ್ದೇಳು ಕರ್ನಾಟಕದ ಪ್ರತಿಭಟನೆ

**ಉದಯವಾಹಿನಿ, ಬಳ್ಳಾರಿ**

ಎಸ್ ಐ ಆರ್ ವಿರುದ್ಧ ಹಾಗೂ ದೆಹಲಿಯಲ್ಲಿ ಹೋರಾಟಗಾರರಾದ ದೆಹಲಿ ವಿಮಾನದಲ್ಲಿ ಅಭಿಜಿತ್ ದೀಪ್ಕೆ ಮೊದಲಾದವರನ್ನು ಅರೆಸ್ಟ್ ಮಾಡಿರುವುದರ ವಿರುದ್ಧ ನಗರದಲ್ಲಿ ನಿನ್ನೆ ಸಂಜೆ ಪಂಜಿನ ಮೆರವಣಿಗೆ ಮೂಲಕ ಎದ್ದೇಳು ಕರ್ನಾಟಕ ಮುಖಂಡರು ಪ್ರತಿಭಟನೆ ನಡೆಸಿದರು . ನಗರದ ಗಡಗಿ ಚೆನ್ನಪ್ಪ ಸರ್ಕಲ್ ನಿದ ರೈಲ್ವೇ ನಿಲ್ದಾಣದ ಬಳಿಯ ಮಹಾತ್ಮ ಗಾಂಧಿ ಪ್ರತಿಮೆ ವರೆಗೆ ಎಸ್ ಐ ಆರ್ ವಿರುದ್ದ, ಚುನಾವಣಾ ಆಯೋಗದ ವಿರುದ್ದ, ಪ್ರಧಾನಿ ಮೋದಿ, ಅಮಿತ್ ಶಾ ವಿರುದ್ದ ಘೋಷಣೆ ಕೂಗಿ. ಚುನಾವಣಾ ಆಯೋಗದ ಮುಖ್ತ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡಬೇಕೆಂದು ಆಗ್ರಹಿಸಲಾಯ್ತು. ಮತ ಚೋರಿ ವಿರುದ್ದ ಹೋರಾಟ ಮಾಡುವವರಿಗೆ ಹೆದರಿ, ಕೇಂದ್ರ ಸರ್ಕಾರ ಹೋರಾಟಗಾರರನ್ನಯ ಅಕ್ರಮವಾಗಿ ಬಂಧಿಸತೊಡಗಿದೆಂದು ಆರೋಪಿಸಲಾಯ್ತು. ಹೋರಾಟದಲ್ಲಿ ನಾಗರಿಕ ಮತ ಕಾವಲು ಸಮಿತಿ ಹಾಗೂ ಹಿರಿಯ ಪ್ರಗತಿ ಪರ ಚಿಂತಕ ಸಿರಿಗೆರೆ ಪನ್ನರಾಜ್, ವಕೀಲ ಹೆಚ್. ಸಿದ್ದಣ್ಣ, ಅಮ್ಜದ್, ವಿಜಯ್, ದುರುಗಪ್ಪ ತಳವಾರ್, ವಸಂತರಾಜ್ ಕಹಳೆ ಸತ್ಯಣ್ಣ, ಎನ್.ಡಿ. ಯಂಕಮ್ಮ, ಎರಕುಲಸ್ವಾಮಿ , ವೆಂಕಟರಾಮಣ, ಮಾರುತಿ, ಎಸ್ ಎಫ್ ಐ ಮುಖಂಡರುಗಳು, ಎಸ್ ಐ ಆರ್ ಬೆಂಬಲಿತ ವಕೀಲರು, ಕರಿಯಪ್ಪ ಗುಡಿಮನಿ ಮೊದಲಾದವರು ಹೋರಾಟದಲ್ಲಿ ಭಾಗವಹಿಸಿದ್ದರು.

## ರಂಭಾಪುರಿ ಜಗದ್ಗುರುಗಳಿಗೆ ಭವ್ಯ ಸ್ವಾಗತ ಮೆರವಣಿಗೆ

**ಉದಯವಾಹಿನಿ, ಜಮಖಂಡಿ**

ನಗರದಲ್ಲಿ ಅಕ್ಟೋಬರ್ 11ರಿಂದ 21ರವರೆಗೆ ನಡೆಯಲಿರುವ ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಅಂಗವಾಗಿ, ಜಗದ್ಗುರುಗಳ ಭವ್ಯ ಸ್ವಾಗತ ಮೆರವಣಿಗೆ ಸಂಜೆ ಅದ್ದೂರಿಯಾಗಿ ಜರುಗಿತು. ಸಾವಿರಾರು ಮುತ್ತೈದೆಯರು ಪೂರ್ಣಕುಂಭ, ಕಳಶ ಹಾಗೂ ಆರತಿ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡು ಧಾರ್ಮಿಕ ಸಂಭ್ರಮಕ್ಕೆ ಮೆರುಗು ನೀಡಿದರು. ನಗರದ ಮುಧೋಳ ರಸ್ತೆಯಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಸಂಜೆ 5 ಗಂಟೆಗೆ ಆರಂಭಗೊಂಡ ಸ್ವಾಗತ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಾಗಿತು. ಪೂರ್ಣಕುಂಭ, ಕಳಶ, ಕನ್ನಡಿ ಹಾಗೂ ವಿವಿಧ ವಾದ್ಯ ವೈಭವಗಳೊಂದಿಗೆ ಸಾಗಿದ ಮೆರವಣಿಗೆಯಲ್ಲಿ ಭಕ್ತರು ಉತ್ಸಾಹದಿಂದ ಭಾಗವಹಿಸಿದರು. ಬಾಳೆಹೊನ್ನೂರು ಶ್ರೀಮದ್ ರಂಭಾಪುರಿ ಜಗದ್ಗುರುಗಳು ತೇರಿನಲ್ಲಿ ಕುಳಿತು ಭಕ್ತರು ಹಾಗೂ ಸಾರ್ವಜನಿಕರಿಗೆ ದರ್ಶನ ನೀಡಿದರು. ಮಾರ್ಗದುದ್ದಕ್ಕೂ ಭಕ್ತರು ಜಗದ್ಗುರುಗಳ ದರ್ಶನ ಪಡೆದು ಭಕ್ತಿ ಸಮರ್ಪಿಸಿದರು. ಮೆರವಣಿಗೆಯು ಮೈಗೂರು ರಸ್ತೆಯಲ್ಲಿರುವ ಕಲೂತಿ ಕಲ್ಯಾಣ ಮಂಟಪಕ್ಕೆ ಆಗಮಿಸುವ ಮೂಲಕ ಸಮಾರೋಪಗೊಂಡಿತು. ಇದಕ್ಕೂ ಮುನ್ನ ಜಮಖಂಡಿ ನಗರದ ಕಡಪಟ್ಟಿ ಶ್ರೀ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಶರನ್ನವರಾತ್ರಿ ದಸರಾ ಧರ್ಮ ಸಮ್ಮೇಳನದ ಅಂಗವಾಗಿ ಶ್ರೀ ಜಗದ್ಗುರು ಪಂಚಾಚಾರ್ಯ ಧ್ವಜಾರೋಹಣ ಕಾರ್ಯಕ್ರಮ ಧಾರ್ಮಿಕ ಸಂಭ್ರಮದಿಂದ ಜರುಗಿತು.

## ಮೆರವಣಿಗೆ ಮೇಲೆ ಟ್ರಕ್ ಹರಿದು ಮೂವರು ಸಾವು

**ಉದಯವಾಹಿನಿ, ಬೆಳಗಾವಿ**

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಮನಗುತ್ತಿ ಮತ್ತು ಹತ್ತರಗಿ ಟೋಲ್ ಗೇಟ್ ಬಳಿ, 'ದುರ್ಗಾಮಾತಾ ದೌಡ್ ದೇವಿ' ಮೆರವಣಿಗೆಯ ಮೇಲೆ ಟ್ರಕ್ ಹರಿದ ಪರಿಣಾಮ ಮೂವರು ಮೃತಪಟ್ಟಿದ್ದು, 10ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ಮೂವರು ಸ್ಥಳದಲ್ಲೇ ಮೃತಪಟ್ಟಿದ್ದು, ಗಾಯಗೊಂಡವರ ಪೈಕಿ ನಾಲ್ವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ. ಬೆಳಗಾವಿಗೆ ಭೇಟಿ ನೀಡಿ ಹುಂಚ್ಯಾನಟ್ಟಿ ಗ್ರಾಮಕ್ಕೆ ಮೆರವಣಿಗೆ ಹಿಂತಿರುಗುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಈ ವೇಳೆ ದೇವಿಯ ಮೂರ್ತಿಯನ್ನು ಟ್ರ್ಯಾಕ್ಟರ್‌ನಲ್ಲಿ ಕೊಂಡಯ್ಯಲಾಗುತ್ತಿತ್ತು. ಆಗ ಹಿಂದಿನಿಂದ ಬಂದ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಸಾವು–ನೋವು ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಮೃತರನ್ನು ಪ್ರಕಾಶ್, ಮಹೇಶ್ ಮತ್ತು ದಾನೇಶ್ವರಿ ಎಂದು ಗುರುತಿಸಲಾಗಿದೆ. ಗಾಯಗೊಂಡವರನ್ನು ಚಿಕಿತ್ಸೆಗಾಗಿ ಬೆಳಗಾವಿ ಜಿಲ್ಲಾ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಗಾಯಾಳುಗಳ ಕುರಿತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ. ಈ ಘಟನೆಯು ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ದಾನಮ್ಮ ದೇವಿಯ ಮಹಾಪುರಾಣ ಇಂದಿನಿಂದ

**ಉದಯವಾಹಿನಿ, ಕಲಬುರಗಿ**

ನಗರದ ಅಡ್ವೊಕೇಟ್ಸ್ ಕಾಲೋನಿಯಲ್ಲಿರುವ ನೂತನ ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ನವರಾತ್ರಿ ಹಾಗೂ ದಸರಾ ಹಬ್ಬದ ಅಂಗವಾಗಿ ಶ್ರೀ ದಾನಮ್ಮ ದೇವಿಯ ಮಹಾಪುರಾಣ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಆಯೋಜಿಸಲಾಗಿದೆ.



ಈ ಕಾರ್ಯಕ್ರಮವು ಇಂದಿನಿಂದ ( ಅಕ್ಟೋಬರ್ 11) ಅ. 20 ರವರೆಗೆ ಜರುಗಲಿದ್ದು, ಪುರಾಣ ಕಾರ್ಯಕ್ರಮವನ್ನು ನರೋಣಾ ಹಾಗೂ ಗೋಳಾ (ಬಿ) ಹೊಸಮಠದ ಪೂಜ್ಯ ಚನ್ನಮಲ್ಲ ಸ್ವಾಮಿಗಳು ನಡೆಸಿಕೊಡಲಿದ್ದಾರೆ. ಪ್ರತಿದಿನ ಸಂಜೆ 6.30 ಕ್ಕೆ ಕಾರ್ಯಕ್ರಮಗಳು ಶುರುವಾಗಲಿವೆ. ಇಂದು ಸಂಜೆ ಪೂಜ್ಯ ಚಂದ್ರಗುಂಡ ಶಿವಾಚಾರ್ಯರ ಸಾನಿಧ್ಯದಲ್ಲಿ, ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರತಿ ದಿನ ಪುರಾಣದ ನಂತರ ವಿಶೇಷ ಕಾರ್ಯಕ್ರಮಗಳನ್ನ ಆಯೋಜಿಸಲಾಗಿದ್ದು, ನಗರದ ಸಾಧಕ ಉದ್ಯಮಿಗಳು, ಹಿರಿಯ ವಕೀಲರು ಹಾಗೂ 50 ವರ್ಷ ಸೇವೆ ಸಲ್ಲಿಸಿದ ವೈದ್ಯರನ್ನು ಅಲ್ಲದೆ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಉದಾರವಾಗಿ ದೇಣಿಗೆ ನೀಡಿದ ದಾನಿಗಳನ್ನು ಸನ್ಮಾನಿಸಲಾಗುತ್ತದೆ. ಮನರಂಜನೆ ಕಾರ್ಯಕ್ರಮಗಳು ಇರುತ್ತವೆ. ಭಕ್ತರಿಗೆ ಪ್ರಸಾದದ ವ್ಯವಸ್ಥೆ ಕೂಡ ಇರಲಿದೆ ಎಂದು ಶ್ರೀ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಮಂಜುನಾಥ ಜೇವರ್ಗಿ, ಕಾರ್ಯದರ್ಶಿ ಆರ್.ಜೆ ಭೂಸಾರೆ ಹಾಗೂ ಸದಸ್ಯರು ವಿನಂತಿಸಿದ್ದಾರೆ.

## ಕಲಬುರಗಿಯಲ್ಲಿ ಎಐಡಿವೈಓ–ಎಐಡಿಎಸ್‌ಓ ಪ್ರತಿಭಟನೆ

**ಉದಯವಾಹಿನಿ, ಕಲಬುರಗಿ**

ಎಸ್.ಐ.ಆರ್. ರದ್ದುಗೊಳಿಸಬೇಕು ಹಾಗೂ ಜ್ಞಾನೇಶ್ ಕುಮಾರ್ ಅವರನ್ನು ಕರ್ತವ್ಯದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿ ದೆಹಲಿ ಸೇರಿದಂತೆ ದೇಶದ ವಿವಿಧೆಡೆ ನಡೆದ ಶಾಂತಿಯುತ ಪ್ರತಿಭಟನೆಗಳ ಮೇಲೆ ಪೊಲೀಸರು ನಡೆಸಿದ ದಬ್ಬಾಳಿಕೆ ಹಾಗೂ ಮುಖಂಡರ ಅಕ್ರಮ ಬಂಧನವನ್ನು ಖಂಡಿಸಿ, 'ಅಖಿಲ ಭಾರತ ಪ್ರತಿಭಟನಾ ದಿನ'ದ ಅಂಗವಾಗಿ ಇಂದು ಕಲಬುರಗಿ ನಗರದ ಜಗತ್ ವೃತ್ತದಲ್ಲಿ ಆಕ್ರೋಶಭರಿತ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿವೈಓ ಜಿಲ್ಲಾ ಅಧ್ಯಕ್ಷರಾದ ಜಗನ್ನಾಥ ಎಸ್. ಹೆಚ್. ಮಾತನಾಡಿದರು. ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷರಾದ ತುಳಜ ರಾಮ ಎನ್. ಕೆ. ಮಾತನಾಡುತ್ತಾ "ಜನವಿರೋಧಿ ನೀತಿಗಳ ವಿರುದ್ಧ ದನಿ ಎತ್ತಿದ ವಿದ್ಯಾರ್ಥಿ, ಯುವಜನ ಸಂಘಟನೆಗಳ ಮೇಲೆ ಸರ್ಕಾರ ಪೊಲೀಸ್ ಬಲಪ್ರಯೋಗ ಮಾಡುತ್ತಿದೆ. ದೆಹಲಿ, ಕರ್ನಾಟಕ, ಅಸ್ಸಾಂ, ಬಿಹಾರ ಸೇರಿದಂತೆ ದೇಶದ ಹಲವೆಡೆ ಪೊಲೀಸರು ತೀವ್ರ ದಬ್ಬಾಳಿಕೆ ನಡೆಸಿದ್ದು, ಅನೇಕ ರಾಷ್ಟ್ರೀಯ, ರಾಜ್ಯ ನಾಯಕರು ಹಾಗೂ ನೂರಾರು ಎಐಡಿಎಸ್‌ಓ ಕಾರ್ಯಕರ್ತರನ್ನು ಅಕ್ರಮವಾಗಿ ಬಂಧಿಸಿರುವುದು ಪ್ರಜಾಪ್ರಭುತ್ವ ವಿರೋಧಿ ಕೃತ್ಯ" ಎಂದು ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ಬಂಧಿತ ಎಲ್ಲಾ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು ಹಾಗೂ ಎಸ್.ಐ.ಆರ್. ಅನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಎಂದು ಆಗ್ರಹಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಗ್ಗೆ | 07:30 ರಿಂದ 09:00 |
| ಗುಳಿಕಕಾಲ | ಬೆಳಗ್ಗೆ | 01:30 ರಿಂದ 03:00 |
| ಯಮಗಂಡ ಕಾಲ | ಮಧ್ಯಾಹ್ನ | 10:30 ರಿಂದ 12:00 |

**ಮೇಷ:** ನಿಮ್ಮಲ್ಲಿ ಶಕ್ತಿಯ ಕೊರತೆಯಿರದೇ ಆತ್ಮವಿಶ್ವಾಸದ ಕೊರತೆ ಯಿರುವುದರಿಂದ ನಿಮ್ಮ ನಿಜವಾದ ಸಾಮರ್ಥ್ಯವನ್ನು ಅರಿತುಕೊಳ್ಳಿ. ಇವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ.

**ವೃಷಭ:** ಖಿನ್ನತೆಯನ್ನು ಹೊಡೆದೋಡಿಸಿ. ಇದು ನಿಮ್ಮನ್ನು ಆವರಿಸಿಕೊಳ್ಳುತ್ತಿದೆ ಮತ್ತು ನಿಮ್ಮ ಪ್ರಗತಿಗೆ ಅಡ್ಡಿಪಡಿಸುತ್ತಿದೆ. ನಿಮಗೆ ಆರ್ಥಿಕವಾಗಿ ತೋರುವ ಯಾವುದೇ ಹೂಡಿಕೆಯ ಯೋಜನೆ ಬಗ್ಗೆ ಹೆಚ್ಚು ಕಂಡುಹಿಡಿಯಲು ಆಳವಾಗಿ ಕೆದಕಿ

**ಮಿಥುನ:** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ಆರ್ಥಿಕ ಜೀವನದ ಸ್ಥಿತಿ ಇಂದು ಉತ್ತಮವಾಗಿದೆ ಎಂದು ಹೇಳಲಾಗುವುದಿಲ್ಲ, ಇಂದು ನಿಮ್ಮನ್ನು ಉಳಿಸಲು ನಿಮಗೆ ಕಷ್ಟವಾಗಬಹುದು.

**ಕರ್ಕಾಟಕ:** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾತ್ರಿದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ. ಈ ರಾಶಿಚಕ್ರಕ್ಕೆ ಸಂಬಂಧಿಸಿದ ಕೆಲವರು ಇಂದು ಭೂಮಿಗೆ ಸಂಬಂಧಿಸಿದ ವಿಷಯದ ಬಗ್ಗೆ ಹಣ ಖರ್ಚುಮಾಡಬಹುದು.

**ಸಿಂಹ:** ಸಾಮಾಜಿಕ ಜೀವನಕ್ಕಿಂತ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು. ಸಕಾರಾತ್ಮಕವಾಗಿರುವ ಮತ್ತು ಬೆಂಬಲ ನೀಡುವ ಸ್ನೇಹಿತರೊಂದಿಗೆ ಹೊರಗೆ ಹೋಗಬಹುದು.

**ಕನ್ಯಾ:** ನಿಮ್ಮ ಸಂಗಾತಿಯ ನಿಷ್ಠಾವಂತ ಹೃದಯ ಮತ್ತು ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ನಿಮ್ಮ ತಾಯಿಯ ಬದಿಯಿಂದ ಇಂದು ಹಣಕಾಸಿನ ಲಾಭವನ್ನು ಪಡೆಯುವ ಪೂರ್ಣ ಸಾಧ್ಯತೆ ಇದೆ. ನಿಮ್ಮ ಮಾವ ಅಥವಾ ತಾತ ನಿಮಗೆ ಆರ್ಥಿಕ ಬೆಂಬಲ ಮಾಡಬಹುದು.

**ತುಲಾ:** ನಗು ನಿಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರವಾದ್ದರಿಂದ ನಕ್ಕುಬಿಡಿ. ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ವೃಶ್ಚಿಕ:** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ. ಆದ್ದರಿಂದ ಇಂದು ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ಸ್ನೇಹಿತರೊಂದಿಗಿನ ಸಂಜೆ ಸಂತೋಷಕರವಾಗಿರುತ್ತದೆ.

**ಧನಸ್ಸು:** ಇಂದಿನ ಮನರಂಜನೆ ಕ್ರೀಡಾ ಚಟುವಟಿಕೆಗಳು ಮತ್ತು ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರಿ.

**ಮಕರ:** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ.

**ಕುಂಭ:** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಪೂರ್ಣ ನಿರೀಕ್ಷೆ ನಿಮ್ಮ ಭರವಸೆ ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು.

**ಮೀನ:** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

## ಖಾಕಿ ಅಖಾಡಕ್ಕೆ ರಿಯಲ್ 'ಲೇಡಿ ಸಿಂಗಮ್' ಮಾಸ್ ಎಂಟ್ರಿ: ಕೆಂಭಾವಿ ಗಡಿಯಲ್ಲಿ ಸುವರ್ಣ ಪರ್ವ ಶುರು!

# 50+ ಹಳ್ಳಿಗಳಿಗೆ ಒಬ್ಬರೇ ಒಬ್ಬರು ಲೇಡಿ ಕಮಾಂಡರ್!




**ಇಲಿಯಾಸ್ ಪಟೇಲ್. ಬ**

**ಉದಯವಾಹಿನಿ, ಯಾದಗಿರಿ**

ಸುರಪುರ ತಾಲ್ಲೂಕಿನ ಪ್ರಮುಖ ವಾಣಿಜ್ಯ, ವ್ಯಾಪಾರ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿರುವ ಕೆಂಭಾವಿ ಪಟ್ಟಣದ ಪೊಲೀಸ್ ಠಾಣೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ಹೊಸ ಶಕೆಯೊಂದು ಆರಂಭಗೊಳ್ಳುತ್ತಿದೆ. ದಶಕಗಳಿಂದ ಕೇವಲ ಪುರುಷ ಪೊಲೀಸ್ ಅಧಿಕಾರಿಗಳಷ್ಟೇ ಆಡಳಿತ ನಡೆಸಿಕೊಂಡು ಬಂದಿದ್ದ ಈ ಬೃಹತ್ ಠಾಣೆಗೆ, ಇದೇ ಮೊದಲ ಬಾರಿಗೆ ಮಹಿಳಾ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ನೇಮಕಗೊಂಡು ಅಧಿಕೃತ ವರ್ಗಾವಣೆ ಆದೇಶ ಹೊರಬಿದ್ದಿದೆ.

ಬೀದರ್ ಜಿಲ್ಲೆಯ ಮಂಠಾಳ (ಕಾ&ಸು) ಪೊಲೀಸ್ ಠಾಣೆಯಲ್ಲಿ ದಕ್ಷ ಹಾಗೂ ನಿಷ್ಠಾವಂತ ಸೇವೆ ಸಲ್ಲಿಸುತ್ತಿದ್ದ ಸುವರ್ಣ ಅವರು ಕೆಂಭಾವಿ ಪೊಲೀಸ್ ಠಾಣೆಯ ನೂತನ ಪಿಎಸ್‌ಐ ಆಗಿ ನಿಯೋಜನೆಗೊಂಡಿದ್ದು, ಸದ್ಯದಲ್ಲೇ ಅಧಿಕೃತವಾಗಿ ಠಾಣೆಯ ಚುಕ್ಕಾಣಿ ಹಿಡಿಯಲಿದ್ದಾರೆ. ಈ ಐತಿಹಾಸಿಕ ಬೆಳವಣಿಗೆಯು ಇಲಾಖೆಯ ವಲಯದಲ್ಲಿ ಹಾಗೂ ಸ್ಥಳೀಯ ಸಾರ್ವಜನಿಕರಲ್ಲಿ ಭಾರೀ ಕುತೂಹಲ, ಸಂಚಲನ ಹಾಗೂ ಹೊಸ ಭರವಸೆಯನ್ನು ಹುಟ್ಟುಹಾಕಿದೆ.

**ಬೃಹತ್ ವ್ಯಾಪ್ತಿ ಹಾಗೂ ಠಾಣೆಯ ವಾಸ್ತವ ಚಿತ್ರಣ:**
ಕೆಂಭಾವಿ ಪೊಲೀಸ್ ಠಾಣೆಯು ಕೇವಲ ಒಂದು ಪುಟ್ಟ ಪಟ್ಟಣದ ಗಡಿಗೆ ಸೀಮಿತವಾಗಿಲ್ಲ; ಇದರ ಆಡಳಿತಾತ್ಮಕ ವ್ಯಾಪ್ತಿ ಅತ್ಯಂತ ವಿಸ್ತಾರವಾಗಿದೆ.
**52 ಹಳ್ಳಿಗಳ ಹೊಣೆ:** ಪಟ್ಟಣದ ಸುತ್ತಮುತ್ತಲಿನ ಬರೋಬ್ಬರಿ 50ಕ್ಕೂ ಹೆಚ್ಚು ಗ್ರಾಮೀಣ ಪ್ರದೇಶಗಳು, ಹತ್ತಾರು ದೊಡ್ಡ ಗ್ರಾಮ ಪಂಚಾಯತ್ ವ್ಯಾಪ್ತಿಗಳು ಈ ಠಾಣೆಯ ಸುಪರ್ದಿಗೆ ಬರುತ್ತವೆ. ಇಷ್ಟು ದೊಡ್ಡ ಪ್ರದೇಶವನ್ನು ನಿಭಾಯಿಸುವುದು ಯಾವುದೇ ಅಧಿಕಾರಿಗಾದರೂ ದೊಡ್ಡ ಸವಾಲೇ ಸರಿ.
**ವ್ಯಾಪಾರ ನಗರಿಯ ಸಂಕೀರ್ಣತೆ:** ಕೆಂಭಾವಿಯು ದಿನದಿಂದ ದಿನಕ್ಕೆ ವಾಣಿಜ್ಯ ಚಟುವಟಿಕೆಗಳು, ಜನಸಂದಣಿ ಮತ್ತು ಆರ್ಥಿಕ ವಹಿವಾಟುಗಳು ಹೆಚ್ಚುತ್ತಿರುವ ಪ್ರಮುಖ ಕೇಂದ್ರವಾಗಿದೆ. ಇಲ್ಲಿನ ಜನರ ಜೀವನಶೈಲಿ, ವಾಣಿಜ್ಯ ಒಡನಾಟಗಳು ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು ಪೊಲೀಸರಿಗೆ ನಿತ್ಯದ ಅಗ್ನಿಪರೀಕ್ಷೆಯಾಗಿದೆ.
**ಅಕ್ರಮ ಚಟುವಟಿಕೆಗಳ ನಿಗ್ರಹ:** ಗ್ರಾಮೀಣ ಭಾಗದಲ್ಲಿ ಆಗಾಗ್ಗೆ ತಲೆಎತ್ತುವ ಇಸ್ಪಾಟ್ ಜೂಜು, ಅಕ್ರಮ ಮದ್ಯ ಮಾರಾಟ, ಸಣ್ಣಪುಟ್ಟ ಜಮೀನು ವಿವಾದಗಳು, ಕಳ್ಳತನ ಹಾಗೂ ದಾರಿ ದರೋಡೆ ಪ್ರಕರಣಗಳನ್ನು ಹತ್ತಿಕ್ಕುವಲ್ಲಿ ಕಠಿಣ ಕ್ರಮ ಕೈಗೊಳ್ಳುವುದು ಅಧಿಕಾರಿಗೆ ಕಾದಿರುವ ಮೊದಲ ಕೆಲಸವಾಗಿದೆ.

### ಇತಿಹಾಸದ ಪುಟಗಳಲ್ಲಿ ಹೊಸ ದಾಖಲೆ ಪುರುಷ ಪ್ರಾಧಾನ್ಯತೆಗೆ ತೆರೆ

ಇಲ್ಲಿಯವರೆಗೆ ಈ ಸೂಕ್ಷ್ಮ ಹಾಗೂ ಬೃಹತ್ ಠಾಣೆಗೆ ಯಾವುದೇ ಮಹಿಳಾ ಪಿಎಸ್‌ಐ ಬಾರದ ಕಾರಣ, ಇದುವರೆಗೆ ಸಂಪೂರ್ಣವಾಗಿ ಪುರುಷ ಪ್ರಾಧಾನ್ಯತೆಯ ಆಡಳಿತವೇ ನಡೆದಿತ್ತು. ಆದರೆ ಈಗ "ನಾ ವಲ್ಲೆ, ನಾ ವಲ್ಲೆ" ಎನ್ನಿಸಿಕೊ ಳ್ಳುತ್ತಿದ್ದ ಇಂತಹ ಸವಾಲಿನ ಹುದ್ದೆಗೆ ಲೇಡಿ ಪಿಎಸ್‌ಐ ಸುವರ್ಣ ಅವರ ಆಗಮನದ ಆದೇಶ ಹೊರಬಿದ್ದಿರುವುದು ಇಲಾಖೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಇಮ್ಮಡಿಗೊಳಿಸಿದೆ.
**ಮಹಿಳಾ ದೂರುದಾರರಿಗೆ ಸಿಗಲಿದೆ ಧೈರ್ಯ:** ಗ್ರಾಮೀಣ ಭಾಗದ ಹೆಣ್ಣುಮಕ್ಕಳು, ಸಂತ್ರಸ್ತರು ತಮ್ಮ ಕೌಟುಂಬಿಕ ಸಮಸ್ಯೆಗಳು, ದೌರ್ಜನ್ಯದ ದೂರುಗಳನ್ನು ಪುರುಷ ಅಧಿಕಾರಿಗಳ ಮುಂದೆ ಹೇಳಿಕೊಳ್ಳಲು ಹಿಂದೇಟು ಹಾಕುವ ವಾಸ್ತವ ನಮ್ಮಲ್ಲಿದೆ. ಈಗ ಮಹಿಳಾ ಪಿಎಸ್‌ಐ ಬರುವುದರಿಂದ ಇಲ್ಲಿನ ಮಹಿಳೆಯರು ಯಾವುದೇ ಮುಜುಗರ ಅಥವಾ ಭಯವಿಲ್ಲದೆ ನೇರವಾಗಿ ಬಂದು ದೂರು ನೀಡಲು ಮುಕ್ತ ವಾತಾವರಣ ನಿರ್ಮಾಣವಾಗಲಿದೆ. ಸಾರ್ವಜನಿಕರು ಮತ್ತು ಪೊಲೀಸ್ ಠಾಣೆಯ ನಡುವಿನ ಅಂತರವನ್ನು



ಕಡಿಮೆ ಮಾಡಿ, ದೂರುದಾರರಿಗೆ ತಕ್ಷಣ ಸ್ಪಂದಿಸುವ ಹಾಗೂ ಭಯಮುಕ್ತ ಆಡಳಿತ ನೀಡುವ ನಿಟ್ಟಿನಲ್ಲಿ ಸುವರ್ಣ ಅವರ ಕಾರ್ಯವೈಖರಿ ಹೇಗಿರಲಿದೆ ಎಂಬ ಚರ್ಚೆ ಈಗ ಪಟ್ಟಣದ ಪ್ರಮುಖ ವೃತ್ತಗಳಲ್ಲಿ ಜೋರಾಗಿದೆ. ಬೀದರ್ ಜಿಲ್ಲೆಯ ಮಂಠಾಳದಂತಹ ಠಾಣೆಯಲ್ಲಿ ಯಶಸ್ವಿ ಸೇವೆ ಸಲ್ಲಿಸಿ ಈಗ ಕೆಂಭಾವಿಯಂತಹ ಸವಾಲಿನ ಕಣಕ್ಕಿಳಿಯುತ್ತಿರುವ ಪಿಎಸ್‌ಐ ಸುವರ್ಣ ಅವರು, ತಮ್ಮ ದಿಟ್ಟ ಹಾಗೂ ನಿಸ್ಪಕ್ಷಪಾತ ಆಡಳಿತದ ಮೂಲಕ ಕೆಂಭಾವಿ ಪೊಲೀಸ್ ಠಾಣೆಯ ಇತಿಹಾಸದಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸುತ್ತಾರಾ ಎಂಬುದನ್ನು ಕಾದು ನೋಡಬೇಕಿದೆ. ಸ್ಥಳೀಯ ಸಾರ್ವಜನಿಕರು, ಯುವ ಜನತೆ ಹಾಗೂ ಸಂಘ–ಸಂಸ್ಥೆಗಳು ನೂತನ ಲೇಡಿ ಪಿಎಸ್‌ಐ ಅವರಿಗೆ ಸಂಪೂರ್ಣ ಸಹಕಾರ ನೀಡುವ ಮೂಲಕ ಅಪರಾಧಮುಕ್ತ ಮತ್ತು ಶಾಂತಿಯುತ ಕೆಂಭಾವಿ ನಿರ್ಮಾಣಕ್ಕೆ ಕೈಜೋಡಿಸಬೇಕಿದೆ.

> **ನಮ್ಮ ಕೆಂಭಾವಿ ಠಾಣೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಲೇಡಿ ಪಿಎಸ್‌ಐ ಬರುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಗ್ರಾಮೀಣ ಭಾಗದಲ್ಲಿ ಹೆಣ್ಣುಮಕ್ಕಳು ಎದುರಿಸುತ್ತಿರುವ ಕೌಟುಂಬಿಕ ದೌರ್ಜನ್ಯ ಹಾಗೂ ಇನ್ನಿತರ ಸಮಸ್ಯೆಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಇದು ಅತ್ಯಂತ ಒಳ್ಳೆಯ ಅವಕಾಶವಾಗಲಿದೆ.**
> – ಪಾರ್ವತಿ. ಎಸ್. ಬುದೂರ್, ಸಾಹಿತಿಗಳು ಕೆಂಭಾವಿ

> **50ಕ್ಕೂ ಹೆಚ್ಚು ಹಳ್ಳಿಗಳ ವ್ಯಾಪ್ತಿ ಹೊಂದಿರುವ ಈ ದೊಡ್ಡ ಠಾಣೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಕಠಿಣ ಸವಾಲು. ಆದರೆ ಮಹಿಳಾ ಅಧಿಕಾರಿಯೊಬ್ಬರು ಈ ಸವಾಲನ್ನು ಸ್ವೀಕರಿಸಿ ಬರುತ್ತಿರುವುದು ಸ್ವಾಗತಾರ್ಹ. ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿ, ಠಾಣೆಯಲ್ಲಿ ನಿಷ್ಪಕ್ಷಪಾತ ವಾತಾವರಣ ನಿರ್ಮಿಸುತ್ತಾರೆ ಎಂಬ ವಿಶ್ವಾಸವಿದೆ"**
> _ನೀಲಮ್ಮ. ಬಿ. ಮಲ್ಲೆ (ಸಾಹಿತಿಗಳು, ಶಿಕ್ಷಕರು)

## ಹಿಂಗಾರು ಬಿತ್ತನೆ ಬೀಜಗಳನ್ನು ರೈತರಿಗೆ ಸಬ್ಸಿಡಿ ದರದಲ್ಲಿ ಒದಗಿಸಿ

**ಉದಯವಾಹಿನಿ, ಕೊಪ್ಪಳ**

ಜಿಲ್ಲೆಯಲ್ಲಿ ಅಲ್ಪ ಪ್ರಮಾಣದ ಹಸ್ತ ಮಳೆ ಸುರಿದಿದ್ದು, ಭೂಮಿಯಲ್ಲಿ ತೇವಾಂಶ ಕಡಿಮೆ ಇದ್ದರೂ ರೈತರು ಧೈರ್ಯದಿಂದ ಹಿಂಗಾರು ಬಿತ್ತನೆ ಕಾರ್ಯ ಆರಂಭಿಸಿದ್ದಾರೆ. ಆದರೆ ಬಿತ್ತನೆಗೆ ಬೇಕಾದ ಬೀಜ, ರಸಗೊಬ್ಬರ ಸ್ಥಳೀಯ ರೈತ ಸಂಪರ್ಕ ಕೇಂದ್ರಗಳಲ್ಲಿ ಸಿಗುತ್ತಿಲ್ಲ. ಕೂಡಲೇ ಜಿಲ್ಲೆಯ ಎಲ್ಲಾ ರೈತ ಸಂಪರ್ಕ ಕೇಂದ್ರಗಳಲ್ಲಿ ಕುಸುಬೆ, ಅಗಸೆ ಸೇರಿದಂತೆ ಹಿಂಗಾರು ಬಿತ್ತನೆ ಬೀಜಗಳನ್ನು ಸಂಗ್ರಹಿಸಿ ರೈತರಿಗೆ ಸಬ್ಸಿಡಿ ದರದಲ್ಲಿ ಒದಗಿಸಬೇಕು ಎಂದು ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಅಂದಪ್ಪ ರುದ್ರಪ್ಪ ಕೋಳೂರು ಆಗ್ರಹಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಅತಿವೃಷ್ಟಿಯಿಂದ ರೈತರು ಬೆಳೆ ಕಳೆದುಕೊಂಡರೆ, ಈ ವರ್ಷ ಮುಂಗಾರಿನಲ್ಲಿ ಬಿತ್ತನೆ ಮಾಡಿದ ಬೆಳೆಗಳು ಮಳೆ ಕೊರತೆಯಿಂದ ಹೊಲದಲ್ಲೇ ಒಣಗಿ ನಾಶವಾಗಿವೆ. ಜಿಲ್ಲೆಯ ರೈತರು ಭೀಕರ ಬರಗಾಲದ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಇಂತಹ ಸಂದರ್ಭದಲ್ಲಾದರೂ ಸರ್ಕಾರ ಎಚ್ಚೆತ್ತುಕೊಂಡು ರೈತ ಸಂಪರ್ಕ ಕೇಂದ್ರಗಳಲ್ಲಿ ಕುಸುಬೆ ಬೀಜ, ಅಗಸೆ ಬೀಜ, ಜೋಳ, ಸೇರಿದಂತೆ ಹಿಂಗಾರು ಬಿತ್ತನೆಗೆ ಬೇಕಾದ ಎಲ್ಲಾ ಬೀಜಗಳು, ಬೀಜೋಪಚಾರ ಔಷಧಿ ಹಾಗೂ ರಸಗೊಬ್ಬರವನ್ನು ಎರಡು ದಿನದೊಳಗೆ ಸಂಗ್ರಹಿಸಬೇಕು ಎಂದು ಜಿಲ್ಲಾಡಳಿತವನ್ನು ಒತ್ತಾಯಿಸಿದರು. "ಈ ವರ್ಷವೂ ಬರಗಾಲವೇ?" ಎಂಬ ಪ್ರಶ್ನೆ ರೈತರನ್ನು ಕಾಡುತ್ತಿದೆ. ಆದರೂ ರೈತರು ದೇವರನ್ನು ಪೂಜಿಸಿ, ದೇವರ ನಂಬಿಕೆಯ ಮೇಲೆ ಬಿತ್ತನೆ ಕಾರ್ಯ ಶುರು ಮಾಡಿದ್ದಾರೆ. ಸರ್ಕಾರ ರೈತರ ಈ ನಂಬಿಕೆಗೆ ಬೆಲೆ ಕೊಟ್ಟು ತಕ್ಷಣ ಬೀಜ–ಗೊಬ್ಬರ ಪೂರೈಸಬೇಕು, ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದು ಕೋಳೂರು ಎಚ್ಚರಿಕೆ ನೀಡಿದರು.

## 371(ಜೆ) ವ್ಯಾಪ್ತಿಗೆ ವಿಜಯಪುರ ಸೇರ್ಪಡೆಗೆ ಆಗ್ರಹ

**ಉದಯವಾಹಿನಿ, ವಿಜಯಪುರ**

ಸಂವಿಧಾನದ 371(ಜೆ) ಅಡಿಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ದೊರೆಯುತ್ತಿರುವ ವಿಶೇಷ ಸೌಲಭ್ಯಗಳಿಂದ ವಿಜಯಪುರ ಜಿಲ್ಲೆಯನ್ನು ಹೊರಗಿಟ್ಟಿರುವುದನ್ನು ಸರಿಪಡಿಸಿ, ಜಿಲ್ಲೆಯನ್ನು 371(ಜೆ) ಮೀಸಲಾತಿ ವ್ಯಾಪ್ತಿಗೆ ಸೇರ್ಪಡೆಗೊಳಿಸಬೇಕು ಎಂದು ವಿಜಯಪುರ ಜಿಲ್ಲಾ 371(ಜೆ) ಹೋರಾಟ ಸಮಿತಿ ಆಗ್ರಹಿಸಿದೆ.



ಈ ಕುರಿತು ಹೋರಾಟ ಸಮಿತಿ ಮುಖಂಡರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಲೋಣಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. 371(ಜೆ) ಮೀಸಲಾತಿ ಜಾರಿಗೊಳಿಸುವ ಸಂದರ್ಭದಲ್ಲಿ ವಿಜಯಪುರ ಜಿಲ್ಲೆಯನ್ನು ಕೈಬಿಟ್ಟಿರುವುದರಿಂದ ಜಿಲ್ಲೆಯ ಜನರಿಗೆ ಅನ್ಯಾಯವಾಗಿದೆ. ಜಿಲ್ಲೆಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೌಲಭ್ಯ, ಯುವಕರಿಗೆ ಉದ್ಯೋಗ ಮತ್ತು ನೇಮಕಾತಿಯಲ್ಲಿ ಮೀಸಲಾತಿ ಹಾಗೂ ಕಲ್ಯಾಣ ಕರ್ನಾಟಕಕ್ಕೆ ದೊರೆಯುವ ವಿಶೇಷ ಅನುದಾನ ಸೇರಿದಂತೆ ಸೌಲಭ್ಯಗಳು ದೊರೆಯುವಂತಾಗಲು ಸಂವಿಧಾನದ 371(ಜೆ)ಗೆ ಅಗತ್ಯ ತಿದ್ದುಪಡಿ ಮಾಡಿ ವಿಜಯಪುರ ಜಿಲ್ಲೆಯನ್ನು ವ್ಯಾಪ್ತಿಗೆ ಸೇರಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

## ಎರಡು ಎಕರೆ ಪಪ್ಪಾಯಿ: ರೂ. 25 ಲಕ್ಷ ಗಳಿಕೆ

**ಉದಯವಾಹಿನಿ, ಬೀದರ್**

ಬಸವಕಲ್ಯಾಣ ತಾಲ್ಲೂಕಿನ ಇಸ್ಲಾಂಪೂರ ಗ್ರಾಮದ ಯುವ ರೈತ ವೆಂಕಟರೆಡ್ಡಿ ವಿಠ್ಠಲರೆಡ್ಡಿ ಬೆಲ್ಲಂಕುಂಡಾ ಅವರು ಬರದಲ್ಲೂ ಬಂಪರ್ ಪಪ್ಪಾಯಿ ಬೆಳೆದು ಕೈತುಂಬಾ ಆದಾಯ ಪಡೆದಿದ್ದಾರೆ.
ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಎರಡು ಎಕರೆಯಲ್ಲಿ ಸಮೃದ್ಧ ಪಪ್ಪಾಯಿ ಬೆಳೆದಿದ್ದು, ರೂ. 25 ಲಕ್ಷ ಗಳಿಕೆ ಮಾಡಿದ್ದಾರೆ. ದೆಹಲಿ, ಮುಂಬೈ, ಹೈದರಾಬಾದ್, ಉತ್ತರಪ್ರದೇಶ ಸೇರಿದಂತೆ ವಿವಿಧೆಡೆಯ ವ್ಯಾಪಾರಿಗಳು ಅವರ ತೋಟಕ್ಕೆ ಬಂದು ಪಪ್ಪಾಯಿ ಖರೀದಿಸಿಕೊಂಡು ಹೋಗುತ್ತಿದ್ದಾರೆ.
ರೈತನ ತೋಟಕ್ಕೆ ಗುರುವಾರ ಭೇಟಿ ನೀಡಿದ ಹುಮನಾಬಾದ್ ಶಾಸಕ ಡಾ. ಸಿದ್ಧಲಿಂಗಪ್ಪ ಪಾಟೀಲ ಅವರು, ಬರ ಪರಿಸ್ಥಿತಿಯಲ್ಲೂ ವೆಂಕಟರೆಡ್ಡಿ ಅವರು ಕೃಷಿಯಲ್ಲಿ ಮಾಡಿದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಳೆದ ನವೆಂಬರ್‌ನಲ್ಲಿ ಎರಡು ಎಕರೆಯಲ್ಲಿ 6 ಅಡಿ ಇಂಟು 8 ಅಡಿ ಅಂತರದಲ್ಲಿ 2,000 ಪಪ್ಪಾಯಿ ಸಸಿಗಳನ್ನು ನಾಟಿ ಮಾಡಿದ್ದೇನೆ. ಪ್ರತಿ ಎಕರೆಗೆ ರೂ. 60 ಸಾವಿರದಂತೆ ಒಟ್ಟು ರೂ. 1.20 ಲಕ್ಷ ಖರ್ಚಾಗಿದೆ. ಈಗಾಗಲೇ ರೂ. 25 ಲಕ್ಷ ಆದಾಯ ಬಂದಿದೆ ಎಂದು ವೆಂಕಟರೆಡ್ಡಿ ಅವರು ಶಾಸಕರಿಗೆ ಮಾಹಿತಿ ನೀಡಿದರು. ಸಂಪೂರ್ಣ ಸಾವಯವ ಕೃಷಿ ಪದ್ಧತಿ ಅನುಸರಿಸಿದ್ದೇನೆ. ರಾಸಾಯನಿಕ ಗೊಬ್ಬರ ಬಳಸದೆ, ದನದ, ಕುರಿಗಳ ಗೊಬ್ಬರ ಬಳಸಿದ್ದೇನೆ. ಹನಿ ನೀರಾವರಿ ಪದ್ಧತಿ ಅಳವಡಿಸಿದ್ದೇನೆ ಎಂದು ತಿಳಿಸಿದರು. ಏಳನೇ ತಿಂಗಳಲ್ಲಿ ಹೂ ಬಿಟ್ಟು , ಎಂಟನೇ ತಿಂಗಳಲ್ಲಿ ಕಾಯಿಗಳು ಬೆಳೆದಿವೆ. ಪ್ರತಿ ಗಿಡಕ್ಕೆ 40 ರಿಂದ 80 ಕಾಯಿಗಳು ಹತ್ತಿದ್ದು, 60 ಕೆ.ಜಿ. ಯಿಂದ 100 ಕೆ.ಜಿ. ವರೆಗೆ ಇಳುವರಿ ಕೊಟ್ಟಿವೆ ಎಂದು ಹೇಳಿದರು.



## ಶ್ರದ್ಧೆಯಿಂದ ಓದಿದರೆ ಯಶಸ್ಸು ಖಚಿತ ಪ್ರೊ, ತಿಪ್ಪೇಸ್ವಾಮಿ ಕರೆ

**ಉದಯವಾಹಿನಿ, ಬಳ್ಳಾರಿ**

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಎದೆಗುಂದದೆ ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಮಾತ್ರ ಯಶಸ್ಸು ಲಭಿಸುತ್ತದೆ ಎಂದು ಸ್ನಾತಕೋತ್ತರ ನಿರ್ದೇಶಕರಾದ ಪ್ರೊ. ಎಚ್. ತಿಪ್ಪೇಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಸಂಡೂರು ತಾಲ್ಲೂಕಿನ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯ ಜ್ಞಾನ ಸರೋವರದ ನೆಹರೂ ಸಭಾಂಗಣದಲ್ಲಿ ಕನ್ನಡ ಹಾಗೂ ಇತಿಹಾಸ ಪುರಾತತ್ವ ವಿಭಾಗದ ಸಹಯೋಗದಲ್ಲಿ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡ ಒಂದು ದಿನದ ಯು ಜಿ ಸಿ ಎನ್ ಇ ಟಿ ಮತ್ತು ಕೆ ಸೆಟ್ ತರಭೇತಿ ಕಾರ್ಯಾಗಾರವನ್ನು ಸಸಿಗೆ ನೀರು ಎರೆಯುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಈ ಕಾರ್ಯಾಗಾರದಲ್ಲಿ ಪಾಲ್ಗೊಂಡ ತರಬೇತುದಾರರು ತಿಳಿಸುವ ಮಾಹಿತಿಯ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಹಿರಿಯ ಶ್ರೇಣಿ ಸಹಾಯಕ ಪ್ರಾಧ್ಯಾಪಕರಾದ ಡಾ. ಗೋವಿಂದ ಮಾತನಾಡಿ ನಿರಂತರ ಅಧ್ಯಯನದಿಂದ ಸಾಧನೆಯು ಸಾಧ್ಯ. ಗುರುಗಳ ಉಪದೇಶದಿಂದ ಗುರಿಯನ್ನು ಮುಟ್ಟಿ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದು ಕೊಳ್ಳಿ.ಹಾಗೇನೆ ಪುಸ್ತಕಗಳನ್ನು ಕೊಂಡು ಓದುವ ಮನೋಭಾವ ಬೆಳೆಸಿಕೊಳ್ಳುವುದರೊಂದಿಗೆ ಗ್ರಂಥಾಲಯದಲ್ಲಿ ಇರುವ ಪುಸ್ತಕಗಳನ್ನು ಅಧ್ಯಯನ ಮಾಡಿ ಯಶಸ್ಸು ಪಡೆಯಿರಿ ಎಂದರು ಕನ್ನಡ ವಿಶ್ವವಿದ್ಯಾಲಯದ ದೇವದುರ್ಗ ವಿಸ್ತರಣ ಕೇಂದ್ರದ ಹಿರಿಯ ಶ್ರೇಣಿ ಸಹಾಯಕ ಪ್ರಾಧ್ಯಾಪಕರಾದ ಡಾ. ಗೋವರ್ಧನ್ ಎಸ್. ಎ.ಅವರು ಮಾತನಾಡಿ ಯು ಜಿ ಸಿ ಮಾನದಂಡಗಳ ನಿಯಮದಂತೆ ನೀವು ಪದವಿ ಅಧ್ಯಯನದೊಂದಿಗೆ ಎನ್ ಇ ಟಿ ಪರೀಕ್ಷೆಯನ್ನು ಬರೆದು ಉತ್ತಮ ಅಂಕಗಳನ್ನು ಗಳಿಸಿದಾಗ ಮಾತ್ರ ಸಂಶೋಧನಾಧ್ಯಯನಕ್ಕೆ ಶಿಷ್ಯ ವೇತನವು ಲಭಿಸುತ್ತದೆ ಎಂದರು.

## ನಾಡದೇವಿ ಶ್ರೀ ಚಾಮುಂಡೇಶ್ವರಿ ಪ್ರತಿಷ್ಠಾಪನೆ

**ಉದಯವಾಹಿನಿ, ಮುದ್ದೇಬಿಹಾಳ**

ನಾಡಿನಾದ್ಯಂತ ನವರಾತ್ರಿ ಹಬ್ಬದ ಸಡಗರ ಸಂಭ್ರಮ ಮನೆಮಾಡಿದ್ದು, ಮುದ್ದೇಬಿಹಾಳ ಪಟ್ಟಣದಲ್ಲಿಯೂ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯ ಪ್ರತಿಷ್ಠಾಪನೆಯೊಂದಿಗೆ ನವರಾತ್ರಿ ಉತ್ಸವಕ್ಕೆ ಭಕ್ತಿಭಾವದ ಚಾಲನೆ ದೊರೆಯಿತು. ಪಟ್ಟಣದ ಕಿಲ್ಲಾಗಲ್ಲಿಯ ಗುಂಡಪ್ಪನ ಬಾವಿಯಲ್ಲಿ ಗಂಗಾಸ್ನಾನ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸಿದ ಬಳಿಕ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯ ಮೂರ್ತಿಯನ್ನು ಅಲಂಕೃತ ವಾಹನದಲ್ಲಿ ಪ್ರತಿಷ್ಠಾಪಿಸಿ, ಸಕಲ ಮಂಗಲ ವಾದ್ಯಗಳೊಂದಿಗೆ ಭವ್ಯ ಮೆರವಣಿಗೆ ಮೂಲಕ ಗ್ರಾಮದೇವತೆ ಕಟ್ಟೆಗೆ ತರಲಾಯಿತು. ಬಳಿಕ ಶಾಸ್ತ್ರೋಕ್ತ ಪೂಜಾ ವಿಧಿವಿಧಾನಗಳೊಂದಿಗೆ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು.



ಕಳೆದ 35 ವರ್ಷಗಳಿಂದ ಮುದ್ದೇಬಿಹಾಳ ಪಟ್ಟಣದಲ್ಲಿ ದಸರಾ ಹಾಗೂ ನವರಾತ್ರಿ ಹಬ್ಬದ ಸಂದರ್ಭದಲ್ಲಿ ಗ್ರಾಮದೇವತೆ ಕಟ್ಟೆಯ ಮೇಲೆ ನಾಡದೇವಿ ಶ್ರೀ ಚಾಮುಂಡೇಶ್ವರಿ ದೇವಿಯನ್ನು ಪ್ರತಿಷ್ಠಾಪಿಸಿ, ಒಂಬತ್ತು ದಿನಗಳ ಕಾಲ ವಿಶೇಷ ಪೂಜೆ ಸಲ್ಲಿಸಿಕೊಂಡು ಬರಲಾಗುತ್ತಿದೆ. ಈ ಸಂಪ್ರದಾಯವು ಪಟ್ಟಣದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಭಾಗವಾಗಿದೆ. ಈ ಸಂದರ್ಭದಲ್ಲಿ ಮಾತನಾಡಿದ ಪಟ್ಟಣದ ಹಿರಿಯ ಗಣ್ಯರಾದ ಬಸವರಾಜ ಮೋಟಗಿ, ಅಶೋಕ ನಾಡಗೌಡ ಹಾಗೂ ಉದಯಸಿಂಗ್, "ಕಳೆದ 35 ವರ್ಷಗಳಿಂದ ದಸರಾ ಹಬ್ಬದ ಸಂದರ್ಭದಲ್ಲಿ ಗ್ರಾಮದೇವತೆ ಕಟ್ಟೆಯ ಮೇಲೆ ದೇವಿಯನ್ನು ಪ್ರತಿಷ್ಠಾಪಿಸಿ ಒಂಬತ್ತು ದಿನಗಳ ಕಾಲ ಪೂಜೆ ಸಲ್ಲಿಸಲಾಗುತ್ತಿದೆ. ಆರಂಭದಲ್ಲಿ ಮಣ್ಣಿನ ಹಾಗೂ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ತಯಾರಿಸಿದ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತಿತ್ತು. ನಂತರ ಸುಮಾರು ನಾಲ್ಕು ಅಡಿ ಎತ್ತರ ಹಾಗೂ ಒಂದು ಕ್ವಿಂಟಾಲ್ ತೂಕದ ಪಂಚಲೋಹದ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದ್ದು, ಕಳೆದ ಎರಡು ವರ್ಷಗಳಿಂದ ಇದೇ ಮೂರ್ತಿಗೆ ಪೂಜೆ ಸಲ್ಲಿಸಲಾಗುತ್ತಿದೆ," ಎಂದು ತಿಳಿಸಿದರು.

## ನಿಗದಿತ ಗುರಿ ಸಾಧನೆಗೆ ಆದ್ಯತೆ ನೀಡಿ

**ಉದಯವಾಹಿನಿ, ಚಿಂಚೋಳಿ**

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಅಂಬೇಡ್ಕರ್ ಭವನದಲ್ಲಿ ದ್ವಿತೀಯ ತ್ರೈಮಾಸಿಕದ ತಾಲ್ಲೂಕು ಮಟ್ಟದ ಸೇವಾ ಪ್ರತಿನಿಧಿಗಳ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ನಿರ್ದೇಶಕ ಗಣಪತಿ ಮಾಳಂಜಿ ಅವರ ಮಾರ್ಗದರ್ಶನದಲ್ಲಿ ನಡೆಸಲಾಯಿತು. ಸಭೆಯು ಧ್ಯೇಯಗೀತೆ ಹಾಗೂ ದೇವರ ಗೀತೆಯೊಂದಿಗೆ ಆರಂಭವಾಯಿತು. ಜಿಲ್ಲಾ ನಿರ್ದೇಶಕ ಗಣಪತಿ ಮಾಳಂಜಿ ಅವರು ದೀಪ ಪ್ರಜ್ವಲಿಸುವ ಮೂಲಕ ಸಭೆಗೆ ಚಾಲನೆ ನೀಡಿದರು. ಯೋಜನಾಧಿಕಾರಿ ಕೇಶವ ಡಿ.ಎಸ್. ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ದ್ವಿತೀಯ ತ್ರೈಮಾಸಿಕದಲ್ಲಿ ಬಾಕಿ ಉಳಿದಿರುವ ಕೆಲಸಗಳನ್ನು ಪೂರ್ಣಗೊಳಿಸುವ ಕುರಿತು ಮಾಹಿತಿ ನೀಡಿದರು. ಕಂತು ಬಾಕಿ ವಸೂಲಿ, ನಿರಂತರ ಪತ್ರಿಕೆ, ಪ್ರಗತಿನಿಧಿ ವಿತರಣೆ, ಸುಜ್ಞಾನನಿಧಿ ಶಿಷ್ಯವೇತನ, ದೂರವಾಣಿ ಸಂಖ್ಯೆ ನವೀಕರಣ, ಪಾನ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿ ನವೀಕರಣ ಮತ್ತು ಕುಟುಂಬದ ಸದಸ್ಯರ ವಿವರಗಳನ್ನು ವ್ಯವಸ್ಥೆಯಲ್ಲಿ ದಾಖಲಿಸುವ ಕಾರ್ಯಗಳ ಕುರಿತು ವಿವರಿಸಿದರು. ನಂತರ ಮಾತನಾಡಿದ ಜಿಲ್ಲಾ ನಿರ್ದೇಶಕ ಗಣಪತಿ ಮಾಳಂಜಿ ಅವರು, ಹಿಂದಿನ ಸಭೆಯಲ್ಲಿ ಸೇವಾ ಪ್ರತಿನಿಧಿಗಳಿಗೆ ನೀಡಲಾಗಿದ್ದ ಗುರಿಗಳ ಸಾಧನೆಯ ಕುರಿತು ಪರಿಶೀಲನೆ ನಡೆಸಿದರು.

## ದಶಕಗಳಿಂದ ಅನಾಥರು, ಬುದ್ಧಿಮಾಂದ್ಯರು ಹಾಗೂ ಹಿರಿಯ ನಾಗರಿಕರ ಸೇವೆ ಸರ್ಕಾರದ ಗಮನ ಸೆಳೆದ ನಿಸ್ವಾರ್ಥ ಕಾಯಕಕ್ಕೆ ಮನ್ನಣೆ ಯಾವಾಗ?

# ಅಮರಯ್ಯ ಸ್ವಾಮಿಗೆ ಈ ಬಾರಿಯಾದರೂ ರಾಜ್ಯೋತ್ಸವ ಪ್ರಶಸ್ತಿ ಸಿಗಬಹುದೇ..?

**ಉದಯವಾಹಿನಿ, ಸಿಂಧನೂರು**

ಸಮಾಜದಲ್ಲಿ ಅನೇಕರಿಗೆ ಬದುಕಿನ ಆಸರೆಯಾಗಿ, ಅನಾಥರ ಬಾಳಿಗೆ ಬೆಳಕಾಗಿ, ನಿರ್ಗತಿಕರ ಹಸಿವಿಗೆ ಅನ್ನವಾಗಿ, ಹಿರಿಯ ನಾಗರಿಕರು ಹಾಗೂ ಬುದ್ಧಿಮಾಂದ್ಯರ ಪಾಲಿಗೆ ಆಶ್ರಯದಾತರಾಗಿ ಸೇವೆ ಸಲ್ಲಿಸುತ್ತಿರುವ ಸಿಂಧನೂರಿನ ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿಯವರಿಗೆ ಈ ಬಾರಿಯಾದರೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸುತ್ತದೆಯೇ ಎಂಬ ನಿರೀಕ್ಷೆ ಸಾರ್ವಜನಿಕ ವಲಯದಲ್ಲಿ ಮೂಡಿದೆ.



ಕಲ್ಯಾಣ ಕರ್ನಾಟಕ ಭಾಗವಷ್ಟೇ ಅಲ್ಲದೆ, ರಾಜ್ಯದ ವಿವಿಧೆಡೆ ಮಾನವೀಯ ಸೇವೆಯ ಮೂಲಕ ಗುರುತಿಸಿಕೊಂಡಿರುವ ಅಮರಯ್ಯ ಸ್ವಾಮಿಯವರ ಕಾರ್ಯಕ್ಕೆ ರಾಜ್ಯಮಟ್ಟದ ಗೌರವ ದೊರೆಯಬೇಕೆಂಬ ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸಿಂಧನೂರು ತಾಲ್ಲೂಕಿನ ಹರಟನೂರು ಗ್ರಾಮದ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿಯ ಅರ್ಚಕರಾಗಿರುವ ವೇದಮೂರ್ತಿ ಅಮರಯ್ಯ ಸ್ವಾಮಿಯವರು, ದೇವಿಗೆ ಭಕ್ತರು ಅರ್ಪಿಸುವ ಮಂಗಳಾರತಿ ಕಾಣಿಕೆ ಹಾಗೂ ದವಸಧಾನ್ಯಗಳನ್ನು ಅನಾಥರು ಮತ್ತು ಆಶ್ರಮವಾಸಿಗಳ ಹಸಿವು ನೀಗಿಸಲು ಬಳಸುತ್ತಿರುವುದು ಅವರ ಸೇವಾ ಮನೋಭಾವಕ್ಕೆ ಸಾಕ್ಷಿಯಾಗಿದೆ. ಸರ್ಕಾರದ ಯಾವುದೇ ಅನುದಾನದ ನಿರೀಕ್ಷೆಯಿಲ್ಲದೆ, ದಾನಿಗಳ ಸಹಾಯ–ಸಹಕಾರದೊಂದಿಗೆ ಹಾಗೂ 'ಜಂಗಮ ಜೋಳಿಗೆ' ಕಾಯಕದ ಮೂಲಕ ಕಾರುಣ್ಯ ಆಶ್ರಮವನ್ನು ಮುನ್ನಡೆಸುತ್ತಿರುವುದು ವಿಶೇಷವಾಗಿದೆ. ಸಮಾಜದ ನಿರ್ಗತಿಕರು, ಅನಾಥರು, ಬುದ್ಧಿಮಾಂದ್ಯರು ಮತ್ತು ಹಿರಿಯ ನಾಗರಿಕರಿಗೆ ಆಸರೆಯಾಗಿರುವ ಆಶ್ರಮವು ಮಾನವೀಯ ಸೇವೆಯ ಕೇಂದ್ರವಾಗಿ ರೂಪುಗೊಂಡಿದೆ.




> **1.** ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ
> **2.** ಕಾಣಿಕೆಯಲ್ಲಿ ಅನಾಥರ ಹಸಿವಿಗೆ ಆದ್ಯತೆ.
> **3.** ನಾಗರಿಕರ ಸೇವೆಗೆ ರಾಜ್ಯಮಟ್ಟದ ಮನ್ನಣೆ

ಕಾರುಣ್ಯ ಆಶ್ರಮದ ಸೇವೆಯನ್ನು ಗುರುತಿಸಿ, 2023ರಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರು ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಹಿರಿಯ ನಾಗರಿಕರ ಸೇವಾ ಕ್ಷೇತ್ರದಲ್ಲಿ ರಾಜ್ಯಮಟ್ಟದ ಗೌರವ ದೊರೆತಿರುವುದು ಆಶ್ರಮದ ಸೇವಾ ಪಯಣದ ಮಹತ್ವದ ಮೈಲಿಗಲ್ಲಾಗಿದೆ.
**ಪ್ರಶಸ್ತಿ ಎನ್ನುವುದು ಕೇವಲ ಒಬ್ಬ ವ್ಯಕ್ತಿಗೆ ನೀಡುವ ಗೌರವವಲ್ಲ;** ಸಮಾಜದ ಅಸಹಾಯಕರಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಸೇವಾ ಮನೋಭಾವಕ್ಕೆ ನೀಡುವ ಮಾನ್ಯತೆಯಾಗಿದೆ. ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಅವರು ಹಾಗೂ ರಾಜ್ಯ ಸರ್ಕಾರವು ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ವೇದಮೂರ್ತಿ ಅಮರಯ್ಯ ಸ್ವಾಮಿಯವರ ದಶಕಗಳ ಸೇವೆಯನ್ನು ಪರಿಗಣಿಸಿ, ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡುವ ಕುರಿತು ಸೂಕ್ತವಾಗಿ ಪರಿಶೀಲಿಸಬೇಕು ಎಂಬುದು ಸಿಂಧನೂರಿನ ಕನ್ನಡಪರ ಸಂಘಟನೆಗಳು, ದಲಿತ ಸಂಘಟನೆಗಳು ಹಾಗೂ ವಿವಿಧ ಸಮಾಜಗಳ ಮುಖಂಡರುಗಳು ಒತ್ತಾಯವಾಗಿದೆ.
ಈ ಬಾರಿಯಾದರೂ ಕಾರುಣ್ಯ ಆಶ್ರಮದ ಅಮರಯ್ಯ ಸ್ವಾಮಿಯವರ ಸೇವೆಯನ್ನು ರಾಜ್ಯ ಸರ್ಕಾರ ಗುರುತಿಸಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ.

### ಪ್ರಶಸ್ತಿ ದೊರಕಿಸಲು ಆಗ್ರಹ

ಈ ಬಾರಿಯೂ ಜನಪ್ರತಿನಿಧಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಹಾಗೂ ಸರ್ಕಾರದ ಗಮನಕ್ಕೆ ಅಮರಯ್ಯ ಸ್ವಾಮಿಯವರ ಸೇವೆಯನ್ನು ತಂದು, ಪ್ರಶಸ್ತಿ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂಬ ಆಗ್ರಹ ಕೇಳಿಬರುತ್ತಿದೆ.

### ಜನತೆಯ ಆಶಯ

ಅನಾಥರ ಕಣ್ಣೀರೊರೆಸಿದ ಕೈಗಳಿಗೆ ಗೌರವ ಸಿಗಲಿ, ಹಸಿದವರ ಹೊಟ್ಟೆ ತುಂಬಿಸಿದ ಸೇವೆಗೆ ರಾಜ್ಯದ ಮಾನ್ಯತೆ ದೊರೆಯಲಿ, ನಿಸ್ವಾರ್ಥ ಮಾನವೀಯ ಕಾಯಕಕ್ಕೆ ರಾಜ್ಯೋತ್ಸವ ಪ್ರಶಸ್ತಿಯ ಗರಿ ಮೂಡಲಿ ಎಂಬುದು ಸಿಂಧನೂರಿನ ಜನತೆಯ ಆಶಯವಾಗಿದೆ.

ಆದೇಶ ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸುಪ್ರೀಂನಿಂದ ಭಾನುವಾರ ಕೇಂದ್ರ ಸರ್ಕಾರಕ್ಕೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ

# ಅಕ್ರಮವಾಗಿ ಬಂಧಿಸಬೇಡಿ, ಇಂಟರ್ನೆಟ್–ಮೆಟ್ರೋ ಪುನಾರಂಭಿಸಿ

1. ಕೇಂದ್ರ ಸರ್ಕಾರಕ್ಕೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ
2. ಎಲ್ಲ ಸಂಪರ್ಕ ಸೇವೆ, ಇಂಟರ್ನೆಟ್ ಅನ್ನು ತಕ್ಷಣವೇ ಮರುಸ್ಥಾಪಿಸಿ
3. ಜೋಯ್ಮಲ್ಯ ಬಾಗ್ಚಿ ಮತ್ತು ವಿ. ಮೋಹನಾ ಅವರಿದ್ದ ಪೀಠವು ನಿರ್ದೇಶನ ನೀಡಿದೆ

**ನವದೆಹಲಿ:** ಕಾಕ್ರೋಚ್ ಜನತಾ ಪಕ್ಷ (ಸಿಜೆಪಿ) ಕರೆ ನೀಡಿದ್ದ ಪ್ರತಿಭಟನೆ ಕಾರಣಕ್ಕಾಗಿ ದೆಹಲಿಯಲ್ಲಿ ಮೆಟ್ರೋ ಮತ್ತು ರೈಲು ಸೇವೆಗಳನ್ನು ಸಂಪೂರ್ಣವಾಗಿ ನಿಷೇಧಿಸದಂತೆ ನ್ಯಾಯಾಲಯ ನೀಡಿದ್ದ ಆದೇಶವನ್ನು ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಭಾನುವಾರ ಕೇಂದ್ರ ಸರ್ಕಾರಕ್ಕೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿತು.

ಅಲ್ಲದೆ, ಶಾಂತಿಯುತವಾಗಿ ಜಮಾಯಿಸಿ ಪ್ರತಿಭಟನೆ ನಡೆಸುವ ಜನರನ್ನು ಕಾನೂನುಬಾಹಿರವಾಗಿ ವಶಕ್ಕೆ ಪಡೆಯಬಾರದು. ಬಂದ್ ಮಾಡಲಾಗಿರುವ ಎಲ್ಲಾ ಸಂಪರ್ಕ ಸೇವೆ, ಇಂಟರ್ನೆಟ್ ಅನ್ನು ತಕ್ಷಣವೇ ಮರುಸ್ಥಾಪಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು.

ಸಿಜೆಪಿ ಪ್ರತಿಭಟನೆಯ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು, ದೆಹಲಿ ಮೆಟ್ರೋದ 45 ನಿಲ್ದಾಣಗಳು ಮತ್ತು ಕೆಲ ರೈಲು ಸೇವೆಗಳನ್ನು ಶನಿವಾರ ಬಂದ್ ಮಾಡಿತ್ತು. ಇದರ ವಿರುದ್ಧ ನ್ಯಾಯಾಂಗ ನಿಂದನೆ ಎಂದು ಅರ್ಜಿ ಸಲ್ಲಿಸಲಾಗಿತ್ತು. ಈ ಕುರಿತು ತುರ್ತು ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿ. ಮೋಹನಾ ಅವರಿದ್ದ ಪೀಠವು ಇಂದು ನಡೆಸಿತು.

ದೆಹಲಿ ಮೆಟ್ರೋ ಮತ್ತು ರೈಲುಗಳು ಎಂದಿನಂತೆ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ಕಾನೂನು ಸುವ್ಯವಸ್ಥೆಗೆ ಒಳಪಟ್ಟು ಇಂಟರ್ನೆಟ್ ಸೇವೆಗಳಿಗೆ ಯಾವುದೇ ಅಡ್ಡಿಯಾಗದಂತೆ ನಿಗಾ ವಹಿಸಬೇಕು ಎಂದು



ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಸೂಚಿಸಿತು.

**ನ್ಯಾಯಾಲಯದ ಪ್ರಮುಖ ಅವಲೋಕನಗಳು:** ಅಕ್ಟೋಬರ್ 9, 2026 ರಂದು ನೀಡಲಾದ ನಮ್ಮ ಹಿಂದಿನ ಆದೇಶದ ಉಲ್ಲಂಘಿಸಲಾಗಿದೆ. ಅಕ್ಟೋಬರ್ 10, 2026 ರಂದು ದೆಹಲಿಯಲ್ಲಿ ಭಾರಿ ಸಂಖ್ಯೆಯ ಜನರನ್ನು ಕಾನೂನುಬಾಹಿರವಾಗಿ ವಶಕ್ಕೆ ಪಡೆಯಲಾಗಿದೆ ಎಂಬ ಆರೋಪಗಳನ್ನೊಳಗೊಂಡ ತುರ್ತು ಅರ್ಜಿಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು ತುರ್ತು ವಿಚಾರಣೆ ನಡೆಸಿದೆ. ನಗರದ ಮೆಟ್ರೋ ಸೇವೆ ಸ್ಥಗಿತಗೊಂಡಿತ್ತು. ನವದೆಹಲಿ ಮತ್ತು ನಿಜಾಮುದ್ದೀನ್ ರೈಲು ನಿಲ್ದಾಣಗಳು ಮುಚ್ಚಲ್ಪಟ್ಟಿದ್ದವು. ಜನರಿಗೆ ಮೊದಲೇ ಯಾವುದೇ ಸಂಚಾರ ಸಲಹೆಗಳನ್ನು ನೀಡಲಾಗಿರಲಿಲ್ಲ. ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್)–2023 ರ ಸೆಕ್ಷನ್ 163 ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿ ಇರದ ಪ್ರದೇಶದಲ್ಲೂ ಜನರನ್ನು ವಶಕ್ಕೆ ಪಡೆದು ಅನಗತ್ಯ ಕಿರುಕುಳ ನೀಡಲಾಗಿದೆ ಎಂದು ಹಿರಿಯ ವಕೀಲರು ವಾದಿಸಿದ್ದಾರೆ ಎಂದು ಪೀಠವು ಹೇಳಿದೆ. ಇದಲ್ಲದೆ, ವಕೀಲರು, ಪತ್ರಕರ್ತರು ಮತ್ತು ಇತರರು ತಮ್ಮ ವೃತ್ತಿಪರ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ಅಡಚಣೆ ಉಂಟಾಗದಂತೆ ನೋಡಿಕೊಳ್ಳುವಂತೆಯೂ ಸರ್ವೋಚ್ಚ ನ್ಯಾಯಾಲಯವು ಮೆಹ್ತಾ ಅವರಿಗೆ ಸೂಚಿಸಿತು.

**ಸರ್ಕಾರದ ವಾದವೇನು?** ವಿಚಾರಣೆಯ ವೇಳೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಅಕ್ಟೋಬರ್ 10 ರಂದು ಮೆಟ್ರೋ ನೆಟ್‌ವರ್ಕ್‌ನ 303 ನಿಲ್ದಾಣಗಳ ಪೈಕಿ ಕೇವಲ 45 ನಿಲ್ದಾಣಗಳಲ್ಲಿ ಮಾತ್ರ ಪ್ರವೇಶ ಮತ್ತು ನಿರ್ಗಮನವನ್ನು ನಿರ್ಬಂಧಿಸಲಾಗಿತ್ತು ಎಂದು ತಿಳಿಸಿದರು.

ನ್ಯಾಯಾಲಯದ ನಿರ್ದೇಶಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆಯನ್ನು ಕೋರಿ ವಕೀಲ ಶೈಲೇಂದ್ರ ಮಣಿ ತ್ರಿಪಾಠಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿದೆ. ಇದರಲ್ಲಿ ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್, ದೆಹಲಿ ಪೊಲೀಸ್ ಆಯುಕ್ತ ಅನುರಾಗ್ ಕುಮಾರ್ ಮತ್ತು ದೆಹಲಿ ಮೆಟ್ರೋ ರೈಲು ನಿಗಮದ ಅಧ್ಯಕ್ಷೆ ಡಿ. ತಾರಾ ಅವರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಇದರೊಂದಿಗೆ ರಾಜಕೀಯ ಮುಖಂಡರ ಬಂಧನವನ್ನು ವಿರೋಧಿಸಿ ಹಿರಿಯ ವಕೀಲೆ ಮೇನಕಾ ಗುರುಸ್ವಾಮಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನೂ ಇದೇ ವೇಳೆ ಕೋರ್ಟ್ ವಿಚಾರಣೆ ನಡೆಸಿತು.

### ಅನುಮತಿ ಇಲ್ಲದೆ ಸಿಜೆಪಿ ಪ್ರತಿಭಟನೆ

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಆಗ್ರಹಿಸಿ ಸಿಜೆಪಿ ಮತ್ತು ಕೆಲ ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆಗೆ ಕರೆ ನೀಡಿದ್ದವು. ಜಂತರ್ ಮಂತರ್‌ನಲ್ಲಿ ನಡೆಯಬೇಕಿದ್ದ ಪ್ರತಿಭಟನೆಗೆ ಅನುಮತಿ ಪಡೆಯದ ಕಾರಣ ದೆಹಲಿ ಪೊಲೀಸರು ಭಾರಿ ಬಿಗಿ ಬಂದೋಬಸ್ತ್ ಮಾಡಿದ್ದರು. ಈ ವೇಳೆ ಸಿಜೆಪಿ ನಾಯಕ ಅಭಿಜೀತ್ ದಿಪ್ಕೆ ಸೇರಿ 7 ಸಾವಿರ ಪ್ರತಿಭಟನಾಕಾರರನ್ನು ವಶಕ್ಕೆ ಪಡೆದಿದ್ದರು.

## ನನ್ನನ್ನು ವಶಕ್ಕೆ ಪಡೆದಿದ್ದಲ್ಲ... ಅಪಹರಿಸಿದ್ದು.. ನಾನು ಯಾವಾಗಲೂ ಭಾರತೀಯನೇ

**ನವದೆಹಲಿ:** ಜಂತರ್ ಮಂತರ್‌ನಲ್ಲಿ ನಿಗದಿಯಾಗಿದ್ದ ಪ್ರತಿಭಟನೆಗೂ ಮುನ್ನ, ಮನೆಯಲ್ಲಿ ಮಲಗಿದ್ದಾಗಲೇ ಸಿವಿಲ್ ಉಡುಪಿನಲ್ಲಿದ್ದ ವ್ಯಕ್ತಿಗಳು ತಮ್ಮನ್ನು ಅಪಹರಿಸಿದರು ಎಂದು ಯೂಟ್ಯೂಬರ್ ಧ್ರುವ್ ರಾಠಿ ದೂರಿದ್ದಾರೆ.



ಎಸ್‌ಐಆರ್ ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಾರ್ಟಿ ವತಿಯಿಂದ ರಾಷ್ಟ್ರ ರಾಜಧಾನಿಯ ಜಂತರ್ ಮಂತರ್‌ನಲ್ಲಿ ಶನಿವಾರ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಈ ಪ್ರತಿಭಟನೆಯಲ್ಲಿ ಯೂಟ್ಯೂಬರ್ ಧ್ರುವ ರಾಠಿ ಕೂಡ ಭಾಗಿಯಾಗಲು ಮುಂದಾಗಿದ್ದರು. ಆದರೆ ಅವರನ್ನು ಅದಕ್ಕೂ ಮುನ್ನವೇ ಪೊಲೀಸರು ವಶಕ್ಕೆ ಪಡೆದಿದ್ದರು. ಪೊಲೀಸ್ ವಶದಿಂದ ಬಿಡುಗಡೆಯಾದ ಬಳಿಕ ರಾಠಿ ಸಾಮಾಜಿಕ ಜಾಲತಾಣದಲ್ಲಿ ಭಾನುವಾರ ಪೋಸ್ಟ್ ಮಾಡಿರುವ ವಿಡಿಯೋವೊಂದರಲ್ಲಿ ಘಟನೆಯನ್ನು ವಿವರಿಸಿದ್ದಾರೆ. ವಿಡಿಯೋದಲ್ಲಿ, ರಾಠಿ ತಮ್ಮ ಭಾರತೀಯ ಪಾಸ್‌ಪೋರ್ಟ್ ಅನ್ನು ಪ್ರದರ್ಶಿಸುತ್ತಾ, "ಇದು ನನ್ನ ಪಾಸ್‌ಪೋರ್ಟ್. ನಾನು ಭಾರತೀಯ ಪ್ರಜೆಯಾಗಿದ್ದೆ, ಈಗಲೂ ಇದ್ದೇನೆ ಮತ್ತು ಮುಂದೆಯೂ ಇರುತ್ತೇನೆ" ಎಂದು ಹೇಳಿದ್ದಾರೆ. ವಿದೇಶಿ ಪಾಸ್‌ಪೋರ್ಟ್ ಹೊಂದಿರುವ ಕಾರಣ ಪ್ರತಿಭಟನೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ ಎಂಬ ಆಧಾರದ ಮೇಲೆ ತಮ್ಮನ್ನು ವಶಕ್ಕೆ ಪಡೆದಿರುವುದನ್ನು ಸಮರ್ಥಿಸಿಕೊಳ್ಳಲು ಹರಡುತ್ತಿರುವ ವದಂತಿಗಳು ಸಂಪೂರ್ಣ ಸುಳ್ಳು ಮತ್ತು ಆಧಾರರಹಿತ ಎಂದು ಅವರು ಹೇಳಿದ್ದಾರೆ. ಶನಿವಾರ ಬೆಳಗ್ಗೆ ಗುರುಗ್ರಾಮ್‌ನಲ್ಲಿರುವ ತಮ್ಮ ನಿವಾಸಕ್ಕೆ ಸಿವಿಲ್ ಉಡುಪಿನಲ್ಲಿದ್ದ ವ್ಯಕ್ತಿಗಳ ಗುಂಪು ಆಗಮಿಸಿ, ಬಾಗಿಲ ಬಳಿ ತಮ್ಮ ತಾಯಿಯನ್ನು ತಳ್ಳಿ ಬಳಿಕ ತಮ್ಮನ್ನು ಎಳೆದುಕೊಂಡು ಕಾರಿನಲ್ಲಿ ಕರೆದೊಯ್ದರು ಎಂದು ಧ್ರುವ ರಾಠಿ ತಿಳಿಸಿದ್ದಾರೆ. "ಅವರು ನನ್ನ ಮಲಗುವ ಕೋಣೆಗೆ ಬಂದು ನನ್ನನ್ನು ಎಳೆದುಕೊಂಡು ಹೋದಾಗ ನಾನು ನಿದ್ರೆಯಲ್ಲಿದ್ದೆ. ನಾನು ಏನನ್ನೂ ಹೇಳುವ ಮುನ್ನವೇ ಅವರು ನನ್ನನ್ನು ಅಪಹರಿಸಿ ಕರೆದೊಯ್ದರು. ಇದು ಕೇವಲ ವಶಕ್ಕೆ ಪಡೆಯುವುದು ಅಥವಾ ಬಂಧನವಾಗಿರಲಿಲ್ಲ, ಅವರು ನನ್ನನ್ನು ಅಪಹರಿಸಿದರು. ನನ್ನನ್ನು ಅಪಹರಿಸಲು ಅವರು ಗೂಂಡಾಗಳನ್ನು ಕಳುಹಿಸಿದ್ದರು" ಎಂದು ಅವರು ಆರೋಪಿಸಿದ್ದಾರೆ.

## ನೇಪಾಳದಲ್ಲಿ ಮತ್ತೆ ಜಲಪ್ರಳಯದ ಆತಂಕ

**ಕಠ್ಮಂಡು:** ನೇಪಾಳದ ಬುಧಿ ಗಂಡಕಿ ನದಿಯಲ್ಲಿ ಭಾನುವಾರ ದಿಢೀರ್ ಪ್ರವಾಹ ಉಂಟಾಗಿ, ಗೊರ್ಖಾ ಜಿಲ್ಲೆಯ ಮೂರು ಸೇತುವೆಗಳು ಹಾಗೂ 35ಕ್ಕೂ ಹೆಚ್ಚು ಮನೆಗಳು ಕೊಚ್ಚಿಹೋಗಿವೆ. ಇದರಿಂದಾಗಿ ಸ್ಥಳೀಯ ನಿವಾಸಿಗಳು ತಮ್ಮ ಮನೆಗಳನ್ನು ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳಿದ್ದಾರೆ. ನದಿ ತೀರದಲ್ಲಿ ಮತ್ತಷ್ಟು ಅಪಾಯ ಎದುರಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ಪ್ರವಾಹದಿಂದ ಹಲವು ವಸತಿ ಪ್ರದೇಶಗಳಿಗೆ ಹಾನಿಯಾಗಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿದೆ. ನಿರ್ಮಾಣ ಹಂತದಲ್ಲಿದ್ದ ಜಲವಿದ್ಯುತ್ ಯೋಜನೆಯೂ ಹಾನಿಗೊಳಗಾಗಿದೆ. ಆಗಸ್ಟ್ 26ರಂದು ನೇಪಾಳದಲ್ಲಿ ಸಂಭವಿಸಿದ ಭೀಕರ ಪ್ರವಾಹದಿಂದ ಚೇತರಿಸಿಕೊಳ್ಳುತ್ತಿರುವ ಜನರಲ್ಲಿ ಈ ಘಟನೆ ಮತ್ತೆ ಆತಂಕ ಮೂಡಿಸಿದೆ. ಆ ವಿಪತ್ತಿನಲ್ಲಿ 1,450ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ನಾಪತ್ತೆಯಾಗಿದ್ದಾರೆ. ಇದೀಗ ಪರ್ವತ ಪ್ರದೇಶದ ಗೊರ್ಖಾ ಜಿಲ್ಲೆಯ ಚುಮ್ನುಬ್ರಿ ಮತ್ತು ಧಾರ್ಚೆ ಗ್ರಾಮೀಣ ಪುರಸಭೆಗಳ ವ್ಯಾಪ್ತಿಯಲ್ಲಿ ಹೊಸ ಪ್ರವಾಹ ಸಂಭವಿಸಿದೆ. ಸಲ್ಲೇರಿ, ಬಗರ್, ಘಟ್ಟಖೋಲಾ ಮತ್ತು ಜಗತ್ ಸೇರಿದಂತೆ ಹಲವು ಪ್ರದೇಶಗಳಲ್ಲಿನ ಮನೆಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಭಾನುವಾರ ಹಾನಿಯ ಸಂಪೂರ್ಣ ಪ್ರಮಾಣವನ್ನು ಅಂದಾಜಿಸುವ ಕಾರ್ಯ ನಡೆಯುತ್ತಿದ್ದು, ತುರ್ತು ರಕ್ಷಣಾ ತಂಡಗಳು ಪೀಡಿತ ಪ್ರದೇಶಗಳ ಮೇಲೆ ನಿಗಾ ಇರಿಸಿವೆ. ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲು ನೆರವು ನೀಡಲಾಗುತ್ತಿದೆ.

**ಮೂರು ಸೇತುವೆಗಳು ನಾಶ, ವಸತಿ ಪ್ರದೇಶಗಳಿಗೂ ಹಾನಿ** ಪ್ರವಾಹದಿಂದ ಎರಡು ತೂಗು ಸೇತುವೆಗಳು ಮತ್ತು ವಾಹನ ಸಂಚಾರಕ್ಕೆ ಬಳಸುತ್ತಿದ್ದ ಮತ್ತೊಂದು ಸೇತುವೆ ನಾಶವಾಗಿವೆ. ಚುಮ್ನುಬ್ರಿ ಗ್ರಾಮೀಣ ಪುರಸಭೆಯ ನ್ಯಾಕ್ಚೆಟ್ ಮತ್ತು ಸಿರ್ದಿಬಾಸ್ ಪ್ರದೇಶ ಸಂಪರ್ಕಿಸುತ್ತಿದ್ದ ಒಂದು ತೂಗು ಸೇತುವೆ, ಧಾರ್ಚೆ ಗ್ರಾಮೀಣ ಪುರಸಭೆಯ ಮಾಚಿಖೋಲಾ ಮತ್ತು ಕೇರೌಜಾ ಪ್ರದೇಶಗಳ ನಡುವಿನ ಸೇತುವೆ ಕೊಚ್ಚಿಹೋಗಿದೆ,

## ರಿಯಾದ್ ಏರ್‌ಪೋರ್ಟ್ ಮೇಲಿನ ದಾಳಿಯಲ್ಲಿ 12 ಮಂದಿ ಸಾವು, 300ಕ್ಕೂ ಹೆಚ್ಚು ಜನರಿಗೆ ಗಾಯ

**ರಿಯಾದ್:** ಸೌದಿ ಅರೇಬಿಯಾದ ರಾಜಧಾನಿ ರಿಯಾದ್‌ನಲ್ಲಿರುವ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ 12 ಮಂದಿ ಸಾವನ್ನಪ್ಪಿದ್ದರೆ, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಸೌದಿ ನಾಗರಿಕ ವಿಮಾನಯಾನ ಪ್ರಾಧಿಕಾರವು ಭಾನುವಾರ ಬೆಳಗ್ಗೆ ತಿಳಿಸಿದೆ. ನೆರೆಯ ಯೆಮೆನ್‌ನಲ್ಲಿರುವ ಇರಾನ್ ಬೆಂಬಲಿತ ಹೌತಿ ಬಂಡುಕೋರರೇ ಈ ದಾಳಿಗೆ ಕಾರಣ ಎಂದು ಸೌದಿ ನೇತೃತ್ವದ ಮೈತ್ರಿಕೂಟ ಆರೋಪಿಸಿದೆ.

ಹೌತಿಗಳು ಮತ್ತು ಸೌದಿ ಬೆಂಬಲಿತ ಯೆಮೆನ್ ಸರ್ಕಾರಿ ಪಡೆಗಳ ನಡುವೆ ತೀವ್ರಗೊಂಡ ಸಂಘರ್ಷದ ಭಾಗವಾಗಿ, ಗಲ್ಫ್ ಅರಬ್ ದೇಶವೊಂದರಲ್ಲಿ ನಡೆದ ಅತ್ಯಂತ ಮಾರಣಾಂತಿಕ ದಾಳಿ ಇದಾಗಿದೆ.

ದೇಶೀಯ ವಿಮಾನಗಳಿಗಾಗಿ ಟರ್ಮಿನಲ್ 3 ಮತ್ತು 4 ಅನ್ನು ಹೊಂದಿರುವ ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಂಕೀರ್ಣಕ್ಕೆ ಕ್ಷಿಪಣಿಯೊಂದು ಅಪ್ಪಳಿಸಿದೆ ಎಂದು ಪ್ರಾದೇಶಿಕ ಅಧಿಕಾರಿಯೊಬ್ಬರು 'ಅಸೋಸಿಯೇಟೆಡ್ ಪ್ರೆಸ್'ಗೆ ತಿಳಿಸಿದ್ದಾರೆ. ಮೃತಪಟ್ಟವರಲ್ಲಿ ನಾಲ್ವರು ಸೌದಿ ಪ್ರಜೆಗಳು ಹಾಗೂ ಇಬ್ಬರು ಬಾಂಗ್ಲಾದೇಶದ ಪ್ರಜೆಗಳು, ಒಬ್ಬ ಪ್ಯಾಲೆಸ್ಟೀನಿಯನ್, ಒಬ್ಬ ಅಮೆರಿಕನ್ ಪ್ರಜೆ, ಓರ್ವ ಈಜಿಪ್ಟ್ ಪ್ರಜೆ, ಓರ್ವ ಜೋರ್ಡಾನ್ ಪ್ರಜೆ, ಓರ್ವ ಸಿರಿಯನ್ ಮತ್ತು ಓರ್ವ ಸುಡಾನ್ ಪ್ರಜೆ ಸೇರಿದ್ದಾರೆ ಎಂದು ಸೌದಿ ಪ್ರಕಟಣೆಯಲ್ಲಿ ತಿಳಿಸಿದೆ. ಗಾಯಗೊಂಡವರಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದೆ. ಈ ದಾಳಿಯ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾದ ದೃಶ್ಯಾವಳಿಗಳಲ್ಲಿ ವಿಮಾನ ನಿಲ್ದಾಣದ ಹೊರಗೆ ಕನಿಷ್ಠ ಒಂದು ಆಂಬ್ಯುಲೆನ್ಸ್ ಮತ್ತು ಮತ್ತೊಂದು ವಾಹನ ಕಂಡುಬಂದಿದೆ.

**ಟ್ರಂಪ್ ಹೇಳಿದ್ದೇನು?** ಕಳೆದ ಒಂದು ವಾರದಲ್ಲಿ ವಿಮಾನ ನಿಲ್ದಾಣದ ಮೇಲೆ ನಡೆದ ಹಲವಾರು ದಾಳಿಗಳ ಪೈಕಿ ಇದೂ ಒಂದಾಗಿದ್ದು, ಹೌತಿಗಳೊಂದಿಗೆ ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಲು ಪ್ರಯತ್ನಿಸುತ್ತಿರುವ ಸೌದಿ ಅರೇಬಿಯಾಕ್ಕೆ, ಮಿಲಿಟರಿ ಬೆಂಬಲ ನೀಡುವಂತೆ ಅಮೆರಿಕ ಸೇರಿದಂತೆ ತನ್ನ ಮಿತ್ರರಾಷ್ಟ್ರಗಳ ಮೇಲೆ ಒತ್ತಡ ಹೇರಲು ಈ ಘಟನೆ ಕಾರಣವಾಗುವ ನಿರೀಕ್ಷೆಯಿದೆ.




ದಾಳಿಯಾದ ಕೆಲ ಹೊತ್ತಿನ ಬಳಿಕ, ಬಂಡುಕೋರರ ವಿರುದ್ಧದ ಸೌದಿ ದಾಳಿಯಲ್ಲಿ ಅಮೆರಿಕ ಭಾಗವಹಿಸಬೇಕೇ ಎಂಬುದನ್ನು ಪರಿಶೀಲಿಸುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು. "ನಾವು ಇದರಲ್ಲಿ ಭಾಗವಹಿಸುವ ಬಗ್ಗೆ ಪರಿಶೀಲಿಸುತ್ತೇವೆ," ಎಂದು ಅವರು ಹೇಳಿದ್ದಾರೆ. "ಇತ್ತೀಚಿನ ದಾಳಿಯ ಬಗ್ಗೆ ನಮಗೆ ಈಗಷ್ಟೇ ತಿಳಿದಿದೆ. ಆದ್ದರಿಂದ ನಾವು ನಿರ್ಧಾರ ತೆಗೆದುಕೊಳ್ಳುತ್ತೇವೆ" ಎಂದಿದ್ದಾರೆ. ನಂತರ ಮಾತನಾಡಿದ ಟ್ರಂಪ್, ಯುವರಾಜ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಲು ಯೋಜಿಸಿರುವುದಾಗಿ ತಿಳಿಸಿದರು ಮತ್ತು "ಸೌದಿ ಅರೇಬಿಯಾದಲ್ಲಿ ನಡೆದಿರುವುದು ಸ್ವೀಕಾರಾರ್ಹ ಘಟನೆಯಲ್ಲ" ಎಂದರು. ಅಮೆರಿಕ ಇದರಲ್ಲಿ ಭಾಗಿಯಾಗಲಿದೆಯೇ ಎಂದು ಕೇಳಿದಾಗ, ನೋಡೋಣ, ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

ಈ ದಾಳಿಯಲ್ಲಿ ಅಮೆರಿಕದ ಪ್ರಜೆಯೊಬ್ಬರು ಸಾವನ್ನಪ್ಪಿರುವುದನ್ನು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಸಾಮಾಜಿಕ ಜಾಲತಾಣದ ಪೋಸ್ಟ್ ಮೂಲಕ ದೃಢಪಡಿಸಿದ್ದಾರೆ ಮತ್ತು ಈ ದಾಳಿಯನ್ನು ಖಂಡಿಸಿದ್ದಾರೆ. "ಈ ಖಂಡನೀಯ ದಾಳಿಗಳು ಮುಗ್ಧ ನಾಗರಿಕರ ಜೀವದ ಬಗ್ಗೆ ಸ್ಪಷ್ಟ ನಿರ್ಲಕ್ಷ್ಯವನ್ನು ಪ್ರದರ್ಶಿಸುತ್ತವೆ. ಹೌತಿಗಳು ಈಗಲೇ ಈ ದಾಳಿಗಳನ್ನು ನಿಲ್ಲಿಸಬೇಕು" ಎಂದು ಹೇಳಿದ್ದಾರೆ.

## ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ, ಆಫ್ರಿಕಾಗೆ ಪ್ರಾತಿನಿಧ್ಯ ಸಿಗಲೇಬೇಕು: ಜೈಶಂಕರ್ ಆಗ್ರಹ

**ಅಡಿಸ್ ಅಬಾಬಾ:** ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ ಮತ್ತು ಆಫ್ರಿಕಾ ಖಂಡಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆಯಲೇಬೇಕು ಎಂದು ಭಾರತದ ವಿದೇಶಾಂಗ ಸಚಿವ ಎಸ್ ಜೈಶಂಕರ್ ಹೇಳಿದ್ದಾರೆ. ಇಥಿಯೋಪಿಯಾದ ಅಡಿಸ್ ಅಬಾಬಾದಲ್ಲಿರುವ ಅಡ್ವಾ ವಿಜಯ ಸ್ಮಾರಕ ವಸ್ತುಸಂಗ್ರಹಾಲಯದಲ್ಲಿ ನಡೆದ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, 'ಜಾಗತಿಕ ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಈ ಎರಡೂ ಪ್ರಮುಖ ಶಕ್ತಿಗಳನ್ನು ಕಡಿಮೆ ಪ್ರಾತಿನಿಧ್ಯದೊಂದಿಗೆ ಮುಂದುವರಿಸಲು ಸಾಧ್ಯವಿಲ್ಲ ಎಂದು ಎಸ್. ಜೈಶಂಕರ್ ಹೇಳಿದ್ದಾರೆ. ಭಾರತವು 2023ರಲ್ಲಿ ಜಿ20 ಅಧ್ಯಕ್ಷತೆ ವಹಿಸಿದ್ದ ಸಂದರ್ಭದಲ್ಲಿ ಆಫ್ರಿಕನ್ ಒಕ್ಕೂಟಕ್ಕೆ ಜಿ20ಯಲ್ಲಿ ಕಾಯಂ ಸದಸ್ಯತ್ವ ದೊರಕಿಸಿಕೊಡಲು ಕೈಗೊಂಡ ಪ್ರಯತ್ನಗಳನ್ನೂ ಅವರು ಸ್ಮರಿಸಿದ ಅವರು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಆಫ್ರಿಕಾಕ್ಕೆ ಕಾಯಂ ಮತ್ತು ಕಾಯಂ ಅಲ್ಲದ ಎರಡೂ ಸದಸ್ಯತ್ವ ವಿಭಾಗಗಳಲ್ಲಿ ನ್ಯಾಯಯುತ ಪ್ರಾತಿನಿಧ್ಯ ದೊರೆಯಬೇಕು ಎಂದು ಪ್ರತಿಪಾದಿಸಿದರು.



**ಭಾರತ–ಆಫ್ರಿಕಾ ವ್ಯಾಪಾರ 100 ಶತಕೋಟಿ ಡಾಲರ್ ಸಮೀಪ:** ಮೂರು ರಾಷ್ಟ್ರಗಳ ಆಫ್ರಿಕಾ ಪ್ರವಾಸದ ಕೊನೆಯ ಹಂತದಲ್ಲಿರುವ ಜೈಶಂಕರ್, ಭಾರತವು ಆಫ್ರಿಕಾದ ನಾಲ್ಕನೇ ಅತಿದೊಡ್ಡ ವ್ಯಾಪಾರ ಪಾಲುದಾರ ರಾಷ್ಟ್ರವಾಗಿದೆ ಎಂದು ತಿಳಿಸಿದರು. ಭಾರತ ಮತ್ತು ಆಫ್ರಿಕಾ ನಡುವಿನ ದ್ವಿಪಕ್ಷೀಯ ವ್ಯಾಪಾರವು ಸುಮಾರು 100 ಶತಕೋಟಿ ಅಮೆರಿಕನ್ ಡಾಲರ್‌ಗಳ ಸಮೀಪದಲ್ಲಿದೆ ಎಂದರು. ಭಾರತದ ಬೆಂಬಲದೊಂದಿಗೆ ಆಫ್ರಿಕಾ ಖಂಡದ ವಿವಿಧ ಭಾಗಗಳಲ್ಲಿ 4.5 ಶತಕೋಟಿ ಡಾಲರ್ ಮೌಲ್ಯದ 220ಕ್ಕೂ ಹೆಚ್ಚು ಅಭಿವೃದ್ಧಿ ಯೋಜನೆಗಳು ಪೂರ್ಣಗೊಂಡಿವೆ ಎಂದು ಅವರು ಮಾಹಿತಿ ನೀಡಿದರು. ಆಫ್ರಿಕಾದಲ್ಲಿ ಹೂಡಿಕೆ ಮಾಡಲು ಭಾರತೀಯ ಉದ್ಯಮಗಳಿಗೆ ಕರೆ ನೀಡಿದರು.

ಒಂದು ವರ್ಷದವರೆಗೆ ಶಾಂತಿ ಭಂಗವಾಗುವಂತಿಲ್ಲ: ಸಿಜೆಪಿ ಕಾನೂನು ವಿಭಾಗದ ಮುಖ್ಯಸ್ಥೆ ರತ್ನಾ ಸಿಂಗ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

# ಷರತ್ತಿನ ಮೇಲೆ ಅಭಿಜೀತ್ ದಿಪ್ಕೆ ಸೇರಿ ಸಿಜೆಪಿ ಮುಖಂಡರ ಬಿಡುಗಡೆ

1. ಜ್ಞಾನೇಶ್ ಕುಮಾರ್ ವಿರುದ್ಧ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ಪ್ರಕರಣ
2. ಹಲವು ವಿದ್ಯಾರ್ಥಿ ಸಂಘಟನೆಗಳು ಹೊಸ ಪ್ರತಿಬಟನೆ ನೀಡಿದ ಕಾರಣ
3. ಭಾನುವಾರವೂ ದೆಹಲಿಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ.

**ನವದೆಹಲಿ:** ಕಾಕ್ರೋಚ್ ಜನತಾ ಪಾರ್ಟಿಯ ಸಂಸ್ಥಾಪಕ ಅಭಿಜೀತ್ ದಿಪ್ಕೆ ಮತ್ತು ಅವರ ತಂಡದ ಸಹ–ಸಂಯೋಜಕರಾದ ಸೌರವ್ ದಾಸ್ ಮತ್ತು ಅಶುತೋಷ್ ರಂಕಾ ಅವರನ್ನು ಭಾನುವಾರ ಬೆಳಗ್ಗೆ ಪೊಲೀಸ್ ವಶದಿಂದ ಬಿಡುಗಡೆ ಮಾಡಲಾಗಿದೆ. ಹಾಗೆಯೇ, ಶನಿವಾರ ಗುರುಗ್ರಾಮ್‌ನಲ್ಲಿರುವ ತಮ್ಮ ಮನೆಯಲ್ಲಿ ವಶಕ್ಕೆ ಪಡೆಯಲಾಗಿದ್ದ ಯೂಟ್ಯೂಬರ್ ಧ್ರುವ್ ರಾಥಿ ಅವರನ್ನು ಕೂಡ ತಡರಾತ್ರಿ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ಒಂದು ವರ್ಷದವರೆಗೆ ತಮ್ಮಿಂದ "ಶಾಂತಿ ಭಂಗವಾಗುವುದಿಲ್ಲ" ಎಂಬ ಷರತ್ತಿನ ಮೇಲೆ ಈ ಮೂವರು ನಾಯಕರನ್ನು ಬಿಡುಗಡೆ ಮಾಡಲಾಗಿದೆ ಎಂದು ಸಿಜೆಪಿ ಕಾನೂನು ವಿಭಾಗದ ಮುಖ್ಯಸ್ಥೆ ರತ್ನಾ ಸಿಂಗ್ 'ಎಕ್ಸ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ದಿಪ್ಕೆ ಮತ್ತು ಅವರ ಇಬ್ಬರು ಸಹಚರರನ್ನು ಇಂದು ದೆಹಲಿ ಕಾಂಟ್ ಪೊಲೀಸ್ ಠಾಣೆಯಲ್ಲಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಯಿತು ಮತ್ತು ಅವರು ಈ ಪ್ರತಿಭಟನಾಕಾರ ಬಿಡುಗಡೆಗೆ ಆದೇಶಿಸಿದರು. ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿದ ಕೆಲವೇ ಕ್ಷಣಗಳಲ್ಲಿ ಈ ಮೂವರನ್ನು ವಶಕ್ಕೆ ಪಡೆಯಲಾಗಿತ್ತು. ಧ್ರುವ್ ರಾಥಿ ಅವರನ್ನು



ಗುರುಗ್ರಾಮ್‌ನಲ್ಲಿರುವ ಅವರ ನಿವಾಸದಿಂದ ವಶಕ್ಕೆ ಪಡೆಯಲಾಗಿತ್ತು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಜಂತರ್ ಮಂತರ್‌ನಲ್ಲಿ ಸಿಜೆಪಿ ನೇತೃತ್ವದ ಪ್ರತಿಭಟನೆಯನ್ನು ತಡೆಯಲು ಪೊಲೀಸರು ಸಾವಿರಾರು ಜನರನ್ನು ವಶಕ್ಕೆ ಪಡೆದ ಮರುದಿನವೇ, ಸಿಜೆಪಿ ಮತ್ತು ಇತರೆ ವಿದ್ಯಾರ್ಥಿ ಸಂಘಟನೆಗಳು ಇಂದು ಹೊಸ ಪ್ರತಿಭಟನೆಗೆ ಕರೆ ನೀಡಿರುವುದರಿಂದ ದೆಹಲಿಯಲ್ಲಿ ತೀವ್ರ ಕಟ್ಟೆಚ್ಚರ ವಹಿಸಲಾಗಿದೆ.

ನವದೆಹಲಿ ಮತ್ತು ಮಧ್ಯ ದೆಹಲಿಯಾದ್ಯಂತ ಸಂಭಾವ್ಯ ನಿರ್ಬಂಧಗಳ ಬಗ್ಗೆ ಪೊಲೀಸರು ಎಚ್ಚರಿಕೆ ನೀಡಿದ್ದರೂ, ಸಿಜೆಪಿ ಇಂದು ಬೆಳಗ್ಗೆ 10 ಗಂಟೆಗೆ ಜಂತರ್ ಮಂತರ್‌ನಲ್ಲಿ ಮತ್ತೊಂದು ಪ್ರತಿಭಟನೆಗೆ ಕರೆ ನೀಡಿದೆ. ಸಿಜೆಪಿಯ ರಾಷ್ಟ್ರೀಯ ಸಂಘಟನಾ ಉಸ್ತುವಾರಿ ಅಜಿಂಕ್ಯ ಶಿಂಧೆ ಅವರು ಈ ಪ್ರತಿಭಟನೆಯ ನೇತೃತ್ವ ವಹಿಸುವ ನಿರೀಕ್ಷೆಯಿದೆ. ಆದರೆ ದಿಪ್ಕೆ ಮತ್ತು ಅವರ ಸಹಚರರು ಬಿಡುಗಡೆಯಾಗಿರುವುದರಿಂದ, ಮುಂದಿನ ಬೆಳವಣಿಗೆಗಳು ಹೇಗೆ ಸಾಗಲಿವೆ ಎಂಬುದನ್ನು ಕಾದು ನೋಡಬೇಕಿದೆ.

ಜಂತರ್ ಮಂತರ್‌ನಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ' ನಡೆಸಲಿರುವ ಪ್ರತಿಭಟನೆಗೂ ಮುನ್ನ ದೆಹಲಿ ಪೊಲೀಸರು ವಶಕ್ಕೆ ಪಡೆದಿದ್ದ ಯೂಟ್ಯೂಬರ್ ಧ್ರುವ್ ರಾಥಿ ಅವರನ್ನು ಶನಿವಾರ ತಡರಾತ್ರಿ ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

"ನಿಷೇಧಾಜ್ಞೆ ಹೊರತಾಗಿಯೂ ಅವರು ಜಂತರ್ ಮಂತರ್‌ಗೆ ಹೋಗಲು ಪ್ರಯತ್ನಿಸಿದರೆ, ಅವರನ್ನು ಮತ್ತೆ ವಶಕ್ಕೆ ಪಡೆಯಬಹುದು ಅಥವಾ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು" ಎಂದು ಪೊಲೀಸ್ ಮೂಲಗಳನ್ನು ಉಲ್ಲೇಖಿಸಿ ಪಿಟಿಐ ವರದಿ ಮಾಡಿದೆ.

ದೆಹಲಿಯಲ್ಲಿ ಭದ್ರತಾ ನಿರ್ಬಂಧಗಳ ನಡುವೆ ಈ ವಶಕ್ಕೆ ಪಡೆಯುವ ಪ್ರಕ್ರಿಯೆ ನಡೆದಿದ್ದು, ವಿವಿಧ ಸ್ಥಳಗಳಲ್ಲಿ 7,000ಕ್ಕೂ ಹೆಚ್ಚು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

### ಮಾಜಿ ಸಿಎಂಗಳನ್ನೂ ವಶ ಪಡೆಯಲಾಗಿತ್ತು

**ಮಾಜಿ ಮುಖ್ಯಮಂತ್ರಿಗಳಾದ ಅರವಿಂದ್ ಕೇಜ್ರಿವಾಲ್, ಮಮತಾ ಬ್ಯಾನರ್ಜಿ, ಪಿಣರಾಯಿ ವಿಜಯನ್ ಮತ್ತು ಮಾಣಿಕ್ ಸರ್ಕಾರ್ ಸೇರಿದಂತೆ ಹಲವು ವಿರೋಧ ಪಕ್ಷದ ನಾಯಕರು ಪ್ರತಿಭಟನೆಯಲ್ಲಿ ಸೇರಲು ಪ್ರಯತ್ನಿಸುತ್ತಿದ್ದಾಗ ಅವರನ್ನು ಸಹ ವಶಕ್ಕೆ ಪಡೆಯಲಾಗಿತ್ತು. ಪ್ರತಿಭಟನೆಯ ವೇಳೆ ಸಿಬ್ಬಂದಿಯ ಮೇಲೆ ನಡೆದಿದೆ ಎನ್ನಲಾದ ಹಲ್ಲೆಗೆ ಸಂಬಂಧಿಸಿದಂತೆ ಪೊಲೀಸರು ಹಲವು ಎಫ್‌ಐಆರ್‌ಗಳನ್ನು ದಾಖಲಿಸುವ ಸಾಧ್ಯತೆಯಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.**

## ಮಿನಿ ನ್ಯೂಸ್

### ಮಣಿಪುರದಲ್ಲಿ ಮತ್ತೆ ಹಿಂಸಾಚಾರ: 7 ಸಾವು

**ಇಂಫಾಲ್:** ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಭುಗಿಲೆದ್ದಿದ್ದು, ಭದ್ರತಾ ಆತಂಕವನ್ನು ಹೆಚ್ಚಿಸಿದೆ. ಘಟನೆಯಲ್ಲಿ ಏಳು ಮಂದಿ ಸಾವನ್ನಪ್ಪಿದ್ದು, ಪೊಲೀಸ್ ಠಾಣೆಯೊಂದಕ್ಕೆ ಬೆಂಕಿ ಹಚ್ಚಿ ಸುಟ್ಟುಹಾಕಿರುವ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು ತುರ್ತು ಮಧ್ಯಪ್ರವೇಶ ಮಾಡುವಂತೆ ಮಾಜಿ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಕೋರಿದ್ದಾರೆ. ನಾಗರಿಕರ ಹತ್ಯೆ ಮತ್ತು ದಾಳಿಗಳ ಬೆನ್ನಲ್ಲೇ ಕುಕಿ ಸಮಾಜದ ಸಂಘಟನೆಗಳು ರಾಜ್ಯದ ಕೆಲವು ಭಾಗಗಳಲ್ಲಿ ಪ್ರತ್ಯೇಕ ಬಂದ್‌ಗಳನ್ನು ಘೋಷಿಸಿವೆ. ಕಾಮ್‌ಜಾಂಗ್ ಜಿಲ್ಲೆಯ ಚಸ್ಸಾದ್, ಉಖ್ರುಲ್ ಜಿಲ್ಲೆಯ ಯೋಲೆನ್ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಯ ಐಟಿ ರಸ್ತೆಯುದ್ದಕ್ಕೂ ಇರುವ ಪ್ರದೇಶಗಳಲ್ಲಿ ಈ ಘಟನೆಗಳು ವರದಿಯಾಗಿವೆ. ಕಾಣೆಯಾದ ವ್ಯಕ್ತಿಗಳು ಮತ್ತು ವಸತಿ ಆಸ್ತಿಗಳಿಗೆ ಹಾನಿಯಾಗಿರುವ ವರದಿಗಳು ಬಾಧಿತ ಸಮುದಾಯಗಳಲ್ಲಿ ಆತಂಕವನ್ನು ಮತ್ತಷ್ಟು ಹೆಚ್ಚಿಸಿವೆ. ಬಿರೇನ್ ಸಿಂಗ್ ಅವರು 'ಎಕ್ಸ್' ಪೋಸ್ಟ್‌ನಲ್ಲಿ, ಭದ್ರತಾ ಕ್ರಮ ಕೈಗೊಂಡು, ಅಕ್ರಮ ಶಸ್ತ್ರಾಸ್ತ್ರಗಳ ವಶಪಡಿಸಿಕೊಳ್ಳಬೇಕು ಹಾಗೂ ಸಶಸ್ತ್ರ ಗುಂಪುಗಳ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳುವಂತೆ ಕರೆ ನೀಡಿದ್ದಾರೆ. ಅಲ್ಲದೆ, ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಭದ್ರತೆಯನ್ನು ಬಲಪಡಿಸುವಂತೆ ಅಧಿಕಾರಿಗಳಿಗೆ ಒತ್ತಾಯಿಸಿರುವ ಅವರು, ತಮ್ಮ ಮನವಿಯ ಬಗ್ಗೆ ಪ್ರಧಾನ ಮಂತ್ರಿಯವರ ಕಚೇರಿಯನ್ನು ಟ್ಯಾಗ್ ಮಾಡಿದ್ದಾರೆ.



### ವಿಮಾನ ನಿಲ್ದಾಣದ ಮೇಲೆ ಕ್ಷಿಪಣಿ ದಾಳಿ: 12 ಮಂದಿ ಸಾವು, 300ಕ್ಕೂ ಹೆಚ್ಚು ಜನರಿಗೆ ಗಾಯ

**ರಿಯಾದ್:** ಸೌದಿ ಅರೇಬಿಯಾದ ರಿಯಾದ್‌ನ ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಶನಿವಾರ ನಡೆದ ದಾಳಿಯಲ್ಲಿ ಅಮೆರಿಕದ ಪ್ರಜೆಯೂ ಸೇರಿದಂತೆ ಕನಿಷ್ಠ 12 ಮಂದಿ ಮೃತಪಟ್ಟಿದ್ದು, 309ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಎಂದು ಸೌದಿ ಅಧಿಕಾರಿಗಳು ತಿಳಿಸಿದ್ದಾರೆ. ಸೌದಿ ಅರೇಬಿಯಾದ ನಾಗರಿಕ ವಿಮಾನಯಾನ ಪ್ರಾಧಿಕಾರ ನೀಡಿರುವ ಮಾಹಿತಿಗಳ ಪ್ರಕಾರ, ಮೃತಪಟ್ಟವರಲ್ಲಿ ನಾಲ್ವರು ಸೌದಿ ಪ್ರಜೆಗಳು, ಇಬ್ಬರು ಬಾಂಗ್ಲಾದೇಶದವರು ಹಾಗೂ ಈಜಿಪ್ಟ್, ಜೋರ್ಡಾನ್, ಸಿರಿಯಾ, ಪ್ಯಾಲೆಸ್ತೀನ್ ಮತ್ತು ಸುಡಾನ್‌ನ ತಲಾ ಒಬ್ಬರು ಸೇರಿದ್ದಾರೆಂದು ತಿಳಿಸಿದೆ.



ಇದೇ ವೇಳೆ ಗಾಯಾಳುಗಳಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಹಲವರ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಗಳು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಇರಾನ್ ಯುದ್ಧದ ಭಾಗವಾಗಿ ಹೊಸದಾಗಿ ತೆರೆದುಕೊಂಡಿರುವ ಮತ್ತೊಂದು ಸಂಘರ್ಷದ ರಂಗದಲ್ಲಿ ಸೌದಿ ಅರೇಬಿಯಾ ಸರಣಿ ದಾಳಿಗಳನ್ನು ಎದುರಿಸುತ್ತಿದೆ. ನೆರೆಯ ಯೆಮನ್‌ನಲ್ಲಿರುವ ಇರಾನ್ ಬೆಂಬಲಿತ ಹೌತಿ ಬಂಡುಕೋರರೊಂದಿಗೆ ಸಂಘರ್ಷ ತೀವ್ರಗೊಂಡಿದೆ. ಹೌತಿಗಳ ವಿರುದ್ಧ ಸೌದಿ ಅರೇಬಿಯಾ ನಡೆಸುತ್ತಿರುವ ದಾಳಿಗಳಲ್ಲಿ ಅಮೆರಿಕವೂ ಭಾಗಿಯಾಗಬೇಕೇ ಎಂಬುದನ್ನು ಪರಿಶೀಲಿಸುತ್ತಿರುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ನಾವು ಭಾಗಿಯಾಗಬಹುದು. ಈ ಬಗ್ಗೆ ಪರಿಶೀಲಿಸುತ್ತೇವೆ. ವಿಮಾನ ನಿಲ್ದಾಣದ ಮೇಲಿನ ಇತ್ತೀಚಿನ ದಾಳಿಯ ಬಗ್ಗೆ ಈಗಷ್ಟೇ ತಿಳಿದುಕೊಂಡಿದ್ದೇವೆ. ನಿರ್ಧಾರ ಕೈಗೊಳ್ಳುತ್ತೇವೆ. ನಾವು ಬಹಳ ವೇಗವಾಗಿ ಕಾರ್ಯನಿರ್ವಹಿಸುತ್ತೇವೆ ಎಂದು ತಿಳಿಸಿದ್ದಾರೆ.

### ಪ್ರತಿಭಟನೆಗೆ ಬಾಂಗ್ಲಾ ನಾಯಕ ನಹಿದ್ ಇಸ್ಲಾಂ ಬೆಂಬಲ

**ಢಾಕಾ:** ನವದೆಹಲಿಯಲ್ಲಿ ಕಾಕ್ರಾಚ್ ಜನತಾ ಪಾರ್ಟಿ ನಾಯಕತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಬಾಂಗ್ಲಾದೇಶದ ನ್ಯಾಷನಲ್ ಸಿಟಿಜನ್ ಪಾರ್ಟಿ ಅಧಿಕೃತವಾಗಿ ಬೆಂಬಲ ಸೂಚಿಸಿದೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಎನ್‌ಸಿಪಿ ಸಂಚಾಲಕ ಹಾಗೂ ಬಾಂಗ್ಲಾದೇಶದ ಸಂಸದ ನಹಿದ್ ಇಸ್ಲಾಂ, "ಈ ಹೋರಾಟ ನಿಮ್ಮೊಬ್ಬರದ್ದಲ್ಲ, ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ನಾವು ನಿಮ್ಮೊಂದಿಗೆ ನಿಲ್ಲುತ್ತೇವೆ" ಎಂದು ಭಾರತದ ಪ್ರತಿಭಟನಾಕಾರರಿಗೆ ಸಾಲಿಡಾರಿಟಿ ಪ್ರಕಟಿಸಿದ್ದಾರೆ.

**ಈ ಹೋರಾಟ ನಿಮ್ಮೊಬ್ಬರದ್ದಲ್ಲ:** ಪ್ರಜಾಪ್ರಭುತ್ವದ ಸ್ವಾತಂತ್ರ್ಯಕ್ಕಾಗಿ ಭಾರತದ ಯುವಜನರು ನಡೆಸುತ್ತಿರುವ ಹೋರಾಟಗಳು ಪರಸ್ಪರ ಸಂಬಂಧ ಹೊಂದಿವೆ ಎಂದ ನಹಿದ್ ಇಸ್ಲಾಂ, ಬಾಂಗ್ಲಾದೇಶದಲ್ಲಿ ನಡೆದ ಜುಲೈ 2024 ರ ವಿದ್ಯಾರ್ಥಿ ದಂಗೆಯನ್ನು ನೆನಪಿಸಿಕೊಂಡು, "ನಾವು ಈ ಹೋರಾಟವನ್ನು ಹತ್ತಿರದಿಂದ ಬಲ್ಲೆವು, ಏಕೆಂದರೆ ನಾವೂ ಇದನ್ನು ಅನುಭವಿಸಿದ್ದೇವೆ. ನಮ್ಮಲ್ಲಿ ಕೋಟಾ ವಿರೋಧಿ ವಿದ್ಯಾರ್ಥಿ ಚಳವಳಿಯೇ ನಿರಂಕುಶ ಆಡಳಿತದ ವಿರುದ್ಧದ ದೇಶವ್ಯಾಪಿ ಹೋರಾಟವಾಗಿ ಮಾರ್ಪಟ್ಟಿತ್ತು" ಹಾಗಾಗಿ, ಈ ಹೋರಾಟ ನಿಮ್ಮೊಬ್ಬರದ್ದಲ್ಲ ಎಂದು ತಿಳಿಸಿದ್ದಾರೆ. ಮುಂದುವರೆದು, ದೆಹಲಿಯ ಜಂತರ್ ಮಂತರ್ ಬಳಿ ಪೊಲೀಸರು ಪ್ರತಿಭಟನಾಕಾರರು, ಸಂಘಟಕರು ಮತ್ತು ಪತ್ರಕರ್ತರನ್ನು ವಶಕ್ಕೆ ಪಡೆದಿರುವುದನ್ನು ಹಾಗೂ ಇಂಟರ್ನೆಟ್ ಸೇವೆಗಳ ಮೇಲೆ ನಿರ್ಬಂಧ ಹೇರಿರುವುದನ್ನು ಅವರು ತೀವ್ರವಾಗಿ ಖಂಡಿಸಿದ ನಹಿದ್ ಇಸ್ಲಾಂ, ಬಂಧಿತರನ್ನು ತಕ್ಷಣ ಬಿಡುಗಡೆ ಮಾಡಲು ಒತ್ತಾಯಿಸಿದ್ದಾರೆ. ಇದೇ ವೇಳೆ, "ಹಿಂದುತ್ವದ ಬಹುಸಂಖ್ಯಾತವಾದ, ಫ್ಯಾಸಿಸಂ ಮತ್ತು ಯಾವುದೇ ರೀತಿಯ ಧಾರ್ಮಿಕ ಪ್ರಾಬಲ್ಯವು ದಕ್ಷಿಣ ಏಷ್ಯಾದ ಭವಿಷ್ಯವನ್ನು ನಿರ್ಧರಿಸಬಾರದು" ಎಂದು ಪ್ರತಿಪಾದಿಸಿದ್ದಾರೆ.

### ಸಿಜೆಪಿ ಹೋರಾಟ ಮುಂದುವರಿಸಲಿದೆ

**ನವದೆಹಲಿ:** ಪೊಲೀಸ್ ವಶದಿಂದ ಬಿಡುಗಡೆಯಾದ ಕೆಲವೇ ಗಂಟೆಗಳ ನಂತರ, 'ಕಾಕ್ರೋಚ್ ಜನತಾ ಪಾರ್ಟಿ' ನಾಯಕರು ಭಾನುವಾರದಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧದ ತಮ್ಮ ಪ್ರತಿಭಟನೆಯನ್ನು ಮುಂದುವರಿಸುವುದಾಗಿ ಘೋಷಿಸಿದರು ಮತ್ತು ಈ ಪ್ರತಿಭಟನೆಯು ಈಗ ದೇಶಾದ್ಯಂತ ವಿಸ್ತರಿಸಲಿದೆ ಎಂದು ಹೇಳಿದರು. ಮೋದಿ ಸರ್ಕಾರ "ತುರ್ತು ಪರಿಸ್ಥಿತಿಯಂತಹ ಸನ್ನಿವೇಶ"ವನ್ನು ಸೃಷ್ಟಿಸಿದೆ ಮತ್ತು ರಾಜ್ಯವನ್ನು ತನ್ನದೇ ಆದ ನಾಗರಿಕರ ವಿರುದ್ಧ ನಿಲ್ಲುವಂತೆ ಮಾಡಿದೆ ಎಂದು ಅಎಕಯ ಸೌರವ್ ದಾಸ್ ಆರೋಪಿಸಿದರು.

ನಿಗದಿತ ಸ್ಥಳದಲ್ಲಿ ಪ್ರತಿಭಟನೆ ನಡೆಸಲು ಮುಂದಾದವರನ್ನು ತಡೆಯುವ ಬದಲು, ಅಧಿಕಾರಿಗಳು ಮಾತುಕತೆಗಾಗಿ ಅವರ ನಿಯೋಗವನ್ನು ಆಹ್ವಾನಿಸಬಹುದಿತ್ತು ಎಂದು ಅವರು ಹೇಳಿದರು. ಯಾವುದೇ ಅಧಿಕೃತ ಸೂಚನೆಯಿಲ್ಲದೆ ಪೊಲೀಸರು ತಮ್ಮನ್ನು ಅಕ್ರಮವಾಗಿ ವಶಕ್ಕೆ ಪಡೆದಿದ್ದರು ಎಂದು ಹೇಳಿದ ದಾಸ್, ತಮ್ಮ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಮತ್ತು ವಕೀಲರನ್ನು ಸಂಪರ್ಕಿಸಲು ಅವಕಾಶ ನೀಡಲಾಗಿಲ್ಲ ಎಂದು ಆರೋಪಿಸಿದರು. ತಮ್ಮ ಬಿಡುಗಡೆಯ ಸಂದರ್ಭದಲ್ಲಿ ವಿಧಿಸಲಾದ ಷರತ್ತಿನ ಕುರಿತು ಮಾತನಾಡಿದ ದಾಸ್, "ಒಂದು ವರ್ಷದವರೆಗೆ ಶಾಂತಿ ಭಂಗವಾಗಬಾರದು ಎಂದು ಅವರು ಹೇಳಿದ್ದಾರೆ. ಆದರೆ ನರೇಂದ್ರ ಮೋದಿ, ಅಮಿತ್ ಶಾ ಮತ್ತು ಜ್ಞಾನೇಶ್ ಕುಮಾರ್ ಅವರಿಂದಲೇ ಶಾಂತಿ ಭಂಗವಾಗಿದೆ," ಎಂದು ಆರೋಪಿಸಿದರು. "ಪ್ರತಿಭಟನೆಗಳು ನಡೆಯುತ್ತಿವೆ... ಕೇವಲ ದೆಹಲಿಯಲ್ಲಿ ಮಾತ್ರವಲ್ಲದೆ ಇಡೀ ದೇಶದಲ್ಲಿ ಪ್ರತಿಭಟನೆಗಳು ನಡೆಯಲಿವೆ," ಎಂದು ದಾಸ್ ಹೇಳಿದರು. "ಜ್ಞಾನೇಶ್ ರಾಜೀನಾಮೆ ನೀಡುವವರೆಗೂ ಈ ಪ್ರತಿಭಟನೆ ನಿಲ್ಲುವುದಿಲ್ಲ," ಎಂದು ಅಎಕ ಸಹ–ಸಂಯೋಜಕ ಅಶುತೋಷ್ ರಂಕಾ ಹೇಳಿದರು. ಈ ಪರಿಸ್ಥಿತಿಯು ಸರ್ವಾಧಿಕಾರಿ ಆಡಳಿತದ ಅಡಿಯಲ್ಲಿನ ತುರ್ತು ಪರಿಸ್ಥಿತಿಯನ್ನು ಹೋಲುತ್ತದೆ ಎಂದು ಹೇಳಿದ ದಾಸ್, ಪ್ರತಿಭಟನೆಯನ್ನು ವರದಿ ಮಾಡುತ್ತಿರುವ ಪತ್ರಕರ್ತರನ್ನೂ ಸರ್ಕಾರ ಗುರಿಯಾಗಿಸುತ್ತಿದೆ ಎಂದು ಆರೋಪಿಸಿದರು.




## ಅಚ್ಚರಿ! ಭಾರತ ವಿರುದ್ಧದ ಏಕದಿನ ಸರಣಿಗೆ ಎರಡು ತಂಡ ಪ್ರಕಟಿಸಿದ ನ್ಯೂಜಿಲೆಂಡ್

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ನವೆಂಬರ್ 4 ರಿಂದ ಐದು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿವೆ. ಇದಕ್ಕಾಗಿ ನ್ಯೂಜಿಲೆಂಡ್ ಕ್ರಿಕೆಟ್ ಮಂಡಳಿ ಎರಡು ತಂಡವನ್ನು ಪ್ರಕಟಿಸಿದೆ. ಇದರಲ್ಲಿ ಮಿಚೆಲ್ ಸ್ಯಾಂಟ್ನರ್, ಫಿನ್ ಅಲೆನ್, ಲಾಕಿ ಫರ್ಗುಸನ್, ರಚಿನ್ ರವೀಂದ್ರ ಮತ್ತು ಟಿಮ್ ಸಿಫರ್ಟ್ ನಂತಹ ಆಟಗಾರರು ಸೇರಿದ್ದಾರೆ. ಆದಾಗ್ಯೂ, ಈ ನಾಲ್ವರು ಆಟಗಾರರು ಇಡೀ ಸರಣಿಗೆ ಲಭ್ಯವಿರದ ಕಾರಣ ಎರಡು ತಂಡಗಳನ್ನು ಪ್ರಕಟಿಸಿದೆ.

ಇದು ಟೆಸ್ಟ್ ಸರಣಿಗೆ ತಂಡ ಆಯ್ಕೆ ಮಾಡುವ ದೃಷ್ಟಿಯಿಂದ ಎರಡು ತಂಡ ಪ್ರಕಟಿಸಲಾಗಿದೆ. ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಎರಡು ಪಂದ್ಯಗಳ ಟೆಸ್ಟ್ ಸರಣಿಯು ಏಕದಿನ ಸರಣಿ ಮುಗಿದ ಕೆಲವೇ ದಿನಗಳಲ್ಲಿ ಪ್ರಾರಂಭವಾಗಲಿದೆ. ಇಂತಹ ಪರಿಸ್ಥಿತಿಯಲ್ಲಿ, ಕಿವೀಸ್ ತಂಡದ ಆಡಳಿತ ಮಂಡಳಿಯು ಏಕದಿನ ತಂಡದಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರಿಗೆ ಟೆಸ್ಟ್ ತಂಡಕ್ಕೆ ಆಯ್ಕೆ ಮಾಡುವ ಉದ್ದೇಶ ಹೊಂದಿದೆ. ನ್ಯೂಜಿಲೆಂಡ್ ಮತ್ತು ಭಾರತ ನಡುವಿನ ಮೊದಲ ಟೆಸ್ಟ್ ಪಂದ್ಯವು ನವೆಂಬರ್ 19 ರಿಂದ ವೆಲ್ಲಿಂಗ್ಟನ್‌ನ ಬೇಸಿನ್ ರಿಸರ್ವ್‌ನಲ್ಲಿ ನಡೆಯಲಿದೆ.

**ರಚಿನ್ ರವೀಂದ್ರ ಕಮ್‌ಬ್ಯಾಕ್:** ಭುಜದ ಗಾಯದಿಂದಾಗಿ ರಚಿನ್ ರವೀಂದ್ರ ಭಾರತದ ವಿರುದ್ಧದ ಟಿ20 ಸರಣಿಯಿಂದ ಹೊರಗುಳಿದಿದ್ದಾರೆ. ಆದಾಗ್ಯೂ ಅವರು ಏಕದಿನ ತಂಡಕ್ಕೆ ಮರಳಿದ್ದು, ಮೊದಲ ಮೂರು ಪಂದ್ಯಗಳಲ್ಲಿ ಆಡುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಸರಣಿಯ ನಾಲ್ಕನೇ ಮತ್ತು ಐದನೇ ಏಕದಿನ ಪಂದ್ಯಗಳಿಗೆ ನ್ಯೂಜಿಲೆಂಡ್ ಎರಡನೇ ತಂಡವನ್ನು ಆಯ್ಕೆ ಮಾಡುವ ಸಾಧ್ಯತೆ ಇದೆ. ಈ ಪಂದ್ಯಗಳಲ್ಲಿ ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್‌ಗೆ ಅವಕಾಶ ಸಿಗಲಿದೆ. ಇಬ್ಬರೂ ಆಟಗಾರರು ಟಿ20 ಕ್ರಿಕೆಟ್‌ನಲ್ಲಿ ಆಕ್ರಮಣಕಾರಿ ಶೈಲಿಗೆ ಹೆಸರುವಾಸಿಯಾಗಿದ್ದಾರೆ. ಅಲೆನ್ ಮತ್ತು ಲಾಕಿ ಫರ್ಗುಸನ್ ಕೊನೆಯ ಬಾರಿಗೆ 2023ರಲ್ಲಿ ನ್ಯೂಜಿಲೆಂಡ್ ಪರ ಏಕದಿನ ಪಂದ್ಯಗಳನ್ನು ಆಡಿದ್ದರೆ, ಸೀಫರ್ಟ್ ಸುಮಾರು 18 ತಿಂಗಳ ಹಿಂದೆ ಪಾಕಿಸ್ತಾನ ವಿರುದ್ಧದ ತವರು ಸರಣಿಯಲ್ಲಿ ತಮ್ಮ ಕೊನೆಯ ಏಕದಿನ ಪಂದ್ಯ ಆಡಿದ್ದರು.

### ಭಾರತ-ನ್ಯೂಜಿಲೆಂಡ್ ಏಕದಿನ ಸರಣಿ ವೇಳಾಪಟ್ಟಿ

**ಮೊದಲ ಪಂದ್ಯ: ನವೆಂಬರ್ 4, ಈಡನ್ ಪಾರ್ಕ್, ಆಕ್ಲೆಂಡ್**
**ಎರಡನೇ ಪಂದ್ಯ: ನವೆಂಬರ್ 7, ಸ್ಕೈ ಕ್ರೀಡಾಂಗಣ, ವೆಲ್ಲಿಂಗ್ಟನ್**
**ಮೂರನೇ ಪಂದ್ಯ: ನವೆಂಬರ್ 10, ಸೆಡ್ಡನ್ ಪಾರ್ಕ್, ಹ್ಯಾಮಿಲ್ಟನ್**
**ನಾಲ್ಕನೇ ಪಂದ್ಯ: ನವೆಂಬರ್ 13 , ಬೇ ಓವಲ್, ಮೌಂಟ್ ಮೌಂಗನುಯಿ**
**ಐದನೇ ಪಂದ್ಯ: 15 ನವೆಂಬರ್, ಬೇ ಓವಲ್, ಮೌಂಟ್ ಮೌಂಗನುಯಿ**

ಕೊನೆಯ ಎರಡು ಪಂದ್ಯಗಳಿಗೆ ಆಯ್ಕೆಯಾದ ತಂಡದಲ್ಲಿ ಸ್ಯಾಂಟ್ನರ್, ಬ್ರೇಸ್‌ವೆಲ್, ಚಾಪ್‌ಮನ್, ಜಾಕೋಬ್ ಡಫಿ, ಬ್ಲೇರ್ ಟಿಕ್ನರ್ ಮತ್ತು ವಿಲ್ ಯಂಗ್ ಸೇರಿದ್ದಾರೆ. ಅವರಲ್ಲದೆ, ಕ್ರಿಶ್ಚಿಯನ್ ಕ್ಲಾರ್ಕ್, ಮ್ಯಾಟ್ ಫಿಶರ್, ಮಿಚ್ ಹೇ ಮತ್ತು ನಿಕ್ ಕೆಲ್ಲಿ ಕೂಡ ಸ್ಥಾನ ಪಡೆದಿದ್ದಾರೆ.

**ನ್ಯೂಜಿಲೆಂಡ್ ಏಕದಿನ ತಂಡ:** ಮೊದಲ ಮೂರು ಏಕದಿನ ಪಂದ್ಯಗಳಿಗೆ ನ್ಯೂಜಿಲೆಂಡ್ ತಂಡ ಮಿಚೆಲ್ ಸ್ಯಾಂಟ್ನರ್ (ನಾಯಕ), ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಡೆವೊನ್ ಕಾನ್ವೇ, ಜಾಕೋಬ್ ಡಫಿ, ಮ್ಯಾಟ್ ಹೆನ್ರಿ, ಕೈಲ್ ಜೇಮಿಸನ್, ಟಾಮ್ ಲ್ಯಾಥಮ್ (ವಿಕೆಟ್ ಕೀಪರ್), ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ರಚಿನ್ ರವೀಂದ್ರ, ನಾಥನ್ ಸ್ಮಿತ್, ಬ್ಲೇರ್ ಟಿಕ್ನರ್ ಮತ್ತು ವಿಲ್ ಯಂಗ್.

**ಕೊನೆಯ ಎರಡು ಏಕದಿನ ಪಂದ್ಯಗಳಿಗೆ ನ್ಯೂಜಿಲೆಂಡ್ ತಂಡ:** ಮಿಚೆಲ್ ಸ್ಯಾಂಟ್ನರ್ (ನಾಯಕ), ಫಿನ್ ಅಲೆನ್, ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಕ್ರಿಶ್ಚಿಯನ್ ಕ್ಲಾರ್ಕ್, ಜಾಕೋಬ್ ಡಫಿ, ಮ್ಯಾಟ್ ಫಿಶರ್, ಮಿಚ್ ಹೇ (ವಿಕೆಟ್ ಕೀಪರ್), ಟಿಮ್ ಸಿಫರ್ಟ್ (ವಿಕೆಟ್ ಕೀಪರ್), ನಿಕ್ ಕೆಲ್ಲಿ, ಬ್ಲೇರ್ ಟಿಕ್ನರ್ ಮತ್ತು ವಿಲ್ ಯಂಗ್.

# ಬೃಂದಾ ವಿಹಾರಿ ನವೆಂಬರ್ 20ಕ್ಕೆ ಬಿಡುಗಡೆ



ಇತ್ತೀಚಿನ ಕನ್ನಡ ಚಲನಚಿತ್ರಗಳ ಬೆಳವಣಿಗೆ ಕಂಡು ಅತ್ಯಂತ ಖುಷಿಯಾಗಿದೆ. ಕನ್ನಡ ಚಲನಚಿತ್ರಗಳು ಹೌಸ್‌ಫುಲ್ ಆಗುತ್ತಿದ್ದು, ಬಹುನಿರೀಕ್ಷಿತ ಬೃಂದಾ ವಿಹಾರಿ ಚಲನಚಿತ್ರವನ್ನು ನವೆಂಬರ್ 20 ರಂದು ಬಿಡುಗಡೆ ಮಾಡಲಾಗುವುದು ಎಂದು ಚಿತ್ರದ ನಾಯಕ ನಟ ಗೋಲ್ಡನ್ ಸ್ಟಾರ್ ಗಣೇಶ್ ಹಾಗೂ ಚಿತ್ರದ ನಿರ್ಮಾಪಕ ಸಮೃದ್ಧಿ ಮಂಜುನಾಥ್ ಹೇಳಿದರು.

ನಗರದಲ್ಲಿ ಜಂಟಿ ಮಾಧ್ಯಮಗೋಷ್ಠಿ ನಡೆಸಿ ಮಾತನಾಡಿದ ಅವರು, ಈಗಾಗಲೇ ಕನ್ನಡ ಚಲನಚಿತ್ರವೊಂದು ಮನೆ ಮಾತಾಗುತ್ತಿದೆ. ಪ್ರೇಮದ ಊರಲ್ಲಿ ಚಲನಚಿತ್ರ ಯಶಸ್ಸು ಕಂಡಿದೆ. ಸಾಕಷ್ಟು ಪ್ರಶಂಸೆಯನ್ನು ಪಡೆದುಕೊಂಡಿದೆ. ನಾನು ಕೂಡ ಚಲನಚಿತ್ರ ವೀಕ್ಷಣೆ ಮಾಡಿ ಶುಭ ಹಾರೈಸಿದ್ದೇನೆ. ಆದರೆ ಈಗ ನಮ್ಮ ಚಲನಚಿತ್ರ ಬಿಡುಗಡೆ ಮಾಡಿದ್ರೆ ಆ ಚಲನಚಿತ್ರಕ್ಕೂ ನಮ್ಮ ಚಲನಚಿತ್ರಕ್ಕೂ ಥೇಟರ್ ಸಮಸ್ಯೆ ಕಾಡುವ ಸಾಧ್ಯತೆ ಇದೆ. ಹೀಗಾಗಿ ನಾವು ಒಂದು ನಿರ್ಧಾರಕ್ಕೆ ಬಂದಿದ್ದು, ಇದೇ ತಿಂಗಳು 16ಕ್ಕೆ ಬಿಡುಗಡೆಯಾಗಬೇಕಿದ್ದ ಚಲನಚಿತ್ರವನ್ನು ನವೆಂಬರ್ 20ಕ್ಕೆ ಬಿಡುಗಡೆ ಮಾಡುವುದಾಗಿ

ಗೋಲ್ಡನ್ ಸ್ಟಾರ್ ಗಣೇಶ್ ಮಾತನಾಡಿ, ಬೃಂದಾವಿಹಾರಿ ಮಾದವನ ಪಾತ್ರ ಮಾಡಿದ್ದೇನೆ. ಇಷ್ಟಪಟ್ಟು ಈ ಚಿತ್ರ ಪ್ರೇಮದ ಊರಲಿ ಚಿತ್ರ ಚೆನ್ನಾಗಿ ಓಡುತ್ತಿದೆ. ಬರಬೇಕಾದ್ರೆ ಅದಕ್ಕಾಗಿ ನಮ್ಮ ಚಿತ್ರ ರಿಲೀಸ್ ಮುಂದೂಡಿದ್ದೇವೆ

ನಿರ್ಮಾಪಕ ಸಮೃದ್ಧಿ ಮಂಜುನಾಥ ಮಾತನಾಡಿ, ಪ್ರೇಮಕಥೆ ಆಧಾರಿತ ಚಲನಚಿತ್ರ ಮಾಡುವ ಇಂಗಿತ ಗ್ರಾಮದಲ್ಲಿ ನಡೆಸ ಮರ್ಯಾದೆ ಹತ್ಯೆ ಕುರಿತಂತೆ ಕೆಲ ಕಾನೂನು ಸಲಹೆ

ಕೃಷ್ಣಂ ಪ್ರಣಯ ಸಖಿ ಚಿತ್ರವನ್ನು ಚಿತ್ರರಂಗದಲ್ಲಿ ಎರಡು ದಶಕಗಳನ್ನು ನಟಿಸುತ್ತಿದ್ದು, ಅವರಿಗೆ ದೇವಿಕಾ ಭಟ್ ಗಣೇಶ್ ಹಾಗೂ ಶ್ರೀನಿವಾಸರಾಜು ಸಿನಿಮಾ ಇದಾಗಿದೆ. ಚಿತ್ರದಲ್ಲಿ ಒಟ್ಟು ಎಲ್ಲಾ ಹಾಡುಗಳನ್ನು ವಿ.ನಾಗೇಂದ್ರ ಛಾಯಾಚಿತ್ರಗ್ರಹಣ, ಹೇಶಮ್



ತಿಳಿಸಿದರು.

1945 ಕಾಲಘಟ್ಟದಲ್ಲಿ ನಡೆಯುವ ಕಥೆಯಾಗಿದೆ. ಚಿತ್ರದಲ್ಲಿ ಮಾಡಿದ್ದೇನೆ. ಹೊಸ ಗಣೇಶ್ ಈ ಚಿತ್ರದಲ್ಲಿ ಕಾಣಿಸುತ್ತಾನೆ. ಎಲ್ಲರೂ ಹೊಸಬರೇ, ಅವರ ಬೆನ್ನು ತಟ್ಟಬೇಕು. ಎಂದರು.

ಉತ್ತರ ಕರ್ನಾಟಕ ಭಾಗದಲ್ಲಿ ನಡೆದ ಒಂದು ನೈಜ ವ್ಯಕ್ತಪಡಿಸಿದರು. ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಚಲನಚಿತ್ರ ಮಾಡುವದಾಗಿ ತಿಳಿಸಿದ್ದು, ಈ ಕುರಿತಂತೆ ಪಡೆಯಲಾಗುತ್ತಿದೆ ಎಂದು ಹೇಳಿದರು.

ನಿರ್ದೇಶಿಸಿದ್ದ ಶ್ರೀನಿವಾಸರಾಜು ನಿರ್ದೇಶನ ಮಾಡಿದ್ದಾರೆ. ಪೂರೈಸಿರುವ ಗಣೇಶ್, ಈ ಸಿನಿಮಾದಲ್ಲಿ ನಾಯಕರಾಗಿ ಹಾಗೂ ಮಾಳವಿಕಾ ಶರ್ಮ ಜೋಡಿಯಾಗಿದ್ದಾರೆ. ಅವರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಏಳು ಹಾಡುಗಳಿದ್ದು, ಮ್ಯೂಸಿಕಲ್ ಲವ್ ಸ್ಟೋರಿಯಾಗಿದೆ. ಪ್ರಸಾದ್ ಅವರೇ ಬರೆದಿದ್ದಾರೆ. ವೆಂಕಟ್ ಪ್ರಸಾದ್ ಅಬ್ದುಲ್ ವಹಾಬ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

## ಫುಟ್ಬಾಲ್ ಸ್ಟಾರ್ ಕ್ರಿಸ್ಟಿಯಾನೊ ರೊನಾಲ್ಡೊಗೆ ನಿಷೇಧ!



ಫುಟ್ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊಗೆ ಪೋರ್ಚುಗಲ್ ಫುಟ್ಬಾಲ್ ಫೆಡರೇಶನ್ ಬಿಗ್ ಶಾಕ್ ನೀಡಿದ್ದು ಅವರ ಮೇಲೆ ತಾತ್ಕಾಲಿಕ ನಿಷೇಧ ಹೇರಿದೆ. ಲೀಗ್ ಪಂದ್ಯದ ಸಮಯದಲ್ಲಿ ತಮಗೆ ಆಡಲು ಅವಕಾಶ ನೀಡದೆ ಬೆಂಚಲ್ಲಿ ಕೂರಿಸಿದಕ್ಕಾಗಿ ತನ್ನ ತರಬೇತುದಾರರೊಂದಿಗೆ ಜಗಳ ಮಾಡಿಕೊಂಡು ಅನುಮತಿಯಿಲ್ಲದೆ ಶಿಬಿರವನ್ನು ತೊರೆದಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿರುವ ಪೋರ್ಚುಗಲ್ ಫೆಡರೇಶನ್ ತಾತ್ಕಾಲಿಕ ನಿಷೇಧ ವಿಧಿಸಿದೆ.

**ಏನಿದು ಘಟನೆ:** ವಾಸ್ತವಾಗಿ, ನಾರ್ವೆ ವಿರುದ್ಧದ UEFA ನೇಷನ್ಸ್ ಲೀಗ್ ಪಂದ್ಯಕ್ಕೂ ಮೊದಲು ರೊನಾಲ್ಡೊ ದ್ವಿತೀಯಾರ್ಧದಲ್ಲಿ ಮೈದಾನಕ್ಕಿಳಿಯುವ ಭರವಸೆ ಹೊಂದಿದ್ದರು. ಆದಾಗ್ಯೂ, ತಂಡದ ಮುಖ್ಯ ತರಬೇತುದಾರ ಜಾರ್ಜ್ ಜೀಸಸ್ ಅವರನ್ನು ಇಡೀ ಪಂದ್ಯದವರೆಗೆ ಬೆಂಚ್ ಮೇಲೆ ಕೂರಿಸಿ ಆಡಲು ಅವಕಾಶ ನೀಡಿರಲಿಲ್ಲ ಎಂದು ಕೋಪಗೊಂಡ ರೋನಾಲ್ಡೊ ಯಾರ ಅನುಮತಿ ಇಲ್ಲದೆ ಶಿಬಿರವನ್ನು ತೊರೆದಿದ್ದರು.

ಜೊತೆಗೆ ನಾರ್ವೆ ವಿರುದ್ಧದ ಪಂದ್ಯಕ್ಕೆ ಕೋಚ್ ಜಾರ್ಜ್ ತಮ್ಮನ್ನು ತಂಡದಲ್ಲಿ ಸೇರಿಸಿಕೊಳ್ಳುವುದಾಗಿ ಭರವಸೆ ನೀಡಿಯೂ ಬೆಂಚ್‌ನಲ್ಲಿ ಕೂರಿಸಿದ್ದರು ಎಂದು ಸಾಮಾಜಿಕ ಜಾಲತಾಣಗಳಲ್ಲಿ ಅಸಮಾಧಾನ ಹೊರಹಾಕಿದ್ದರು.

**ಕ್ಷಮೆಯಾಚಿಸಿದ ರೊನಾಲ್ಡೊ:** ಈ ಘಟನೆಗೆ ಸಂಬಂಧಿಸಿದಂತೆ ರೊನಾಲ್ಡೊ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ತಮ್ಮ ಈ ವರ್ತನೆಗೆ ತಂಡದ ಸದಸ್ಯರು ಮತ್ತು ಅಭಿಮಾನಿಗಳಲ್ಲಿ ಕ್ಷಮೆಯಾಚಿಸಿ ಕ್ರಮದ ಬಗ್ಗೆಯೂ ಒಪ್ಪಿಕೊಂಡಿದ್ದಾರೆ. ತಂಡಕ್ಕಾಗಿ ಆಡಲು ಮತ್ತು ತಂಡದ ಗೆಲುವಿಗೆ ಸಹಾಯ ಮಾಡಲು ತಾವು ಸದಾ ಲಭ್ಯವಿರುವುದಾಗಿ ತಿಳಿಸಿದ್ದಾರೆ. ಫುಟ್ಬಾಲ್ ಫೆಡರೇಶನ್ ಸಹ ಪ್ರತಿಕ್ರಿಯೆ ನೀಡಿದ್ದು, ರೋನಾಲ್ಡೊ ವಿಷಯವನ್ನು ಗಂಭೀರ ಎಂದು ಪರಿಗಣಿಸಿದೆ ಮತ್ತು ದೇಶಕ್ಕಾಗಿ ಆಡುವ ಯಾವುದೇ ಆಟಗಾರ, ಅವನ ಜನಪ್ರಿಯತೆ ಮತ್ತು ಸ್ಥಾನಮಾನ ಎಷ್ಟೇ ದೊಡ್ಡದಾಗಿದ್ದರೂ, ನಿಯಮಗಳನ್ನು ಮೀರುವಂತಿಲ್ಲ ಎಂದು ತಿಳಿಸಿದೆ. ವಿವಾದದ ನಡುವೆಯೂ ರೊನಾಲ್ಡೊ ಅಲ್-ನಾಸ್ರ್ ಪರ ಆಡುವುದನ್ನು ಮುಂದುವರೆಸಿದ್ದಾರೆ, ಶುಕ್ರವಾರ ನಡೆದಿದ್ದ ಅಲ್-ದಿರಿಯಾ ವಿರುದ್ಧದ ಪಂದ್ಯದಲ್ಲಿ ಗೋಲು ಗಳಿಸಿದರು, ಇದರಿಂದಾಗಿ ಅವರ ತಂಡವು 3-0 ಅಂತರದಿಂದ ಪಂದ್ಯವನ್ನು ಗೆದ್ದುಕೊಂಡಿತು. ಈ ಗೆಲುವಿನೊಂದಿಗೆ ಸೌದಿ ಪ್ರೊ ಲೀಗ್‌ನ 8ನೇ ಸುತ್ತಿನ ಪಾಯಿಂಟ್ ಪಟ್ಟಿಯಲ್ಲಿ ಅಲ್-ನಾಸ್ರ್ ತಂಡ ಅಲ್-ಕಾದ್ಸಿಯಾ ಜೊತೆ ಸಮಬಲ ಸಾಧಿಸಿತು.

**ರಿಬೌಂಡ್‌ನಲ್ಲಿ ಗೋಲು ಗಳಿಸಿದ ರೊನಾಲ್ಡೊ:** ಕಿಂಗ್ಸ್ಲಿ ಕೊಮನ್ ಹೊಡೆದ ಚೆಂಡನ್ನು ಗೋಲ್‌ಕೀಪರ್ ವಾಲಿದ್ ಅಬ್ದುಲ್ಲಾ ತಡೆದು ಚೆಂಡನ್ನು ದೂರಕ್ಕೆ ತಳ್ಳಿದ್ದರು. ಈ ವೇಳೆ ಅಲ್ಲೆ ಇದ್ದ ರೊನಾಲ್ಡೊ ರಿಬೌಂಡ್ ಮೂಲಕ ಚೆಂಡನ್ನು ಗೋಲ್ ಪೋಸ್ಟ್‌ಗೆ ಕಳುಹಿಸಿದರು. ಇದಾದ ನಂತರ ವಿರಾಮಕ್ಕೆ ಸ್ವಲ್ಪ ಸಮಯದ ಮೊದಲು ಸಮು ಕೋಸ್ಟಾ ಅಲ್-ನಾಸ್ರ್ ಪರ ಎರಡನೇ ಗೋಲು ಗಳಿಸಿದರು. ಇನ್ನು ಪಂದ್ಯ ಮುಕ್ತಾಯಕ್ಕೆ 13 ನಿಮಿಷಗಳ ಬಾಕಿ ಇರುವಾಗ ಕೋಮನ್ ಮೂರನೇ ಗೋಲು ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

**980ನೇ ಗೋಲು ಪೂರ್ಣಗೊಳಿಸಿದ ರೊನಾಲ್ಡೊ:** ಈ ಪಂದ್ಯದ ಮೊದಲಾರ್ಧದ ಮಧ್ಯದಲ್ಲಿ ರೊನಾಲ್ಡೊ ಗೋಲು ಗಳಿಸುವ ಮೂಲಕ ತಮ್ಮ ವೃತ್ತಿಜೀವನದ 980ನೇ ಗೋಲು ಪೂರ್ಣಗೊಳಿಸಿದರು ಇದರೊಂದಿಗೆ 1000 ಗೋಲುಗಳಿಗೆ ಮತ್ತಷ್ಟು ಹತ್ತಿರವಾಗಿದ್ದಾರೆ. ರೊನಾಲ್ಡೊ ಪೋರ್ಚುಗಲ್ ಪರ 234 ಅಂತರಾಷ್ಟ್ರೀಯ ಪಂದ್ಯಗಳಲ್ಲಿ 146 ಗೋಲುಗಳನ್ನು ಗಳಿಸಿದ್ದಾರೆ ಎಂಬುದು ಗಮನಾರ್ಹ.

## ಭಾರತ ಹಾಗೂ ವೆಸ್ಟ್ ಇಂಡೀಸ್ ಹೈ-ವೋಲ್ಟೇಜ್ T-20I ಕದನ, ಇಂದಿನಿಂದ ನಿರ್ಣಾಯಕ ಪಂದ್ಯದ ಟಿಕೆಟ್‌ಗಳ ಮಾರಾಟ



ಭಾರತ ಹಾಗೂ ವೆಸ್ಟ್ ಇಂಡೀಸ್ ನಡುವಿನ ರೋಚಕ T-20I ಸರಣಿಯ ಅಂತಿಮ ಪಂದ್ಯಕ್ಕೆ ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣ ಸಜ್ಜಾಗಿದೆ. ಅಕ್ಟೋಬರ್ 17ರಂದು ನಡೆಯಲಿರುವ ಈ ಹೈ-ವೋಲ್ಟೇಜ್ ಪಂದ್ಯದ ಟಿಕೆಟ್‌ಗಳ ಮಾರಾಟ ಇಂದು ಮಧ್ಯಾಹ್ನ 12ಗಂಟೆಯಿಂದ ಆರಂಭವಾಗಲಿದೆ. ಈ ಬಾರಿ ಕೇವಲ ಟಿಕೆಟ್‌ಜೆನಿ ಮೊಬೈಲ್ ಆಪ್ ಮೂಲಕ ಮಾತ್ರವೇ ಅಧಿಕೃತವಾಗಿ ಟಿಕೆಟ್‌ಗಳು ಮಾರಾಟವಾಗಲಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಸ್ಪಷ್ಟಪಡಿಸಿದೆ. ಬೇರೆ ಯಾವುದೇ ಆನ್‌ಲೈನ್ ಜಾಲತಾಣಗಳಲ್ಲಿ ಅಥವಾ ಪರ್ಯಾಯ ವೇದಿಕೆಗಳಲ್ಲಿ ಈ ಪಂದ್ಯದ ಟಿಕೆಟ್‌ಗಳು ಲಭ್ಯವಿರುವುದಿಲ್ಲ. ಆದ್ದರಿಂದ, ಅಭಿಮಾನಿಗಳು ಮಧ್ಯಾಹ್ನ 12 ಗಂಟೆಗೆ ನಿಗದಿತ ಆಪ್ ಮೂಲಕ ತಮ್ಮ ಟಿಕೆಟ್‌ಗಳನ್ನು ಬುಕ್ ಮಾಡಬಹುದು. ಸರಣಿಯ ನಿರ್ಣಾಯಕ ಪಂದ್ಯದ ಟಿಕೆಟ್‌ಗಳಿಗೆ ಭಾರಿ ಬೇಡಿಕೆ ಇರುವುದರಿಂದ ಅಭಿಮಾನಿಗಳು ಯಾವುದೇ ಮಧ್ಯವರ್ತಿಗಳು ಅಥವಾ ವಂಚಕರ ಜಾಲಕ್ಕೆ ಬಲಿಯಾಗದೆ, ಕೇವಲ ಅಧಿಕೃತ ಟಿಕೆಟ್‌ಜೆನಿ ಮೊಬೈಲ್ ಆಪ್ ಮಾತ್ರ ಬಳಸುವಂತೆ ರಾಜ್ಯ ಕ್ರಿಕೆಟ್ ಸಂಸ್ಥೆ ಮನವಿ ಮಾಡಿದೆ. ಅಲ್ಲದೆ ಪಂದ್ಯದ ದಿನದಂದು ಕ್ರೀಡಾಂಗಣದ ಸುತ್ತಮುತ್ತ ಭಾರಿ ಜನಸಂದಣಿ ಹಾಗೂ ಟ್ರಾಫಿಕ್ ದಟ್ಟಣೆ ಉಂಟಾಗುವ ಸಾಧ್ಯತೆ ಇರುವುದರಿಂದ, ಪ್ರೇಕ್ಷಕರು ಮುಂಚಿತವಾಗಿ ಸ್ಥಳಕ್ಕೆ ಆಗಮಿಸಲು ಮತ್ತು ಡಿಜಿಟಲ್ ಟಿಕೆಟ್ ಅಥವಾ ಮುದ್ರಿತ ಪ್ರತಿಯನ್ನು ಕಡ್ಡಾಯವಾಗಿ ಕೈಯಲ್ಲಿಟ್ಟುಕೊಳ್ಳುವಂತೆ ಮನವಿ ಮಾಡಲಾಗಿದೆ.

# 5 ಕೋಟಿ ದಾಟಿತು ಪ್ರೇಮದ ಊರಲಿ
## 50 ಕೋಟಿಯತ್ತ 2 ಕೋಟಿ ಬಜೆಟ್‌ನ ಕನ್ನಡ ಸಿನಿಮಾ



ಸಿನಿಮಾವೊಂದರ ಯಶಸ್ಸಿಯಲ್ಲಿ ಒಂದೊಳ್ಳೆ ಕಥೆ ಮತ್ತು ಪ್ರೇಕ್ಷಕರ ಬಾಯ್ಮಾತಿನ ಪ್ರಚಾರ ಪ್ರಮುಖ ಪಾತ್ರ ವಹಿಸುತ್ತವೆ ಅನ್ನೋದನ್ನು ಕನ್ನಡ ಸಿನಿಮಾ 'ಪ್ರೇಮದ ಊರಲಿ' ಮತ್ತೊಮ್ಮೆ ಸಾಬೀತುಪಡಿಸಿದೆ. ಕೇವಲ 10 ಲಕ್ಷ ರೂಪಾಯಿಯೊಂದಿಗೆ ಬಾಕ್ಸ್ ಆಫೀಸ್ ಪ್ರಯಾಣ ಪ್ರಾರಂಭಿಸಿದ ಕೌಟುಂಬಿಕ, ಪ್ರೇಮಕಥೆ ತನ್ನ 15 ದಿನಗಳಲ್ಲಿ ಒಟ್ಟು 39.05 ಕೋಟಿ ರೂಪಾಯಿ ಸಂಪಾದಿಸಿದೆ. ಈ ಸಿನಿಮಾ ಕೇವಲ 2 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿರ್ಮಾಣಗೊಂಡಿದೆ ಎಂದು ವರದಿಯಾಗಿದೆ.

**ಪ್ರೇಮದ ಊರಲಿ 15ನೇ ದಿನದ ಕಲೆಕ್ಷನ್:** ಸಿನಿಮಾ ಇಂಡಸ್ಟ್ರಿ ಟ್ರ್ಯಾಕರ್ ಸ್ಯಾಕ್ನಿಲ್ಕ್ ಮಾಹಿತಿ ಪ್ರಕಾರ, ಅಕ್ಷಿ ಮೂಲಕ ರಾಷ್ಟ್ರಪ್ರಶಸ್ತಿ ಗೌರವಕ್ಕೆ ಪಾತ್ರರಾದ ಮನೋಜ್ ಕುಮಾರ್ ನಿರ್ದೇಶನದ ಸಿನಿಮಾ 'ಪ್ರೇಮದ ಊರಲಿ' ಶುಕ್ರವಾರದಂದು ಬರೋಬ್ಬರಿ 5.30 ಕೋಟಿ ರೂಪಾಯಿ ಕಲೆಕ್ಷನ್ ಮಾಡಿದೆ. ಸಹಜವಾಗಿ ವಾರಾಂತ್ಯದಲ್ಲಿ ಸಿನಿಮಾಗಳು ಸದ್ದು ಮಾಡುತ್ತವೆ. ಅಂತಹದರಲ್ಲಿ ಕನ್ನಡ ಸಿನಿಮಾವೊಂದು ವಾರದ ದಿನಗಳಲ್ಲಿಯೇ 4-5 ಕೋಟಿ ರೂಪಾಯಿ ಗಳಿಕೆ ಮಾಡುತ್ತಿರುವುದು ಚಂದನವನದಲ್ಲಿ ಹೊಸ ಭರವಸೆ ಮೂಡಿಸಿದೆ. ಈ ಸಿನಿಮಾ ಗುರುವಾರದಂದು 4.56 ಕೋಟಿ ರೂಪಾಯಿ ಗಳಿಸಿತ್ತು. ಪ್ರತಿದಿನ ಏರಿಕೆ ಕಂಡುಬರುತ್ತಲೇ ಇದ್ದು ಮತ್ತಷ್ಟು ಗಳಿಸುವ ನಿರೀಕ್ಷೆಯಿದೆ.

**15 ದಿನಗಳ ಒಟ್ಟು ಗಳಿಕೆ:** ಅದ್ದೂರಿ ಸಿನಿಮಾಗಳ ನಡುವೆ ಮೂಡಿಬಂದ ಭಾವನಾತ್ಮಕ ಸಿನಿಮಾ ಸೆಪ್ಟಂಬರ್ 25ರಂದು ಸಖತ್ ಸಿಂಪಲ್ ಆಗಿ ಥಿಯೇಟರ್‌ಗೆ ಎಂಟ್ರಿ ಕೊಟ್ಟಿತು. ಮೊದಲ ದಿನ ಈ ಸಿನಿಮಾ ಕೇವಲ 60 ಶೋಗಳಲ್ಲಿ 10 ಲಕ್ಷ ರೂಪಾಯಿ ಗಳಿಸಿತ್ತು ಅನ್ನೋದನ್ನು ನೀವು ನಂಬಲೇಬೇಕು! 2ನೇ ದಿನ 27 ಲಕ್ಷ ರೂಪಾಯಿ, 3ನೇ ದಿನ 65 ಲಕ್ಷ ರೂಪಾಯಿ, 4ನೇ ದಿನ 75 ಲಕ್ಷ ರೂಪಾಯಿ ಗಳಿಸಿದ ಚಿತ್ರ ತನ್ನ 5ನೇ ದಿನ ಕೋಟಿಗೆ ತಲುಪಿ ಬರೋಬ್ಬರಿ 1.09 ಕೋಟಿ ರೂಪಾಯಿ ಕಲೆಕ್ಷನ್ ಮಾಡಿತು. ನಂತರದ್ದು ಇತಿಹಾಸ! ಈ ವಾರ ಪ್ರತಿದಿನವೂ ಸರಿ-ಸುಮಾರು 4 ಕೋಟಿ ರೂಪಾಯಿ ಗಳಿಸುತ್ತಾ ಬಂದಿದೆ. ಈ ಮೂಲಕ ಚಿತ್ರ ಕೇವಲ 15 ದಿನಗಳಲ್ಲಿ 39.05 ಕೋಟಿ ರೂಪಾಯಿ ಗ್ರಾಸ್ ಕಲೆಕ್ಷನ್ ಮಾಡಿದೆ. ಈ ಪೈಕಿ 33.47 ಕೋಟಿ ರೂಪಾಯಿ ನೆಟ್ ಕಲೆಕ್ಷನ್ ಆಗಿದೆ. ಚಿತ್ರ ಸರಿಸುಮಾರು 40 ಕೋಟಿ ರೂಪಾಯಿ ಗಳಿಸಿದ್ದು, ಈ ವಾರಾಂತ್ಯ 50 ಕೋಟಿ ರೂಪಾಯಿಯ ಗಡಿದಾಟೋದು ಬಹುತೇಕ ಪಕ್ಕಾ ಆಗಿದೆ. ಪ್ರೇಕ್ಷಕರ ಸಂಖ್ಯೆ ಪ್ರತಿದಿನ ಹೆಚ್ಚುತ್ತಿದೆ ಅನ್ನೋದಕ್ಕೆ ಶೋಗಳ ಸಂಖ್ಯೆಯೇ ಸಾಕ್ಷಿ. 60 ಶೋಗಳಿಂದ ಆರಂಭವಾದ ಪಯಣ, ನಿನ್ನೆ ಬರೋಬ್ಬರಿ 1,178 ಶೋಗಳಲ್ಲಿ ಪ್ರದರ್ಶನ ಕಾಣೋ ಮೂಲಕ ಸ್ಮಾಲ್ ಬಜೆಟ್ ಚಿತ್ರ ದಾಖಲೆ ಬರೆದಿದೆ.

ಮನೋಜ್ ಕುಮಾರ್ ನಿರ್ದೇಶನದ ಸಿನಿಮಾವನ್ನು ವೆನಿಲ್ಲಾ ಎಂಟರ್‌ಟೈನ್ಮೆಂಟ್ಸ್ ಮತ್ತು ಜಾನಕಮ್ಮ ಪ್ರೊಡಕ್ಷನ್ಸ್ ಬ್ಯಾನರ್‌ಗಳು ನಿರ್ಮಿಸಿವೆ. ಶ್ರೀರಾಮ್, ತಪಸ್ವಿನಿ ಪೂಣಚ್ಚ, ರಮಿಕಾ ಶಿವು ಹಾಗೂ ಹಿರಿಯ, ಜನಪ್ರಿಯ ತಾರೆ ರಂಗಾಯಣ ರಘು ಮುಖ್ಯಭೂಮಿಕೆಯಲ್ಲಿದ್ದಾರೆ. ಉಳಿದಂತೆ ಸುನಾದ್ ಗೌತಮ್ ಸಂಗೀತ, ರಾಜ್‌ಕಾಂತ್ ಎಸ್.ಕೆ ಛಾಯಾಗ್ರಹಣ ಹಾಗೂ ಹರ್ಷಿತ್ ಪ್ರಭು ಅವರ ಸಂಕಲನ ಈ ಸಿನಿಮಾಗಿದೆ.

## ವಾರಾಂತ್ಯದಲ್ಲಿ KBC ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳಲಿದ್ದ ಪಾಟೇಕರ್: ಆದ್ರೆ ವಿಧಿಯಾಟವೇ ಬೇರೆ ಇತ್ತು!

ಜೀವನ ನಿಜಕ್ಕೂ ಊಹಿಸಲಾಗದ್ದು! 'ಕೌನ್ ಬನೇಗಾ ಕರೋಡ್‌ಪತಿ'ಯ ಮರಾಠಿ ಆವೃತ್ತಿಯಾದ, ಮಾಧುರಿ ದೀಕ್ಷಿತ್ ನಿರೂಪಣೆಯ 'ಕೋನ್ ಹೋನಾರ್ ಕರೋಡ್‌ಪತಿ' ಕಾರ್ಯಕ್ರಮದ ಮೊದಲ ಸಂಚಿಕೆಯಲ್ಲಿ ಹಿರಿಯ ನಟ ನಾನಾ ಪಾಟೇಕರ್ ವಿಶೇಷ ಅತಿಥಿಯಾಗಿ ಕಾಣಿಸಿಕೊಳ್ಳಬೇಕಿತ್ತು ಮತ್ತು ಇದಕ್ಕಾಗಿ ಈ ವಾರಾಂತ್ಯದಲ್ಲಿ ಚಿತ್ರೀಕರಣವೂ ನಿಗದಿಯಾಗಿತ್ತು. ಆದರೆ, ವಿಧಿಯಾಟವೇ ಬೇರೆಯಾಗಿತ್ತು. ಗುರುವಾರ ಮುಂಜಾನೆ ಅವರು ನಿಧನರಾಗಿದ್ದು, ಚಿತ್ರರಂಗದಲ್ಲಿ ಶೋಕ ಮನೆ ಮಾಡಿದೆ.

ಹಿರಿಯ ನಟನ ನಿಧನದ ನಂತರ, ಮಾಧುರಿ ದೀಕ್ಷಿತ ಇನ್‌ಸ್ಟಾಗ್ರಾಮ್‌ನಲ್ಲಿ ತಮ್ಮ ಭಾವಪೂರ್ಣ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. "ಓರ್ವ ಶ್ರೇಷ್ಠ ಕಲಾವಿದ, ಪ್ರಭಾವಶಾಲಿ ವ್ಯಕ್ತಿತ್ವ ಮತ್ತು ಮರೆಯಲಾಗದ ಧ್ವನಿ... ನಾನಾ ಪಾಟೇಕರ್ ಅವರ ನಿಧನದಿಂದಾಗಿ ಚಲನಚಿತ್ರರಂಗವು ಒಬ್ಬ ಅಮೂಲ್ಯ ಹಾಗೂ ದಿಗ್ಗಜ ನಟನನ್ನು ಕಳೆದುಕೊಂಡಿದೆ. ಅವರ ಕುಟುಂಬ ಮತ್ತು ಆಪ್ತರಿಗೆ ನನ್ನ ಭಾವಪೂರ್ಣ ಸಂತಾಪಗಳು. ಹೃದಯಪೂರ್ವಕ ಶ್ರದ್ಧಾಂಜಲಿ" ಎಂದು ಬರೆದುಕೊಂಡಿದ್ದಾರೆ.

**ಮಾಧುರಿ ಮತ್ತು ನಾನಾ ಪಾಟೇಕರ್ 1998ರ ವಜೂದ್ ಚಿತ್ರದಲ್ಲಿ ಒಟ್ಟಿಗೆ ಕೆಲಸ ಮಾಡಿದ್ದರು.**

ಇದೀಗ, ಮರಾಠಿಯ 'ಕೋನ್ ಹೋನಾರ್ ಕೋರೋಡ್‌ಪತಿ' ಕಾರ್ಯಕ್ರಮದ ಮೊದಲ ಸಂಚಿಕೆಯಲ್ಲಿ ನಟಿ ಸೋನಾಲಿ ಬೇಂದ್ರೆ 'ಹಾಟ್ ಸೀಟ್' ಅಲಂಕರಿಸಲಿದ್ದಾರೆ.

ಗುರುವಾರ ರಾತ್ರಿ ಪುಣೆಯ ಡಾಂಜೆಯಲ್ಲಿರುವ ಫಾರ್ಮ್‌ಹೌಸ್‌ನಲ್ಲಿ ನಾನಾ ಪಾಟೇಕರ್ ಅವರ ಅಂತ್ಯಕ್ರಿಯೆಯನ್ನು ಸಂಪೂರ್ಣ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು.



ಅಂತಿಮ ವಿಧಿವಿಧಾನಗಳನ್ನು ಪೂರೈಸಿದ ನಂತರ ಅವರ ಪುತ್ರ ಮಲ್ಹಾರ್ ಪಾಟೇಕರ್ ಮಾಧ್ಯಮಗಳೊಂದಿಗೆ ಮಾತನಾಡುತ್ತಾ, "ನಾನಾ ಸಾಹೇಬ್ ಅವರಂತಹ ವ್ಯಕ್ತಿಗಳು ಎಂದಿಗೂ ನಮ್ಮನ್ನು ಸಂಪೂರ್ಣವಾಗಿ ಅಗಲುವುದಿಲ್ಲ. ಅವರ ಸಾಧನೆಗಳು ಅವರನ್ನು ಅಮರರನ್ನಾಗಿಸಿವೆ. ಎರಡನೆಯದಾಗಿ, ಪ್ರತಿಯೊಬ್ಬರೂ ಒಗ್ಗೂಡಿ ಜಾಗತಿಕ ಮಟ್ಟದಲ್ಲಿ ಧರ್ಮಯುತವಾದ ಅಥವಾ ಸನ್ಮಾರ್ಗವನ್ನು ಅನುಸರಿಸಬೇಕು ಎಂದು ಅವರು ಸದಾ ನಂಬಿದ್ದರು. ಮೂರನೆಯದಾಗಿ, ಭವಿಷ್ಯದ ವಿಷಯಕ್ಕೆ ಬಂದರೆ, ನಾನಾ ಸಾಹೇಬ್ ಅವರು ಬಿಟ್ಟುಹೋದ ದೃಷ್ಟಿಕೋನವನ್ನು ಮುಂದುವರಿಸಿಕೊಂಡು ಹೋಗುವುದೇ ನಾವು ಮುಂದಿನ ಜೀವನವನ್ನು ರೂಪಿಸಿಕೊಳ್ಳುವ ವಿಧಾನವಾಗಿದೆ" ಎಂದು ತಿಳಿಸಿದರು.

ನಾನಾ ಪಾಟೇಕರ್ 1978ರ ಚಿತ್ರ 'ಗಮನ್' ಮೂಲಕ ತಮ್ಮ ನಟನಾ ವೃತ್ತಿಯನ್ನು ಪ್ರಾರಂಭಿಸಿದರು. ನಂತರ 'ಪರಿಂದಾ', 'ಪ್ರಹಾರ್', 'ಅಂಗಾರ್', 'ಕ್ರಾಂತಿವೀರ್', 'ತಿರಂಗಾ', 'ಖಾಮೋಶಿ' ಮತ್ತು 'ಅಬ್ ತಕ್ ಛಪ್ಪನ್' ಸೇರಿ ಮುಂತಾದ ಚಲನಚಿತ್ರಗಳಲ್ಲಿ ಮೆಚ್ಚುಗೆಯ ಅಭಿನಯವನ್ನು ನೀಡಿದರು. ಇತ್ತೀಚೆಗೆ ಅಕ್ಷಯ್ ಕುಮಾರ್, ಅಭಿಷೇಕ್ ಬಚ್ಚನ್, ರಿತೇಶ್ ದೇಶ್‌ಮುಖ್ ಮತ್ತು ಇತರರೊಂದಿಗೆ 'ಹೌಸ್‌ಫುಲ್ 5' ಚಿತ್ರದಲ್ಲಿ ಕಾಣಿಸಿಕೊಂಡಿದ್ದರು. ಶಾಹಿದ್ ಕಪೂರ್ ಮತ್ತು ತೃಪ್ತಿ ಡಿಮ್ರಿ ನಟಿಸಿರುವ ವಿಶಾಲ್ ಭಾರದ್ವಾಜ್ ಅವರ 'ಓ ರೋಮಿಯೋ' ಚಿತ್ರದಲ್ಲಿ ಅವರು ಪೊಲೀಸ್ ಅಧಿಕಾರಿಯ ಪಾತ್ರವನ್ನೂ ನಿರ್ವಹಿಸಿದ್ದರು. ಇದಲ್ಲದೇ, ಅನಿಲ್ ಕಪೂರ್ ಮತ್ತು ರಾಧಿಕಾ ಮದನ್ ಅಭಿನಯದ 'ಸುಬೇದಾರ್' ಚಿತ್ರದಲ್ಲಿಯೂ ಅವರು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news